ಕರ್ನಾಟಕ ಸರ್ಕಾರ

# ಸಫಲ

## ಅಕಾಡೆಮಿಯ ಮೂರು ವರ್ಷಗಳ ಕಾರ್ಯಚಟುವಟಿಕೆಗಳ ಪಕ್ಷಿನೋಟ

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ.
ಮಡಿಕೇರಿ, ಕೊಡಗು ಜಿಲ್ಲೆ - 571 201

# 'SAFALA'

Programe details
organised by the
Karnataka Arebase Samskrithi
Mathu Sahitya Accademy
during the period
August 2014 to August 2017

Published by
'Karnataka Arebhase Samskrithi
Mathu Sahitya Academy, Madikeri

ಪ್ರಕಟಣೆ : 2018

ಪ್ರತಿಗಳು : 150

ಪುಟಗಳು : 76 + 4

® ಎಲ್ಲಾ ಹಕ್ಕನ್ನು ಕಾಯ್ದಿರಿಸಲಾಗಿದೆ.

ಆಡಳಿತಮಂಡಳಿ :

ಶ್ರೀ ಕೊಲ್ಯದ ಗಿರೀಶ್, ಅಧ್ಯಕ್ಷರು
ಶ್ರೀ ಉಮರಬ್ಬ, ರಿಜಿಸ್ಟ್ರಾರ್
ಡಾ. ಪೂವಪ್ಪ ಕಣಿಯೂರು,
ಡಾ. ಕೋರನ ಸರಸ್ವತಿ ಪ್ರಕಾಶ್,
ಶ್ರೀ ಮೋಹನ್ ಸೋನ,
ಶ್ರೀಮತಿ ಸಂಗೀತ ರವಿರಾಜ್,
ಶ್ರೀ ಮಂದ್ರೀರ ಜಿ. ಮೋಹನ್‌ದಾಸ್,
ಶ್ರೀ ಯಶವಂತ ಕುಡೆಕಲ್ಲು,
ಶ್ರೀ ಬಿ.ಸಿ. ವಸಂತ
ಶ್ರೀ ಸದಾನಂದ ಮಾವಜಿ
ಶ್ರೀ ಕುಡೆಕಲ್ಲು ಸಂತೋಷ್,
ಶ್ರೀ ಪಿ. ಎಸ್. ಕಾರ್ಯಪ್ಪ,
ಶ್ರೀ ಅಣ್ಣಾಜಿ ಗೌಡ ಪೈಲೂರು

ಪ್ರಕಾಶಕರು : ರಿಜಿಸ್ಟ್ರಾರ್
ಕರ್ನಾಟಕ ಅರೆಭಾಷೆ ಸಂಸ್ಕೃತಿ
ಮತ್ತು ಸಾಹಿತ್ಯ ಅಕಾಡೆಮಿ.

ಪುಸ್ತಕ ದೊರೆಯುವ ಸ್ಥಳ :

ಕರ್ನಾಟಕ ಅರೆಭಾಷೆ ಸಂಸ್ಕೃತಿ
ಮತ್ತು ಸಾಹಿತ್ಯ ಅಕಾಡೆಮಿ,
ಕಾಫಿ ಕೃಪ ಬಿಲ್ಡಿಂಗ್,
ಮಹಾತ್ಮ ಗಾಂಧಿ ರಸ್ತೆ, ಮಡಿಕೇರಿ.
ದೂ. : 08272-223055

ಮುದ್ರಣ :

ಶ್ರೀ ಕೃಷ್ಣ ಕಂಪ್ಯೂಟರ್ಸ್ & ಪ್ರಿಂಟರ್ಸ್,
ಮಡಿಕೇರಿ, ಕೊಡಗು
Ph: 08272-224919, 9448135592



ಕೊಲ್ಯದ ಗಿರೀಶ್
ಅಧ್ಯಕ್ಷರು




ಉಮರಬ್ಬ
ರಿಜಿಸ್ಟ್ರಾರ್



ಡಾ. ಪೂವಪ್ಪ ಕಣಿಯೂರು
ಸದಸ್ಯರು



ಡಾ. ಕೋರನ ಸರಸ್ವತಿ ಪ್ರಕಾಶ್
ಸದಸ್ಯರು




ಮೋಹನ್‌ಸೋನ
ಸದಸ್ಯರು



ಸಂಗೀತ ರವಿರಾಜ್
ಸದಸ್ಯರು



ಮಂದ್ರೀರ ಜಿ. ಮೋಹನ್‌ದಾಸ್
ಸದಸ್ಯರು



ಯಶವಂತ ಕುಡೆಕಲ್
ಸದಸ್ಯರು



ಬಿ.ಸಿ. ವಸಂತ
ಸದಸ್ಯರು



ಸದಾನಂದ ಮಾವಾಜಿ
ಸದಸ್ಯರು



ಮದುವೆಗದ್ದೆ ಬೋಜಪ್ಪ ಗೌಡ
ಸದಸ್ಯರು



ಕುಡೆಕಲ್ ಸಂತೋಷ್
ಸದಸ್ಯರು



ಕಾರ್ಯಪ್ಪ ಪಿ.ಎಸ್.
ಸದಸ್ಯರು



ಅಣ್ಣಾಜಿ ಗೌಡ
ಸದಸ್ಯರು

## ಸಿಬ್ಬಂದಿವರ್ಗ



ಜ್ಯೋತಿ



ಮಾನಸ



ಶೋಭ

# ಅಧ್ಯಕ್ಷರ ಮಾತು




ಸರ್ವರಿಗೂ ಆತ್ಮೀಯವಾದ ನಮಸ್ಕಾರಗಳು.

2014 ಆಗಸ್ಟ್ 13 ರಿಂದ ಆರಂಭವಾದ ಈ ಅಕಾಡೆಮಿ ಮೂರು ವರ್ಷಗಳನ್ನು ಪೂರೈಸಿದೆ. ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಅಧ್ಯಕ್ಷನಾಗಿ ನನ್ನ ಜವಬ್ದಾರಿಯನ್ನು ಯಶಸ್ವಿಯಾಗಿ ನೆರವೇರಿಸಿದ ಸಂತೃಪ್ತಿಯಿಂದ ನಿರ್ಗಮಿಸುತ್ತಿದ್ದೇನೆ.

ಅರೆಭಾಷೆ, ಸಂಸ್ಕೃತಿ ಮತ್ತು ಸಾಹಿತ್ಯ, ಅರೆಭಾಷೆ ಹಾಗೂ ಅರೆಭಾಷೆ ಜನಪದ ಎಂಬ ಧ್ಯೇಯ ವಾಕ್ಯದೊಡನೆ ನಮ್ಮ ಸಮಿತಿಯು ಮೂರು ವರ್ಷಗಳಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡಿದೆ. ಈ ಸ್ಮರಣಿಕೆಯಲ್ಲಿ ನಮ್ಮ ಕಾರ್ಯಚಟುವಟಿಕೆಗಳ ಸಂಪೂರ್ಣ ಮಾಹಿತಿ ದಾಖಲಿಸಿದ್ದೇವೆ. ಎಲ್ಲರಿಗೂ ನಮ್ಮ ಕೆಲಸಗಳ ಮಾಹಿತಿ ಸಿಗುವಂತಾಗಲು ಈ ಪುಸ್ತಕವನ್ನು ರಾಜ್ಯ ಭಾಷೆ ಕನ್ನಡದಲ್ಲಿ ಪ್ರಕಟಿಸಿದ್ದೇವೆ.

ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಸೇವೆ ಮಾಡಲು ನನ್ನ ಮೇಲೆ ಭರವಸೆ ಇಟ್ಟು ಅವಕಾಶ ನೀಡಿದ ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವೆ ಶ್ರೀಮತಿ ಉಮಾಶ್ರೀ, ಮಾಜಿ ಮುಖ್ಯ ಮಂತ್ರಿ ಹಾಗೂ ಕೇಂದ್ರ ಸಚಿವರಾದ ಸನ್ಮಾನ್ಯ ಶ್ರೀ ಸದಾನಂದ ಗೌಡ, ಶ್ರೀ ದಿನೇಶ್ ಗುಂಡೂರಾವ್, ಶ್ರೀ ಕೆ.ಜೆ ಜಾರ್ಜ್, ಶ್ರೀ ಎಂ.ಆರ್.ಸೀತಾರಾಂ. ಅಕಾಡೆಮಿ ಕೆಲಸಗಳಲ್ಲಿ ಸಹಕರಿಸಿದ ಸಚಿವರಾದ ಶ್ರೀ ರಮಾನಾಥ ರೈ, ಶ್ರೀ ಎಂ.ಕೃಷ್ಣಪ್ಪ, ಶ್ರೀ ಶಾಸಕರಾದ ಶ್ರೀ ವಾಸು, ಶ್ರೀ ಕೆ.ಜಿ.ಬೋಪಯ್ಯ, ಶ್ರೀಮತಿ ವೀಣಾ ಅಚ್ಚಯ್ಯ, ಶ್ರೀ ಅಪ್ಪಚ್ಚುರಂಜನ್, ಶ್ರೀ ಸುನೀಲ್ ಸುಬ್ರಮಣಿ. ಮಾರ್ಗದರ್ಶನ ನೀಡಿದ ಇಲಾಖೆ ನಿರ್ದೇಶಕರಾದ ಶ್ರೀ ಕೆ.ಎ.ದಯಾನಂದ ಇವರೆಲ್ಲರಿಗೂ ಆಭಾರಿಯಾಗಿದ್ದೇನೆ.

ಹಾಗೂ ಅರೆಭಾಷೆ ಅಕಾಡೆಮಿಯ ಈ ಚಳುವಳಿಯಲ್ಲಿ ನಾವಿದ್ದು ನಮ್ಮ ಅಸ್ತಿತ್ವ ಇರಲು ಸಹಕರಿಸಿದ ಈ ಮೂರು ವರ್ಷಗಳನ್ನು ಅತೀ ಉಪಯುಕ್ತವಾಗಿ ಕಳೆಯಲು ಸಹಕರಿಸಿದ ಅರೆಭಾಷಿಕರನ್ನು, ಸಂಘ–ಸಂಸ್ಥೆಗಳ ಸದಸ್ಯರನ್ನು, ಅಕಾಡೆಮಿ ಸದಸ್ಯರನ್ನು ಹಾಗೂ ರಿಜಿಸ್ಟ್ರಾರ್‌ರವರನ್ನು ಹೃತ್ಪೂರ್ವಕವಾಗಿ ನೆನೆಯುತ್ತ ಧನ್ಯವಾದಗಳನ್ನು ಸಲ್ಲಿಸುತ್ತಿದ್ದೇನೆ.

ಈ ಸಂಚಿಕೆಯನ್ನು ಅಚ್ಚುಕಟ್ಟಾಗಿ ಹೊರತರಲು ಶ್ರಮಿಸಿದ ಅಕಾಡೆಮಿ ಸದಸ್ಯರಾದ ಡಾ. ಕೋರನ ಸರಸ್ವತಿ ಪ್ರಕಾಶ್, ಶ್ರೀ ಮಂದ್ರೀರ ಮೋಹನ್‌ದಾಸ್, ಸಹಕರಿಸಿದ ಶ್ರೀ ಬಾರಿಯಂಡ ಜೋಯಪ್ಪ, ಶ್ರೀಮತಿ ಕಡ್ಲೇರ ತುಳಸಿ ಮೋಹನ್, ಪ್ರದೀಪ್, ಸಿಬ್ಬಂದಿಗಳಾದ ಶ್ರೀಮತಿ ಜ್ಯೋತಿ, ಕು. ಮಾನಸ, ಶ್ರೀಮತಿ ಶೋಭ ಹಾಗೂ ಅಂದವಾಗಿ ಮುದ್ರಿಸಿಕೊಟ್ಟ ಶ್ರೀ ಕೃಷ್ಣ ಪ್ರಿಂಟರ್ಸ್ ರವರಿಗೂ ವಂದನೆಗಳನ್ನು ಸಲ್ಲಿಸುತ್ತಿದ್ದೇನೆ.

**ಕೊಲ್ಯದ ಗಿರೀಶ್**

ಅಧ್ಯಕ್ಷರು

# ರಿಜಿಸ್ಟ್ರಾರ್ ಮನದಾಳದ ಮಾತು



**"ಮನುಷ್ಯನಿಗೆ ಜಾತಿ ಅನಿವಾರ್ಯವಾದ ಸಂಗತಿಯಲ್ಲ"** ಜಾತ್ಯಾತೀತ ಪ್ರಜಾ ಪ್ರಭುತ್ವದಲ್ಲಿ ನಂಬಿಕೆಯಿಟ್ಟ ನಮಗೆ ಜಾತಿ ವ್ಯಸನ ಮತ್ತೆ ಮತ್ತೆ ಕಾಡುತ್ತಿರುವುದು ನಿಜಕ್ಕೂ ವಿಷಾದದ ಸಂಗತಿ. ಜಾತಿ ಯಾಕೆ ಅನಿವಾರ್ಯವಾಗಬೇಕು? ಜಾತ್ಯಾತೀತವಾಗಿ ಬದುಕಲೂ ಸಾಧ್ಯವಿಲ್ಲ.... ನನ್ನ ಧರ್ಮ, ಪುರಾಣ, ವೇದ, ಸಿದ್ಧಾಂತಗಳು ಸಾಹಿತ್ಯ ಸಂಸ್ಕೃತಿಗಳು, ಜಾತಿ ಅನಿವಾರ್ಯತೆಯನ್ನು ನಮ್ಮ ಮನಸ್ಸಿನಲ್ಲಿ ಅಚ್ಚಳಿಯದಂತೆ ಮೂಡಿಸಿದೆ. ನಮಗೆ ಜಾತಿಗಿಂತ ಮಾನವೀಯತೆ, ಗುಣ ಸಂಸ್ಕಾರ ಮುಖ್ಯವಾಗಬೇಕು.

ಕರ್ನಾಟಕ ಸರಕಾರವು ಇವೆಲ್ಲವನ್ನು ಸರಿ ಸಮಾನವಾಗಿ ಭಾಷೆ, ಆಚಾರ,ವಿಚಾರಗಳೊಂದಿಗೆ ಸುಸಂಸ್ಕೃತಿ ಆಲೋಚನೆ ಮೂಡಲು ಭಾಷೆಯನ್ನು ಪ್ರಧಾನವಾಗಿರಿಸಿ ನಮ್ಮ ವ್ಯವಸ್ಥೆಯನ್ನು ಸುದಾರಿಸುವಲ್ಲಿ ಕ್ರಮ ಕೈಗೊಂಡಿರುವುದು ಅತ್ಯಂತ ಸಂತೋಷದ ಸಂಗತಿಯಾಗಿದೆ.

ಸರಕಾರದ ಪ್ರತಿಯೊಂದು ಚಿಂತನೆಯು **"ಕಾಶಿ-ಕಮ್ಮಾರನಾದ ಬೀಸಿ ಮಡಿವಾಳನಾದ ಹಾಸನಿಕ್ಕಿ ಅಕ್ಕಸಾಲಿಗನಾದ ವೇದವನೋದಿ ಹಾರುವವನಾದ ಕರ್ಣದಲ್ಲಿ ಜನಿಸಿರುವವರುಂಟೆ ಜಗದೊಳಗೆ"** ಇದು ಕೂಡಲ ಸಂಗಮದೇವ ಹೇಳಿದ ಮಾತಾದರೂ ಅಕ್ಷರಶ: ಪಾಲಿಸುವಲ್ಲಿ ಕನ್ನಡ ಸಂಸ್ಕೃತಿ ಇಲಾಖೆಯ ಆಯಾ ಆಯಾ ಭಾಷೆಯ ಸಂಸ್ಕೃತಿಯನ್ನು ಉಳಿಸಿ ಬೆಳೆಸುವಲ್ಲಿ ನಿರ್ದಿಷ್ಟ ಅನುದಾನವನ್ನು ನೀಡುವುದರೊಂದಿಗೆ ಚಿಂತನ ಶೀಲಾ ಅಧ್ಯಕ್ಷರು ಹಾಗೂ ಸದಸ್ಯರನ್ನೊಳಗೊಂಡ ತಂಡವನ್ನು ಆಯ್ಕೆ ಮಾಡಿ ಮುಂದಿನ ತಲೆಮಾರಿಗೆ ಭಾಷೆಯು ಸಂಸ್ಕೃತಿಯು ವೈಭವವನ್ನು ಪ್ರಚಾರ ಅಭಿವೃದ್ಧಿಪಡಿಸಲು ನಾಂದಿಯ ಮೈಲುಗಲ್ಲೆ **"ಅಕಾಡೆಮಿ"**

ಕರ್ನಾಟಕ ಅರೆಭಾಷೆ ಅಕಾಡೆಮಿ ಕಳೆದ 5 ವರುಷಗಳ ಹಿಂದೆ ಅಧಿಕೃತವಾಗಿ ಪ್ರಾರಂಭಗೊಂಡದ್ದು ಹಲವಾರು ಎಡರು-ತೊಡರುಗಳನ್ನು ಎದುರಿಸಬೇಕಾಗಿ ಬಂದರೂ ಬಾಕಿ ದಿನಗಳಲ್ಲಿ ಉತ್ತಮ ಕಾರ್ಯಕ್ರಮಗಳನ್ನು ಆಯೋಜಿಸುವುದರ ಮುಖಾಂತರ ಎಲ್ಲವರ ಗಮನ ಸೆಳೆದಿರುವುದು ಸಂತೋಷದ ವಿಚಾರವಾಗಿದೆ. ಆದರೆ ಇದೀಗ 3 ವರ್ಷಗಳಿಂದೀಚೆಗೆ ಅರೆಭಾಷೆಯು ವೈಭವಯುಕ್ತ ಸಂಸ್ಕೃತಿಯನ್ನು ಹಳ್ಳಿಯಿಂದ ದಿಲ್ಲಿಯವರೆಗೆ ಕರ್ನಾಟಕದ ಮೂಲೆ ಮೂಲೆಗಳಿಗೆ ಸಂಸ್ಕೃತಿಯ ನಿನಾದವನ್ನು ಮುಟ್ಟಿಸುವಲ್ಲಿ ಉತ್ತಮ ಸೇವೆಯನ್ನು ಮಾಡಿರುತ್ತದೆ. ಅಕಾಡೆಮಿ ಮುಂದೆ ಹೆಜ್ಜೆಯನ್ನು ಇಡುತ್ತಿರುವಾಗ ಇದರ ಅಭಿವೃದ್ಧಿಗಾಗಿ ಸಹಕರಿಸಿದ ತಮ್ಮ ಅತ್ಯಮೂಲ್ಯ ಸೇವೆಯನ್ನು ಸಲ್ಲಿಸಿದ ಪ್ರಥಮ ಅಧ್ಯಕ್ಷರಾದ ದೇವಿಪ್ರಸಾದ್ ರವರು ಮತ್ತು ಸದಸ್ಯರು ಅಂತೆಯೇ ಅಧ್ಯಕ್ಷರಾದ ಶ್ರೀ ಕೊಲ್ಯದ ಗಿರೀಶ್ ಮತ್ತು ಸದಸ್ಯರು ಇಟ್ಟ ಹೆಜ್ಜೆಯು ಅತ್ಯದ್ಭುತವಾದ ಮೈಲುಗಲ್ಲಾಗಿದೆ.

ಮುಂದೆ ಅರೆಭಾಷೆಯ ಕವನ, ಲೇಖನ, ಕತೆ, ನಾಟಕ, ಅಧ್ಯಯನ ಸಲುವಾಗಿ ಕಲಾವಿದರಲ್ಲಿ ಹುದುಗಿರುವ ಪ್ರತಿಭೆಯನ್ನು ಹೊರತರುವ ತ್ರೈಮಾಸಿಕ ಭಿತ್ತಿ ಪತ್ರಿಕೆ **"ಹಿಂಗಾರ"**ದ ಸೇವೆಯನ್ನು ಮರೆಯುವಂತಿಲ್ಲ ಹಾಗೇ ಆಡಳಿತ ವಿಭಾಗವನ್ನು ತೆಗೆದುಕೊಂಡಾಗ ಶ್ರೀಮತಿ ಪಿ.ಸಿ.ಜ್ಯೋತಿ, ಕುಮಾರಿ ಮಾನಸ ಸಿ.ಯನ್, ಶ್ರೀಮತಿ ಶೋಭ ಇವರ ಸೇವೆ ಅಕಾಡೆಮಿಯ ಕಛೇರಿ ನಿರ್ವಹಣೆ ಯೊಂದಿಗೆ ಕಾರ್ಯಕ್ರಮಗಳು ಸಮಾಲೋಚಿತ ಕಾರ್ಯ ಕ್ರಮಗಳಿಗೆ ತಮ್ಮನ್ನು ತೊಡಗಿಸಿಕೊಂಡ ಫಲವಾಗಿ ಅಕಾಡೆಮಿ 16 ಪ್ರಕಾರಗಳಲ್ಲಿ ಪುಸ್ತಕ ಪ್ರಕಟಣೆ , ಸಿ.ಡಿ. ಬಿಡುಗಡೆ ಮುಂತಾದ ಕಾರ್ಯಕ್ರಮಗಳನ್ನು ಯಶಸ್ವಿಯಗಿ ನಡೆಸಲು ಸಾಧ್ಯವಾಗಿದೆ.

ಘನ ಸರಕಾರದ ಅನುದಾನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರೂ ಮುಖ್ಯ ಕಾರ್ಯದರ್ಶಿ ಗಳು, ನಿರ್ದೇಶಕರು, ಜಂಟಿ ನಿರ್ದೇಶಕರು ಹಾಗೂ ಸಹಾಯಕ ನಿರ್ದೇಶಕರುಗಳ ಸಮಯೋಚಿತ ಮಾರ್ಗ ದರ್ಶನ ಸಲಹೆಗಳ ಫಲವಾಗಿಯೇ ಅಕಾಡೆಮಿ ಕ್ರಿಯಾ ಯೋಜನೆಯಂತೆ ಯಶಸ್ವಿಯಗಿ 3 ವರ್ಷ ಪೂರೈಸಿದ ಫಲವಾಗಿ ಮುಂದಿನ ತಲೆಮಾರಿಗೆ ನೀಡುವ ಅಹರ್ನಿಸಿ ಕೊಡುಗೆಯೆ ಈ **"ಸಫಲ"** ಸಹಕರಿಸಿದ ಎಲ್ಲರನ್ನು ಅತ್ಯಧ್ಭುತವಾಗಿ ನೆನಪಿಸುವದರೊಂದಿಗೆ ಸಂಸ್ಕೃತಿಯ ಉಳಿವಿಗಾಗಿ ತಮ್ಮ ಕೈಲಾದ ಸೇವೆಯನ್ನು ಮಾಡುವ .

**ಉಮರಬ್ಬ**
ರಿಜಿಸ್ಟ್ರಾರ್
ಕರ್ನಾಟಕ ಅರೆಭಾಷೆ ಸಂಸ್ಕೃತಿ
ಮತ್ತು ಸಾಹಿತ್ಯ ಅಕಾಡೆಮಿ
ಮಡಿಕೇರಿ.

# ಪರಿವಿಡಿ


ಅಧ್ಯಕ್ಷರ ನುಡಿ 1
ರಿಜಿಸ್ಟ್ರಾರ್ ನುಡಿ 2
ಅರೆಭಾಷಿಕರ ಕಿರು ಪರಿಚಯ 4
ಅರೆಭಾಷೆ ಅಕಾಡೆಮಿಯ ಸ್ಥಾಪನೆ 5
ಅರೆಭಾಷೆ ಅಕಾಡೆಮಿಯ ಅಂಗರಚನೆ 6
ಅಕಾಡಮಿ ಕಾರ್ಯಕ್ರಮಗಳ ವಿವರ 7
ನೂತನ ಅಧ್ಯಕ್ಷರ ಪದಗ್ರಹಣ ಮತ್ತು ವಿದ್ವಾಂಸರ ವಿಚಾರಸಂಕಿರಣ 12
ಐನ್‌ಮನೆ ಸಂಸ್ಕೃತಿ ಜಂಬರ 14
ವೆಬ್‌ಸೈಟ್ ಲೋಕಾರ್ಪಣೆ 16
ಕುಶಾಲನಗರದಲ್ಲಿ ಸಾಂಸ್ಕೃತಿಕ ಸಮ್ಮಿಲನ 17
ರಾಜ್ಯ ರಾಜದಾನಿಯಲ್ಲಿ ಸಾಂಸ್ಕೃತಿಕ ಸಮಾವೇಶ 18
ಚಿತ್ರಕಲಾ ಶಿಬಿರ 20
ಸಂಗಮ–ಸಂಭ್ರಮ 22
ಆಟಿ ಹಬ್ಬ 23
ಪುತ್ತೂರಿನಲ್ಲಿ ಸಾಂಸ್ಕೃತಿಕ ಸಮಾವೇಶ 29
ಚೇರಂಬಾಣೆಯಲ್ಲಿ ಸಾಂಸ್ಕೃತಿಕ ವೈಭವ 31
ಸ್ವಾತಂತ್ರ್ಯ ಹೋರಾಟಗಾರ ಸುಬೇದಾರ್‌ಗುಡ್ಡೆಮನೆ ಅಪ್ಪಯ್ಯಗೌಡರ ಹುತಾತ್ಮ ದಿನಾಚರಣೆ 34
ಹೊರ ರಾಜ್ಯದಲ್ಲಿ ಸಾಂಸ್ಕೃತಿಕ ಸಂಗಮ – ದೆಹಲಿ 38
ಗೌರವ ಪ್ರಶಸ್ತಿಗಳು ಮತ್ತು ದಶ ಕೃತಿಗಳ ಬಿಡುಗಡೆ 41
ಸಾಂಸ್ಕೃತಿಕ ನಗರದಲ್ಲಿ ಅರೆಭಾಷೆ ಐಸಿರಿ ಜಂಬರ 46
ಹಿಂಗಾರ – ಅಕಾಡೆಮಿಯ ಬಂಗಾರ 49
ಕೆಸರುಗದ್ದೆ ಕ್ರೀಡೋತ್ಸವ ಮತ್ತು ಸಾಂಪ್ರದಾಯಿಕ ನಾಟಿ ಓಟ 50
ಹುತ್ತರಿ 52
ಪುಸ್ತಕಗಳ ಬಿಡುಗಡೆ ಮತ್ತು ಸಿ.ಡಿ. ಬಿಡುಗಡೆ 54
ಸುಬ್ರಮಣ್ಯದಲ್ಲಿ ಯುವ ಅರೆಭಾಷೆ ಸಾಹಿತ್ಯ ಸಮಾವೇಶ 57
ಅರೆಬಾಸೆ ಸಂಸ್ಕೃತಿಲಿ ಸಾಂಪ್ರದಾಯಿಕ ಅಡಿಗೆ ತರಬೇತಿ ಮತ್ತೆ ಪ್ರಾತ್ಯಕ್ಷಿಕೆ 58
ಅರೆಬಾಸೆ ಸಂಸ್ಕೃತಿ ಸಿರಿ ಮತ್ತು ಸಾಹಿತ್ಯ ಸುಗ್ಗಿ ಕೂಡುಕೂಟ–ಚೆಂಬು 62
ಅರೆಭಾಷೆ ಸಾಂಸ್ಕೃತಿಕ ಮತ್ತು ಸಮ್ಮೇಳನ ಗೌಜಿ–2016 64
ಅಕಾಡೆಮಿ ಪತ್ರಿಕಾ ಗೋಷ್ಠಿಗಳು 66
ಗೌಜಿ – 2016 67
"ಕರ್ವಾಲೋ"ಅರೆಭಾಷೆ ನಾಟಕ 70
ಅರೆಬಾಸೆ ಸಂಸ್ಕೃತಿ ಪರಿಪಾಲಕರ ಸಮಾಗಮ–ಮೈಸೂರು 71
ಭಾಷಾ–ಮಾಧ್ಯಮ (ಚಿಂತನ–ಮಂಥನ) 73
ಪತ್ರಿಕಾ ಮಾಧ್ಯಮಗಳೊಂದಿಗೆ ಅಕಾಡೆಮಿ 74
ಛಾಯಾಚಿತ್ರಗಳ ಮೂಲಕ ಸಂಸ್ಕೃತಿಯ ದಾಖಲೀಕರಣ 76

# ಅರೆಭಾಷಿಕರ ಕಿರು ಪರಿಚಯ

ಹತ್ತು ಕುಟುಂಬ ಹದಿನೆಂಟು ಗೋತ್ರಕ್ಕೆ ಸೇರಿದ ಅರೆಭಾಷೆ ಗೌಡರು ಕೃಷ್ಣದೇವರಾಯರ ಕಾಲದಲ್ಲಿ ವಿಜಯನಗರ ಸಾಮ್ರಾಜ್ಯದಲ್ಲಿ ಇದ್ದವರೆಂದು, ತಾಳಿಕೋಟೆ ಯುದ್ಧದ ನಂತರ ವಿಜಯನಗರ ಸಾಮ್ರಾಜ್ಯ ನಶಿಸಿ ಹೋದ ಮೇಲೆ ಇಕ್ಕೇರಿ ಸಂಸ್ಥಾನಕ್ಕೆ ಬಂದು ನೆಲೆಸಿದ್ದಾರೆಂದು, ಅನಂತರ ಇಕ್ಕೇರಿ ನಾಯಕರು ದಕ್ಷಿಣ ಕನ್ನಡ ಜಿಲ್ಲೆಯ ರಾಜರಾದ ಮೇಲೆ ಭತ್ತದ ಗದ್ದೆ ತೋಟದ ವ್ಯವಸಾಯ ಕೃಷಿಗಳಲ್ಲಿ ನಿಪುಣರಾದ ಅರೆಭಾಷಿಕರನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಕರೆತಂದರೆಂದು ಚರಿತ್ರೆಯಿಂದ ತಿಳಿದು ಬರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದ್ದ ಅರೆಭಾಷಿಕರು ಕೊಡಗಿಗೆ ಬಂದು ನೆಲೆನಿಲ್ಲಲು ಕಾರಣರಾದವರು ಹಾಲೇರಿ ಅರಸರಲ್ಲಿ ಪ್ರಮುಖರಾದ ದೊಡ್ಡವೀರರಾಜೇಂದ್ರರು. ಅಮರ ಸುಳ್ಯಮಾಗಣೆ ದೊಡ್ಡವೀರರಾಜೇಂದ್ರರು ವಶ ಪಡಿಸಿಕೊಂಡ ನಂತರ ಅರೆಭಾಷಿಕರನ್ನು ಕೊಡಗಿಗೆ ಕರೆತಂದು, ಭೂಮಿಯನ್ನು ಜಮ್ಮ ಮತ್ತು ಉಂಬಳಿಯಾಗಿ ಕೊಟ್ಟರು. ಕ್ರಮೇಣ ಅರೆಭಾಷಿಕರು ಭತ್ತದ ಕೃಷಿಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು.

ಅರೆಭಾಷಿಕರಿಗೆ ಕುಲಗುರು ಶೃಂಗೇರಿ ಜಗದ್ಗುರುಗಳು. ಶೃಂಗೇರಿ ಗುರುಗಳಿಗೆ ಗುರುಕಾಣಿಕೆ ಕೊಡುವ ಕ್ರಮ ಇದ್ದು, ಈ ಗುರುಕಾಣಿಕೆಯನ್ನು ನೀಡಿ, ಗುರುಗಳಿಂದ ಆಶೀರ್ವಾದ ಪಡೆದು ಶುಭ ಕಾರ್ಯಗಳನ್ನು ಪ್ರಾರಂಭಿಸುವರು. ವೆಂಕಟರಮಣ ಇವರ ಕುಲದೇವರು. ಅರೆಭಾಷಿಕರಿಗೆ ಅವರದೇ ಆದ ಸಂಸ್ಕೃತಿ ಇದ್ದು, ಇವರು ಮಾತಾಡುವ ಭಾಷೆಯನ್ನು ಅರೆಭಾಸೆ ಎಂಬುದಾಗಿ ಕರೆಯುತ್ತಾರೆ. ಅವರ ಈ ಮಾತು ಶಾಲಾ ಕಾಲೇಜು, ವ್ಯಾಪಾರ ಮತ್ತು ಸರಕಾರದ ವ್ಯವಹಾರಗಳಲ್ಲಿ ಬಳಸುವ ಕನ್ನಡ ಭಾಷೆಕ್ಕಿಂತ ವಿಶಿಷ್ಟವಾದದ್ದು. ಕನ್ನಡದಲ್ಲಿರುವ ಭಾಷೆ ಮತ್ತು ಉಪಭಾಷೆಗಳಲ್ಲಿ ಇದು ಒಂದು. ಇದರ ಪ್ರಾಚೀನತೆಗೆ ನಿಖರವಾದ ಹೇಳಿಕೆ ಆಧಾರ ಇಲ್ಲದಿದ್ದರು, ಇದು ಉತ್ತರ ದ್ರಾವಿಡ ಭಾಷೆಗಳ ಗುಂಪಿಗೆ ಸೇರಿದ ಬ್ರಾಹುಯಿ ಭಾಷೆ ನಂತರದ ಸ್ಥಾನ ಪಡೆಯುತ್ತದೆ ಎಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ.

ಕೃಷಿ ಪ್ರಧಾನವಾದ ಅರೆಭಾಷೆಕರಿಗೆ ನೇಗಿಲು ಹೆಗ್ಗುರುತಾದರೂ ಕೊಡಗಿನಲ್ಲಿ ಅರೆಭಾಷಿಕರು ಒಡಿಕತ್ತಿ, ಕೋವಿ ಮತ್ತು ವೆಂಕಟರಮಣ ಸ್ವಾಮಿಯ ಗುರುತನ್ನು ಚಿಹ್ನೆಯಾಗಿ ಹೊಂದಿರುತ್ತಾರೆ. ಕೊಡಗಿನ ದೊಡ್ಡ ವೀರರಾಜೇಂದ್ರರು ಅರೆಭಾಷೆಕರಿಗೆ ಜಮ್ಮಾ, ಉಂಬಳಿ, ಒಡಿಕತ್ತಿ ಮತ್ತು ಕೋವಿಯನ್ನು ಕೊಟ್ಟು ಇನ್ನು ಮುಂದೆ ರಾಜರ ಆಸ್ಥಾನಕ್ಕೆ ಬರುವಾಗ ರಾಜ ಮರ್ಯಾದೆ ಉಡುಪಾದ ಬಿಳಿ ಕುಪ್ಪಸ ಸೊಂಟಕ್ಕೆ, ಕೆಂಪು ದಟ್ಟಿ ಮತ್ತು ತಲೆಗೆ ಪೇಟ ಧರಿಸಿ ಬರಬೇಕೆಂದು ಆದೇಶಿಸಿದ್ದು, ಅನಂತರ ಕೊಡಗಿನ ಅರೆಭಾಷಿಕರು ಇದನ್ನು ತಮ್ಮ ಸಾಂಪ್ರಾದಾಯಿಕ ಉಡುಪಾಗಿ ಧರಿಸುತ್ತಿರುವರು. ಇನ್ನೂ ಅರೆಭಾಷಿಕ ಹೆಣ್ಣುಮಕ್ಕಳು ಗೇಂಟಿಗೆ ಸೀರೆ ಉಟ್ಟು ತಲೆಗೆ ವಸ್ತ್ರ ಮತ್ತು ಜಾಕೇಟನ್ನು ಧರಿಸುತ್ತಾರೆ.

ಅರೆಭಾಷಿಕರು ಪಿತೃಪ್ರಧಾನ ಕುಟುಂಬ ವ್ಯವಸ್ಥೆಗೆ ಒಳಪಟ್ಟಿರುತ್ತಾರೆ. ಈ ಕುಟುಂಬದ ಅತ್ಯಂತ ಹಿರಿಯ ವ್ಯಕ್ತಿಯನ್ನು ಪಟ್ಟೆದಾರ ಎಂದು ಕರೆಯುತ್ತಾರೆ. ಅರೆಭಾಷಿಕರ ಸಂಸ್ಕೃತಿಯ ಮುಖ್ಯ ಅನನ್ಯತೆ ಇರುವುದು ಐನ್‌ಮನೆಗಳಲ್ಲಿ. ಅರೆಭಾಷಿಕರು ತಮ್ಮ ಬದುಕಿನುದ್ದಕ್ಕೂ ಅನೇಕ ಹಬ್ಬ ಹರಿದಿನ ಆಚರಣೆ ಸಂಪ್ರದಾಯವನ್ನು ಆಚರಿಸಿಕೊಂಡು ಬರುತ್ತಾರೆ. ಇವುಗಳಲ್ಲಿ ಹರಿಸೇವೆ, ಭೂತರಾದನೆ, ಹಿರಿಯರಿಗೆ ಎಡೆಹಾಕುವುದು, ಕಿಡ್ಡಸ, ಕೈಲುಪೋದು, ಹುತ್ತರಿ, ಕಾವೇರಿ ಸಂಕ್ರಮಣ ಇವು ಪ್ರಮುಖವಾದವು. ಹಾಗೆಯೇ ಬದುಕಿನ ಪ್ರತಿಯೊಂದು ಬದಲಾವಣೆಗಳಾದ ಹುಟ್ಟು, ನಾಮಕರಣ, ಋತುಶಾಸ್ತ್ರ, ಮದುವೆ, ಸಾವು ಮುಂತಾದವುಗಳನ್ನು ವಿಶೇಷ ಆಚರಣೆಗಳೊಂದಿಗೆ ಗುರುತಿಸಿಕೊಂಡು ತಮ್ಮ ಸಂಸ್ಕೃತಿಯ ಅನನ್ಯತೆಯನ್ನು ಉಳಿಸಿಕೊಂಡು ಬಂದಿರುವರು. ಕೊಡಗು ಮತ್ತು ದಕ್ಷಿಣ ಕನ್ನಡದಲ್ಲಿ ಉಳಿದ ಎಲ್ಲಾ ಸಮುದಾಯಗಳೊಂದಿಗೆ ಸಹಬಾಳ್ವೆಯಿಂದ ಬಾಳುತ್ತಿರುವ ಈ ಸಮುದಾಯ ಒಂದು ಪ್ರಬಲ ಸಮುದಾಯವಾಗಿ ಗುರುತಿಸಿಕೊಂಡಿದೆ.

# ಅರೆಭಾಷೆ ಅಕಾಡಮಿಯ ಸ್ಥಾಪನೆ

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ಸ್ಥಾಪನೆ ಬಗ್ಗೆ
**ಓದಲಾಗಿದೆ:** ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ವೇದಿಕೆ ಇವರ ದಿನಾಂಕ 10.8.2011ರ ಪತ್ರ

**ಪ್ರಸ್ತಾವನೆ:**

ಕರ್ನಾಟಕ ರಾಜ್ಯದ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಹಾಗೂ ಕೇರಳ ರಾಜ್ಯದ ಕೆಲವು ಪ್ರದೇಶಗಳಲ್ಲಿ ನೂರಾರು ವರ್ಷಗಳಿಂದ ವಾಸಿಸುತ್ತಿರುವ ಹಿಂದಿನಿಂದಲೇ ಬಹುಸಂಖ್ಯಾತ ಜನರ ಹತ್ತು ಕುಟುಂಬ ಹದಿನೆಂಟು ಗೋತ್ರಕ್ಕೆ ಒಳಪಟ್ಟ ಗೌಡಜನಾಂಗದವರ ಮಾತೃಭಾಷೆ ಅರೆಭಾಷೆ ಆಗಿದೆ. ಈ ಭಾಷೆಯನ್ನು ಮಾತನಾಡುವ ಜನರು ಇಂದು ಈ ಎರಡು ಜಿಲ್ಲೆಗಳು ಮತ್ತು ಅದರ ಅಕ್ಕ ಪಕ್ಕಗಳಲ್ಲದೆ ಮೈಸೂರು, ಬೆಂಗಳೂರು, ಮುಂಬಯಿ, ದೆಹಲಿ ಹಾಗೂ ಇಲ್ಲಿಂದ ವಲಸೆ ಹೋದ ಜನರು ಮಧ್ಯಪ್ರಾಚ್ಯ, ಅಮೇರಿಕ ಮುಂತಾದ ದೇಶಗಳಲ್ಲೂ ನೆಲೆ ನಿಂತು ಈ ಭಾಷೆಯನ್ನೇ ಮಾತೃ ಭಾಷೆಯನ್ನಾಗಿ ಆಡುತ್ತಿದ್ದಾರೆ. ಈ ಭಾಷೆಗೆ ಸುಮಾರು 500 ವರ್ಷಗಳ ಇತಿಹಾಸವಿದ್ದು ತನ್ನದೇ ಆದ ವಿಶಿಷ್ಟವಾದ ಸಂಸ್ಕೃತಿ ಅನನ್ಯತೆಯನ್ನು ಹೊಂದಿದ್ದು, ಈ ಭಾಷೆ ಸಂಸ್ಕೃತಿಯ ಬೆಳವಣಿಗೆಗೆ ಅರೆಭಾಷೆ ಅಕಾಡೆಮಿಯನ್ನು ಸ್ಥಾಪಿಸಲು ಓದಲಾದ ಪತ್ರದಲ್ಲಿ ಕೋರಲಾಗಿದೆ.

ಸರ್ಕಾರವು ಈ ಪ್ರಸ್ತಾವನೆಯನ್ನು ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ 1024 ಕಸಧ 2011**
**ಬೆಂಗಳೂರು, ದಿನಾಂಕ: 15-12-2011.**

ಅರೆಭಾಷೆ ಸಂಸ್ಕೃತಿಯ ಬೆಳವಣಿಗೆಗೆ ಉತ್ತೇಜನ ನೀಡಿ ಅಭಿವೃದ್ಧಿಪಡಿಸುವ ಉದ್ದೇಶದಿಂದ **"ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯನ್ನು"** ತಕ್ಷಣದಿಂದ ಜಾರಿಗೆ ಬರುವಂತೆ ಸ್ಥಾಪಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ. ಈ ಅಕಾಡೆಮಿಯ ಕೇಂದ್ರಸ್ಥಾನ "ಮಡಿಕೇರಿ" ಯಾಗಿರುತ್ತದೆ.

ಈ ಅರೆಭಾಷೆ ಅಕಾಡೆಮಿಗೆ ಸಂಬಂಧಿಸಿದ ರೂಪುರೇಷೆ ಅಂಗರಚನೆ ಹುದ್ದೆಗಳ ವಿವರ ಇತ್ಯಾದಿಗಳ ಬಗ್ಗೆ ಪ್ರತ್ಯೇಕವಾಗಿ ಆದೇಶ ಹೊರಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಹೆಚ್.ವಿ.ರಾಮಚಂದ್ರರಾವ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಇಲಾಖೆ.

# ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ಅಂಗರಚನೆ

ಈ ಅಕಾಡೆಮಿಯನ್ನು ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಎಂದು ಕರೆಯತಕ್ಕದ್ದು. ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ಪ್ರಧಾನ ಕಛೇರಿಯನ್ನು ಮಡಿಕೇರಿಯಲ್ಲಿ ಸ್ಥಾಪಿಸಲಾಗಿರುತ್ತದೆ.

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ಧ್ಯೇಯೋದ್ದೇಶಗಳು ಈ ಮುಂದಿನಂತಿರತಕ್ಕದ್ದು.

1. ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಗೆ ಸಂಬಂಧಿಸಿದ ಕ್ಷೇತ್ರದಲ್ಲಿ ಅಧ್ಯಯನ ಮತ್ತು ಸಂಶೋಧನೆಗೆ ಉತ್ತೇಜನ ನೀಡುವುದು. ಈ ಉದ್ದೇಶಕ್ಕಾಗಿ ಸಂಶೋಧನಾಲಯ, ಗ್ರಂಥಾಲಯ ಮುಂತಾದುವನ್ನು ಸ್ಥಾಪಿಸುವುದು.
2. ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯು ತನ್ನ ಉದ್ದೇಶಗಳ ಅಭಿವೃದ್ಧಿಗಾಗಿ ಮತ್ತು ಬೆಳವಣಿಗೆಗಾಗಿ ಬೇರೆ ಕಡೆಗಳಲ್ಲಿರುವ ಅದೇ ರೀತಿಯ ಅಕಾಡೆಮಿಗಳೊಂದಿಗೆ ಮತ್ತು ಕರ್ನಾಟಕದಲ್ಲಿರುವ ಇತರ ಸಂಸ್ಥೆಗಳೊಡನೆ ಸಹಕರಿಸುವುದು. ಉತ್ತೇಜನ ನೀಡುವುದು.
3. ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯು ಅಕಾಡೆಮಿಯ ಕಾರ್ಯಚಟುವಟಿಕೆಗಳ ಉದ್ದೇಶಕ್ಕಾಗಿ ಸರ್ಕಾರದಿಂದ ಪಡೆದ ಅನುದಾನ ಹಾಗೂ ವಿವಿಧ ಮೂಲಗಳಿಂದ ವಂತಿಕೆಗಳ ಮತ್ತು ದಾನಗಳ ಮೂಲಕ ನಿಧಿ ಸಂಗ್ರಹಣೆ ಮಾಡಬಹುದು. ಹೀಗೆ ಸಂಗ್ರಹಿಸಿದ ನಿಧಿಯನ್ನು ಅಕಾಡೆಮಿಯ ಕಾರ್ಯೋದ್ದೇಶಗಳಿಗೆ ಬದ್ಧವಾಗಿ ಬಳಸಿದ ಬಗ್ಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, ಕರ್ನಾಟಕ ಆರ್ಥಿಕ ಸಂಹಿತೆ, ಸಾದಿಲ್ವಾರು ಸಂಹಿತೆ ಪ್ರಕಾರ ಖರ್ಚಿನ ವಿವರಗಳನ್ನು ಇಡುವುದು. ವಂತಿಕೆ ಹಾಗೂ ದಾನ ಕೊಟ್ಟವರು ಅಪೇಕ್ಷಿಸಿದಲ್ಲಿ ಅವರ ವಂತಿಕೆ ಹಾಗೂ ದಾನದ ಮೊತ್ತದ ಖರ್ಚಿನ ವಿವರಗಳನ್ನು ಲಿಖಿತವಾಗಿ ಅವರಿಗೆ ಒದಗಿಸುವುದು.
4. ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯು ತನ್ನ ವಿಷಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ವಿಚಾರ ಸಂಕಿರಣ, ಕಾರ್ಯಗಾರ ಸಂವಾದ, ಉನ್ನತಮಟ್ಟದ ಅಕಾಡೆಮಿಕ್ ಉತ್ಸವ ಮುಂತಾದ ಕಾರ್ಯಕ್ರಮಗಳನ್ನು ನಡೆಸುವುದು. ಈ ಕಾರ್ಯಕ್ರಮಗಳನ್ನು ಎರಡು ವಿಧಾನಗಳಲ್ಲಿ ವ್ಯವಸ್ಥೆಗೊಳಿಸಬಹುದು.
    1. ಅಕಾಡೆಮಿಯೇ ನೇರವಾಗಿ ಈ ಕಾರ್ಯಕ್ರಮಗಳನ್ನು ರೂಪಿಸಿ ವ್ಯವಸ್ಥೆಗೊಳಿಸುವುದು.
    2. ವಿವಿಧ ಸಂಘ- ಸಂಸ್ಥೆಗಳ ಜೊತೆ ಸಂಯುಕ್ತವಾಗಿ ಕಾರ್ಯಕ್ರಮಗಳನ್ನು ವ್ಯವಸ್ಥೆಗೊಳಿಸುವುದು.
5. ಕರ್ನಾಟಕ ಸರ್ಕಾರ, ಕೇಂದ್ರ ಸರ್ಕಾರ ಮತ್ತು ಕೇಂದ್ರ ಅಕಾಡೆಮಿಗಳು ಅಪೇಕ್ಷಿಸಿದಾಗ ಸೂಕ್ತ ಸಲಹೆಗಳನ್ನು ನೀಡುವುದು.
6. ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ತಂತಮ್ಮ ಕ್ಷೇತ್ರವ್ಯಪ್ತಿಗೆ ಸಂಬಂಧಿಸಿದ ಪುಸ್ತಕ ಪ್ರಕಟಣೆಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದ ರೀತಿ ಮಾಡಬಹುದು. ಈ ಪ್ರಕಟಣೆಗಳಿಗೆ ವಾರ್ಷಿಕ ಅನುದಾನದಲ್ಲಿ ವಾರ್ಷಿಕ ಕಾರ್ಯಕ್ರಮಗಳಿಗೆ ಗೊತ್ತುಪಡಿಸಿದ ಮೊತ್ತದಲ್ಲಿ ಶೇ. 15 ರಷ್ಟನ್ನು ಮಾತ್ರ ಹಂಚಿಕೆ ಮಾಡಿ ಬಳಸಿಕೊಳ್ಳಬೇಕು.
7. ಅಕಾಡೆಮಿಯು ತನ್ನ ಕ್ಷೇತ್ರ ಹಾಗೂ ವ್ಯಾಪ್ತಿಗೆ ಸೇರಿದ ಮಾಹಿತಿ ಸಂಗ್ರಹ ಕಾರ್ಯವನ್ನು ಮಾಡುವುದು.
8. ತನ್ನ ಉದ್ದೇಶಗಳ ಮುನ್ನಡೆಗಾಗಿ ಅಗತ್ಯವಿರಬಹುದಾದ ಮೇಲೆ ತಿಳಿಸಿದಂಥ ದ್ಯೇಯೋದ್ದೇಶಗಳಿಗೆ ಅನುಗುಣವಾದ ಕಾರ್ಯಗಳನ್ನು ನಿರ್ವಹಿಸುವುದು.
9. ಆಯಾ ವರ್ಷದ ಅಯವ್ಯಯದ ಪರಿಮಿತಿಯಲ್ಲಿ ಆರ್ಥಿಕ ವರ್ಷದ ಪ್ರಾರಂಭದಲ್ಲಿಯೇ ಕ್ರಿಯಾಯೋಜನೆ ಮತ್ತು ಬಜೆಟ್‌ನ್ನು ಸಿದ್ಧಪಡಿಸಿ ಸರ್ಕಾರದಿಂದ ಅನುಮೋದನೆ ಪಡೆಯಬೇಕು ಮತ್ತು ಆ ಪ್ರಕಾರ ಅನುಷ್ಠಾನಗೊಳಿಸಬೇಕು.
10. ಅಕಾಡೆಮಿಯು ತನ್ನ ಕ್ಷೇತ್ರದ ಪ್ರತಿಭಾನ್ವಿತರಿಗೆ ಪ್ರಶಸ್ತಿ-ಪುರಸ್ಕಾರ ಹಾಗೂ ಬಹುಮಾನಗಲನ್ನು ಪ್ರತಿವರ್ಷವೂ ಕೊಡಬೇಕು.

ಅಕಾಡೆಮಿಯ 17 ಸದಸ್ಯರನ್ನು ಮಾತ್ರ ಹೊಂದಿರತಕ್ಕದ್ದು.

ಅಧ್ಯಕ್ಷರು

ರಿಜಿಸ್ಟ್ರಾರ್

ಅರ್ಥ ಸದಸ್ಯರು

ಕನ್ನಡ ಮತ್ತು ಸಂಸ್ಕೃತಿ ನಿದೇಶನಾಲಯಕದ ಆಯುಕ್ತರು ಅಥವಾ ಅವರ ಪ್ರತಿನಿಧಿ

ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರಾದ 10 ಮಂದಿ ಸದಸ್ಯರು

ಅಕಾಡೆಮಿಯ ಮೊದಲ ಸಭೆಯಲ್ಲಿ ಅಕಾಡೆಮಿಯು ಆಯ್ಕೆ ಮಾಡಿಕೊಂಡ 3 ಮಂದಿ (ಕೋ ಆಪ್ಟ್) ಸಹ ಸದಸ್ಯರು.

# ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ನಡೆಸಿದ ಕಾರ್ಯಕ್ರಮಗಳ ವಿವರ

1) ದಿನಾಂಕ 08.09.2014 ಅಕಾಡೆಮಿ ಕಚೇರಿಯಲ್ಲಿ ನೂತನ ಅಧ್ಯಕ್ಷರ ಪದಗ್ರಹಣ ಮತ್ತು ವಿದ್ವಾಂಸರ ವಿಚಾರ ಸಂಕಿರಣ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

2) ದಿನಾಂಕ 17.10.2014 ರಂದು ಕೊಡಗು ಜಿಲ್ಲೆಯ ತಲಕಾವೇರಿ ತೀರ್ಥೋದ್ಭವದ ಕಾರ್ಯಕ್ರಮವನ್ನು ರಾಜ್ಯದ ಎಲ್ಲಾ ಬಾನುಲಿ ನಿಲಯಗಳಿಂದ ಪ್ರಚಾರ ಮಾಡುವ ಸಲುವಾಗಿ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ವತಿಯಿಂದ ಪ್ರಾಯೋಜಕತ್ವ ನೀಡಿರುತ್ತದೆ.

3) ದಿನಾಂಕ 24.10.2014 ಕಾಮಾಕ್ಷಿ ಗೌಡ ಒಕ್ಕೂಟದ ವಾರ್ಷಿಕೋತ್ಸವ ಸಮಾರಂಭಕ್ಕೆ ಮಡಿಕೇರಿ ನಗರದ ಗೌಡ ವಿದ್ಯಾಸಂಘದ ಸಭಾಂಗಣದಲ್ಲಿ ಒಕ್ಕೂಟ ಕಲಾವಿದರ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಪ್ರಾಯೋಜಕತ್ವ ನೀಡಲಾಗಿತ್ತು.

4) ದಿನಾಂಕ 03.11.2014 ಅಕಾಡೆಮಿ ವೆಬ್‌ಸೈಟ್ ಉದ್ಘಾಟನೆ, ಗಾಂಧಿ ಮೈದಾನ, ಮಡಿಕೇರಿ ಸನ್ಮಾನ್ಯ ಮುಖ್ಯಮಂತ್ರಿಗಳು ಉದ್ಘಾಟಿಸಿರುತ್ತಾರೆ.

5) ದಿನಾಂಕ 03.11.2014 ರಂದು ಸನ್ಮಾನ್ಯ ಮುಖ್ಯಮಂತ್ರಿಗಳ ಕಾರ್ಯಕ್ರಮದಲ್ಲಿ ಮಡಿಕೇರಿ ನಗರದ ಗಾಂಧಿ ಮೈದಾನ ಇಲ್ಲಿ ಏರ್ಪಡಿಸಿದ್ದು, ಈ ಕಾರ್ಯಕ್ರಮದಲ್ಲಿ ಕೊಡಗು ಗೌಡ ಯುವ ವೇದಿಕೆ ಇವರ ತಂಡಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ ಪ್ರಾಯೋಜಿಸಲಾಗಿತ್ತು.

6) ದಿನಾಂಕ 29.11.2014 ರಂದು ಮಾಧ್ಯಮ ಅಕಾಡೆಮಿ ಸಹಯೋಗದಲ್ಲಿ ಸಾಂಸ್ಕೃತಿಕ ಪ್ರದರ್ಶನ ಕಾರ್ಯಕ್ರಮವನ್ನು ಮಡಿಕೇರಿ ನಗರದ ಕೋಟೆ ಸಭಾಂಗಣದಲ್ಲಿ ನಡೆಸಿದ್ದು, ಶ್ರೀ ವಿನೋದ್ ಮತ್ತು ಬಳಗದವರಿಂದ ಅರೆಭಾಷೆ ಜಾನಪದ ಕೋಲಾಟ ಮತ್ತು ಕೊಡಗು ಗೌಡ ಯುವ ವೇದಿಕೆ ಇವರ ತಂಡದವರಿಂದ ಅರೆಭಾಷೆ ಸಂಪ್ರದಾಯ ಪ್ರದರ್ಶನ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಪ್ರಾಯೋಜಕತ್ವ .

7) ದಿನಾಂಕ 30.11.2014 ರಂದು ಶ್ರೀ ವಿಜಯ ವಿನಾಯಕ ಗೌಡ ಒಕ್ಕೂಟ ವಾರ್ಷಿಕೋತ್ಸವ ಸಮಾರಂಭಕ್ಕೆ ಮಡಿಕೇರಿ ನಗರದ ಸರಸ್ವತಿ ವಿದ್ಯಾಸಂಸ್ಥೆ ಆವರಣ ಇಲ್ಲಿ ನಡೆದಿದ್ದು ಒಕ್ಕೂಟ ಕಲಾವಿದರ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಪ್ರಾಯೋಜಕತ್ವ.

8) ದಿನಾಂಕ 08.12.2014 ರಂದು ಶ್ರೀ ಓಂಕಾರೇಶ್ವರ ದೇವಸ್ಥಾನ ಸಮಿತಿಯವರು ಕೊಡಗಿನ ಹುತ್ತರಿ ಹಬ್ಬವನ್ನು ಕೋಟೆ ಆವರಣದಲ್ಲಿ ಸಾಂಪ್ರದಾಯಕವಾಗಿ ಅಚರಿಸಿದ್ದು, ಈ ಕಾರ್ಯಕ್ರಮಕ್ಕೆ ಅಕಾಡೆಮಿಯಿಂದ ಕಲಾತಂಡವನ್ನು ಪ್ರಾಯೋಜಿಸಲಾಗಿತ್ತು.

9) ದಿನಾಂಕ 13.12.2014 ರಂದು ಬಿ.ಬಾಡಗ ಗ್ರಾಮದ ಹುತ್ತರಿ ಪಂಡ್‌ನವರ ಶತಮಾನೋತ್ಸವ ಸಮಾರಂಭ ಬಿ.ಬಾಡಗ ಗ್ರಾಮದ ಹಿರಿಯ ಪ್ರಾಥಮಿಕ ಶಾಲಾ ಆಟದ ಮೈದಾನ ಇಲ್ಲಿ ನಡೆದಿದ್ದು ಹುತ್ತರಿ ಪಂಡ್‌ನ ಕಲಾತಂಡದವರಿಂದ ಸಾಂಪ್ರದಾಯಿಕ ಮೆರವಣಿಗೆ. ಅರೆಭಾಷೆ ಜಾನಪದ ನೃತ್ಯ, ನಾಟಕ, ಸೋಬಾನೆ ಅರೆಭಾಷೆ ಸಂಸ್ಕೃತಿಗೆ ಸಂಬಂಧಿಸಿದಂತೆ ಕಾರ್ಯಕ್ರಮಕ್ಕೆ ಪ್ರಾಯೋಜಕತ್ವ.

10) ದಿನಾಂಕ 14.12.2014 ಐನ್‌ಮನೆ ಸಂಸ್ಕೃತಿ ಜಂಬರ, ಐಕೊಳ ಗ್ರಾಮದ ಕೊಂಪುಳೀರ ಐನ್‌ಮನೆಯಲ್ಲಿ ಹಮ್ಮಿಕೊಳ್ಳಲಾಗಿತ್ತು.

11) ದಿನಾಂಕ 15.12.2014 ರಂದು ಕರ್ನಾಟಕ ಜಾನಪದ ಪರಿಷತ್ತು, ಕೇರಳ ಗಡಿನಾಡು ಘಟಕ, ಕಾಸರಗೋಡು ಇವರು ಬದಿಯಡ್ಕ ವಿದ್ಯಾಪೀಠ ಇಲ್ಲಿ ಜಾನಪದ ಕಾರ್ಯಕ್ರಮವನ್ನು ಏರ್ಪಡಿಸಿದ್ದು, ಸದರಿ ಕಾರ್ಯಕ್ರಮದಲ್ಲಿ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿವತಿಯಿಂದ ಅರೆಭಾಷೆ ಜಾನಪದ ಕೋಲಾಟ ತಂಡವನ್ನು ಪ್ರಾಯೋಜಿಸಲಾಗಿತ್ತು.

12) ದಿನಾಂಕ 21.12.2014 ರಂದು ಸುದರ್ಶನ ಗೌಡ ಒಕ್ಕೂಟ ವಾರ್ಷಿಕೋತ್ಸವ ಕಾರ್ಯಕ್ರಮಕ್ಕೆ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಪ್ರಾಯೋಜಕತ್ವ.

13) ದಿನಾಂಕ 27.12.2014 ಸಾಂಸ್ಕೃತಿಕ ಸಮ್ಮಿಲನ, ಕುಶಾಲನಗರ ಗೌಡ ಸಮಾಜದಲ್ಲಿ ಹಮ್ಮಿಕೊಂಡು ಸನ್ಮಾನ್ಯ ಸಚಿವರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಶ್ರೀಮತಿ ಉಮಾಶ್ರೀಯವರು ಉದ್ಘಾಟಿಸಿರುತ್ತಾರೆ.

14) ದಿನಾಂಕ 14.02.2015 ರಂದು 10ನೇ ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನವು ಚೆಂಬು ಗ್ರಾಮದಲ್ಲಿ ನಡೆದಿದ್ದು ಈ ಕಾರ್ಯಕ್ರಮಕ್ಕೆ ಉಪನ್ಯಾಸಕರನ್ನು ಮತ್ತು ಕಲಾತಂಡವನ್ನು ಅಕಾಡೆಮಿಯಿಂದ ಕಳುಹಿಸಿಕೊಡಲಾಗಿತ್ತು.

15) ದಿನಾಂಕ 22.02.2015 ಸಾಂಸ್ಕೃತಿಕ ಸಮಾವೇಶ, ಕೊಡಗು ಮತ್ತೆ ದಕ್ಷಿಣ ಕನ್ನಡ ಗೌಡ ಸಮಾಜ, ಬೆಂಗಳೂರು ಇಲ್ಲಿ ಹಮ್ಮಿಕೊಳ್ಳಲಾಗಿತ್ತು.

16) ದಿನಾಂಕ 28.03.2015 ಮತ್ತು 29.03.2015 ರಂದು ಮಡಿಕೇರಿಯಲ್ಲಿ ಕೊಡಗು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ(ರಿ) ಇವರು ರಾಜ್ಯಮಟ್ಟದ ಪತ್ರಕರ್ತರ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಯನ್ನು ನಡೆಸಿದ್ದು ಈ ಕಾರ್ಯಕ್ರಮದ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಕಲಾತಂಡದವರನ್ನು ಅಕಾಡೆಮಿವತಿಯಿಂದ ಪ್ರಾಯೋಜಿಸಲಾಗಿದೆ.

17) ದಿನಾಂಕ 17.04.2015 ಅರೆಭಾಷೆ ಸಂಸ್ಕೃತಿ ಕುರಿತಾಗಿ ಚಿತ್ರಕಲಾ ಶಿಬಿರ, ಕನಕಮಜಲು ಇಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

18) ದಿನಾಂಕ 25.04.2015 ರಂದು ಕೆದಂಬಾಡಿ ಐನ್‌ಮನೆ ಕುಂದಚೇರಿ ಗ್ರಾಮದಲ್ಲಿ ನಡೆದ ಕೆದಂಬಾಡಿ ಕಪ್-2015 ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿ ಕಾರ್ಯಕ್ರಮದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಅಕಾಡೆಮಿಯಿಂದ ಪ್ರಾಯೋಜನೆ ಕೊಡಲಾಗಿತ್ತು.

19) ದಿನಾಂಕ 10.05.2015 ರಂದು ಜಿಲ್ಲಾ ಕ್ರೀಡಾಂಗಣ, ಮಡಿಕೇರಿ ಇಲ್ಲಿ ನಡೆದ ಉಳುವಾರನ ಕಪ್ ಕ್ರಿಕೆಟ್ ಜಂಬರ ಕಾರ್ಯಕ್ರಮದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಅಕಾಡೆಮಿಯ ಪ್ರಾಯೋಜನೆ ಕೊಡಲಾಯಿತು.

20) 2015ರ ಜೂನ್ 14 ರಂದು ಕೊಡಗು ಗೌಡ ಯುವ ವೇದಿಕೆ, ಮಡಿಕೇರಿ ಇವರು ಹರಿಹರ ಯುವಕ ಸಂಘ ಸಭಾಂಗಣ, ಕಾಜೂರು ಇಲ್ಲಿ ನಡೆಸಿದ "ಗೌಡರ ಸಮ್ಮಿಲನ ಜಂಬರ" ಕಾರ್ಯಕ್ರಮದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಅಕಾಡೆಮಿ ಪ್ರಾಯೋಜಕತ್ವ ನೀಡಲಾಗಿತ್ತು.

21) ದಿನಾಂಕ 30.06.2015 ರಂದು ನಂಜರಾಯಪಟ್ಟಣ ಸ್ಪೋಟ್ಸ್ ಕ್ಲಬ್ ನವರು ಗ್ರಾಮೀಣ ಕ್ರೀಡಾ ಮತ್ತು ಸಾಂಸ್ಕೃತಿಕ ಮಿಲನ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಅಕಾಡೆಮಿಯಿಂದ ಪ್ರಾಯೋಜನೆ ನೀಡಲಾಗಿತ್ತು.

22) 2015ಜೂನ್ 30ರಂದು ನಡೆದ "ಮಡಿಕೇರಿ ತಾಲೂಕು ಸಾಹಿತ್ಯ ಸಮ್ಮೇಳನ"ಕ್ಕೆ ಕಲಾತಂಡ ಪ್ರಾಯೋಜಿಸಲಾಗಿತ್ತು.

23) ದಿನಾಂಕ 25.07.2015-26.07.2015 ರಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಎಲ್ಲಾ ಅಕಾಡೆಮಿಗ, ಎಲ್ಲಾ ಪುಸ್ತಕ ಪ್ರಾಧಿಕಾರ, ಅಧ್ಯಯನ ಕೇಂದ್ರದ ಅಧೀನಲಿ ಸಂಗಮ ಸಂಭ್ರಮ 2015, ಮಂಗಳೂರು ಪಿಲಿಕುಳ ನಿಸರ್ಗಧಾಮ ಇಲ್ಲಿ ಹಮ್ಮಿಕೊಳ್ಳಲಾಗಿತ್ತು.

24) ದಿನಾಂಕ 08.08.2015ರಂದು ಮರಗೋಡು ಸ್ಪೋರ್ಟ್ಸ್ & ರಿಕ್ರಿಯೇಷನ್ ಕ್ಲಬ್ ಇವರ ಸಹಯೋಗದಲ್ಲಿ "ಆಟಿ ಹಬ್ಬ"ವನ್ನು ಮರಗೋಡು ಗೌಡ ಸಮಾಜದಲ್ಲಿ ಹಮ್ಮಿಕೊಳ್ಳಲಾಗಿತ್ತು.

25) ದಿನಾಂಕ 09.08.2015ರಂದು ಮಿತ್ರ ಯುವಕ ಮಂಡಲ (ರಿ) ಇವರ ಸಹಯೋಗದಲ್ಲಿ "ಆಟಿ ಜಂಬರ" ಕಾರ್ಯಕ್ರಮವನ್ನು ಗೌಡ ಸಮುದಾಯ ಭವನ ಕೋಡಿಯಾಲ್ ಬೈಲ್‌ನಲ್ಲಿ ಏರ್ಪಡಿಸಲಾಗಿತ್ತು.

26) ದಿನಾಂಕ 16.08.2015ರಂದು ಮಿತ್ರ ಯುವಕ ಮಂಡಲ (ರಿ) ಇವರ ಸಹಯೋಗದಲ್ಲಿ ಆಟಿ ಉತ್ಸವವನ್ನು ಸರಕಾರಿ ಪ್ರೌಢಶಾಲೆ, ದುಗ್ಗಲಡ್ಕ, ಸುಳ್ಯ ಇಲ್ಲಿ ಹಮ್ಮಿಕೊಳ್ಳಲಾಗಿತ್ತು.

27) ದಿನಾಂಕ 16.08.2015ರಂದು ಶಿವಾಜಿ ಆರ್ಟ್ಸ್ ಅಂಡ್ ಸ್ಪೋಟ್ಸ್ ಕ್ಲಬ್ (ರಿ) ಇವರ ಸಹಯೋಗದಲ್ಲಿ ಆಟಿ ಉತ್ಸವ, ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಪುತ್ಯ, ಮೈಲೆಟ್ಟಿಪಾರೆ, ಮಂಡೆಕೋಲು, ಸುಳ್ಯ ಇಲ್ಲಿ ಹಮ್ಮಿಕೊಳ್ಳಲಾಗಿತ್ತು.

28) 2015ರ ಆಗಸ್ಟ್ 30 ರಂದು ನಂಜರಾಯಪಟ್ಟಣ ಗೌಡ ಯೂತ್ ಕ್ಲಬ್ (ರಿ) ರಂಗಸಮುದ್ರ ಇವರು ಆಯೋಜಿಸಿದ್ದ "ಗ್ರಾಮೀಣ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸಮ್ಮಿಲನ"ಕಾರ್ಯಕ್ರಮಕ್ಕೆ ಅಕಾಡೆಮಿ ಪ್ರಾಯೋಜಕತ್ವ ನೀಡಲಾಗಿತ್ತು.

29) ದಿನಾಂಕ 04.10.2015 ಸಾಂಸ್ಕೃತಿಕ ಸಮಾವೇಶ ಕಾರ್ಯಕ್ರಮ ತೆಂಕಿಲ, ಪುತ್ತೂರು ಒಕ್ಕಲಿಗ ಗೌಡ ಸಮುದಾಯ ಭವನ ಇಲ್ಲಿ ಏರ್ಪಡಿಸಲಾಗಿತ್ತು.

30) ದಿನಾಂಕ 10.10.2015 ಮತ್ತು 11.10.2015 ಸಾಂಸ್ಕೃತಿಕ ವೈಭವ, ಗೌಡ ಸಮಾಜ ಚೇರಂಬಾಣೆ ಇವರ ಸಹಯೋಗದಲ್ಲಿ . ಚೇರಂಬಾಣೆ ಅರುಣ ಪದವಿ ಪೂರ್ವ ಕಾಲೇಜು ಇಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

31) 2015 ಅಕ್ಟೋಬರ್ 11 ರಂದು ಗೌಡ ಸಮಾಜ ವಿರಾಜಪೇಟೆ ಇವರು ಆಯೋಜಿಸಿದ್ದ "ಕೈಲ್ ಮುಹೂರ್ತ ಸಂತೋಷ ಕೂಟ" ಕಾರ್ಯಕ್ರಮಕ್ಕೆ ಅಕಾಡೆಮಿ ಪ್ರಾಯೋಜನೆ ನೀಡಲಾಯಿತು.

32) 2015ರ ಅಕ್ಟೋಬರ್ 17 ರಂದು ತಲಕಾವೇರಿಯಲ್ಲಿ "ಕಾವೇರಿ ತುಲಾ ಸಂಕ್ರಮಣ ಜಾತ್ರೋತ್ಸವ"ದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮವನ್ನು ಪ್ರಾಯೋಜಿಸಲಾಯಿತು.

33) ದಿನಾಂಕ 31.10.2015 ಸ್ವಾತಂತ್ರ್ಯ ಹೋರಾಟಗಾರ ಸುಬೇದಾರ್ ಅಪ್ಪಯ್ಯಗೌಡರ ಹುತಾತ್ಮ ದಿನಾಚರಣೆ, ಕಾವೇರಿ ಕಲಾಕ್ಷೇತ್ರ, ಮಡಿಕೇರಿ ಇಲ್ಲಿ ಹಮ್ಮಿಕೊಳ್ಳಲಾಗಿತ್ತು.

34) 2015ರ ನವೆಂಬರ್ 07 ರಂದು ಸುವಿಚಾರ ಸಾಹಿತ್ಯ ವೇದಿಕೆ, ಸುಳ್ಯ ಇವರು ಆಯೋಜಿಸಿದ್ದ "ಅರೆಭಾಷೆ ಸಾಹಿತ್ಯ ಸಂಭ್ರಮ" ಕಾರ್ಯಕ್ರಮಕ್ಕೆ ಅಕಾಡೆಮಿ ಪ್ರಾಯೋಜಕತ್ವ ನೀಡಲಾಯಿತು.

35) 2015ರ ನವೆಂಬರ್ 15 ರಂದು ಅರೆಭಾಷೆಗೌಡ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘ, ಪೆರಾಜೆ ಇವರು ಆಯೋಜಿಸಿದ್ದ "ಗ್ರಾಮೀಣ ಕ್ರೀಡಾ ಮತ್ತು ಸಾಂಸ್ಕೃತಿಕ ಸಮ್ಮೇಲನ" ಕಾರ್ಯಕ್ರಮಕ್ಕೆ ಪ್ರಾಯೋಜಿಸಲಾಯಿತು.

36) 2015ರ ನವೆಂಬರ್ 22 ರಂದು ಕೊಡಗು ಗೌಡ ಸಮಾಜ, ಸೋಮವಾರಪೇಟೆ ಇವರು ಆಯೋಜಿಸಿದ್ದ "ವಾರ್ಷಿಕೋತ್ಸವ" ಸಮಾರಂಭದಲ್ಲಿ ಅಕಾಡೆಮಿ ವತಿಯಿಂದ ಸಾಂಸ್ಕೃತಿಕ ಜಾನಪದ ಕಾರ್ಯಕ್ರಮಕ್ಕೆ ಪ್ರಾಯೋಜಕತ್ವ ನೀಡಲಾಯಿತು.

37) 2015ರ ನವೆಂಬರ್ 27 ರಂದು ಶ್ರೀ ಓಂಕಾರೇಶ್ವರ ದೇವಾಲಯ ಸಮಿತಿ ಮಡಿಕೇರಿ ಇವರು ಆಯೋಜಿಸಿದ್ದ "ಕೊಡಗಿನ ಹುತ್ತರಿ ಹಬ್ಬ ಕೋಲಾಟ" ಕಾರ್ಯಕ್ರಮಕ್ಕೆ ಕಲಾತಂಡ ಪ್ರಾಯೋಜನೆ ನೀಡಿತು.

38) 2015ರ ಡಿಸೆಂಬರ್ 05 ರಂದು ಕನಾಟಕ ರಕ್ಷಣಾ ಯುವ ವೇದಿಕೆ ಕುಶಾಲನಗರ ಇವರು ಏರ್ಪಡಿಸಿದ ಕನ್ನಡ ರಾಜ್ಯೋತ್ಸವ ಮತ್ತು ಕುವೆಂಪು ದಿನಾಚರಣೆಗೆ ತಂಡ ಪ್ರಾಯೋಜಕತ್ವ ನೀಡಿತು.

39) 2015ರ ಡಿಸೆಂಬರ್ 12 ರಂದು ಕರ್ನಾಟಕ ಸಂಘ, ನವದೆಹಲಿ ಇಲ್ಲಿ "ದೆಹಲಿಯಲ್ಲಿ ಸಾಂಸ್ಕೃತಿಕ ಸಂಗಮ" ಕಾರ್ಯಕ್ರಮ ನಡೆಯಿತು.

40) 2015ರ ಡಿಸೆಂಬರ್ 25 ರಂದು ಚೌಡೇಶ್ವರಿ ಸಂಘ, ಮಡಿಕೇರಿ ಇವರು ಗೌಡ ವಿದ್ಯಾ ಸಂಘ, ಮಡಿಕೇರಿ ಇಲ್ಲಿ ಆಯೋಜಿಸಿದ್ದ ವಾರ್ಷಿಕೋತ್ಸವ ಕಾರ್ಯಕ್ರಮದ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಅಕಾಡೆಮಿ ಪ್ರಾಯೋಜಕತ್ವ ನೀಡಿತು.

41) 2015ರ ಡಿಸೆಂಬರ್ 26 ರಂದು ಪಿಲಿಕುಳ ನಿಸರ್ಗಧಾಮ, ಮಂಗಳೂರು ಇವರು ಆಯೋಜಿಸಿದ್ದ "ಪಿಲಿಕುಳ ಹಬ್ಬ" ಕಾರ್ಯಕ್ರಮದಲ್ಲಿ ಅಕಾಡೆಮಿ ವತಿಯಿಂದ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

42) 2015ರ ಡಿಸೆಂಬರ್ 26 ರಂದು ನೇತಾಜಿ ಪ್ರೌಢ ಶಾಲೆ, ಬಳ್ಪಮಾವಟೆ ಇವರು ಆಯೋಜಿಸಿದ್ದು "ಸುವರ್ಣ ಮಹೋತ್ಸವ" ಕಾರ್ಯಕ್ರಮಕ್ಕೆ ಕಲಾತಂಡ ಪ್ರಾಯೋಜನೆ ನೀಡಿತು.

43) 2015ರ ಡಿಸೆಂಬರ್ 26 ರಂದು "ಕುರುಂಜಿ ವೆಂಕಟರಮಣ ಗೌಡರ 87ನೇ ಜಯಂತೋತ್ಸವ" ಕಾರ್ಯಕ್ರಮವನ್ನು ಸುಳ್ಯದಲ್ಲಿ ಹಮ್ಮಿಕೊಂಡಿದ್ದು ಕಲಾತಂಡ ಪ್ರಾಯೋಜಿಸಲಾಯಿತು.

44) 2015ರ ಡಿಸೆಂಬರ್ 28 ರಂದು ಗೌಡ ಮಹಿಳಾ ಒಕ್ಕೂಟ, ಮಡಿಕೇರಿ ಇವರು ಗೌಡ ಸಮಾಜ, ಮಡಿಕೇರಿ ಇಲ್ಲಿ ಆಯೋಜಿಸಿದ್ದ "ಅರೆಭಾಷೆ ಜನಾಂಗ ಸಂಸ್ಕೃತಿಗೆ ಸಂಬಂಧಿಸಿದ ಹಳೆಯ ವಸ್ತುಗಳ ಪ್ರದರ್ಶನ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ" ಆಯೋಜಿಸಿದ್ದು ಅಕಾಡೆಮಿ ಪ್ರಾಯೋಜಕತ್ವದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

45) 2016ರ ಜನವರಿ 12 ರಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕೊಡಗು ಇವರು ಗಾಂಧಿಮೈದಾನ, ಮಡಿಕೇರಿ ಇಲ್ಲಿ ಆಯೋಜಿಸಿದ್ದ "ಸ್ವಾಮಿ ವಿವೇಕಾನಂದ 154ನೇ ಜಯಂತ್ಯೋತ್ಸವ" ಕಾರ್ಯಕ್ರಮಕ್ಕೆ ಅಕಾಡೆಮಿಯಿಂದ ಕಲಾತಂಡ ಪ್ರಾಯೋಜನೆ.

46) 2016ರ ಜನವರಿ 31 ರಂದು ಮಂಡೆಕೋಲು "ಶ್ರೀ ಮಹಾವಿಷ್ಣು ದೇವಸ್ಥಾನ ಬ್ರಹ್ಮ ಕಳಶೋತ್ಸವ" ಕಾರ್ಯಕ್ರಮಕ್ಕೆ ಅಕಾಡೆಮಿಯಿಂದ ಕಲಾತಂಡ ಪ್ರಾಯೋಜನೆ.

47) 2016ರ ಮಾರ್ಚ್ 14 ರಂದು ಗೌಡ ಸಮಾಜ, ಮಡಿಕೇರಿ ಇಲ್ಲಿ "2013-14ನೇ ಸಾಲಿನ ಗೌರವ ಪ್ರಶಸ್ತಿ ಸಮಾರಂಭ ಮತ್ತು ದಶ ಕೃತಿಗಳ ಬಿಡುಗಡೆ" ಕಾರ್ಯಕ್ರಮ ನಡೆಯಿತು.

48) 2016 ಏಪ್ರೀಲ್ 04 ರಂದು ಕಾನಡ್ಕ ಕುಟುಂಬಸ್ಥರು, ಮರಗೋಡು ಇವರು ಏರ್ಪಡಿಸಿದ್ದ ಯುಗಾದಿ ಹಬ್ಬದ ಪ್ರಯುಕ್ತ ಗ್ರಾಮೀಣ ಕ್ರೀಡಾ ಕೂಟ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಅಕಾಡೆಮಿ ಪ್ರಾಯೋಜಕತ್ವ ನೀಡಿತು.

49) 2016 ಮೇ 07 ರಂದು ಕುಟ್ಟನ ಕುಟುಂಬಸ್ಥರು ಆಯೋಜಿಸಿದ್ದ ಕುಟ್ಟನ ಕ್ರಿಕೇಟ್ ಜಂಬರ ಕಾರ್ಯಕ್ರಮದ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಅಕಾಡೆಮಿ ಪ್ರಾಯೋಜಕತ್ವ

50) 14.05.2016 ಮತ್ತು 15.05.2016 ಮೈಸೂರು ಗೌಡ ಸಮಾಜ ಸಹಯೋಗದಲ್ಲಿ ಅರೆಭಾಷೆ ಐಸಿರಿ ಕಾರ್ಯಕ್ರಮ. ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನ, ಮೈಸೂರು ಇಲ್ಲಿ ಹಮ್ಮಿಕೊಳ್ಳಲಾಗಿತ್ತು.

51) 2016 ಮೇ 24. ರಂದು ಪಂಚಭಾಷಾ ಅಕಾಡೆಮಿಗಳ ಸಾಹಿತ್ಯ ಸಾಂಸ್ಕೃತಿಕ ಸಮ್ಮಿಲನ ಕಾರ್ಯಕ್ರಮವನ್ನು ಕ್ರಿಸ್ಟಲ್‌ಕೋರ್ಟ್ ಸಭಾಂಗಣ, ಮಡಿಕೇರಿ ಇಲ್ಲಿ ಹಮ್ಮಿಕೊಂಡಿದ್ದು ಕಲಾತಂಡಗಳನ್ನು ಪ್ರಾಯೋಜಿಸಲಾಗಿತ್ತು.

52) 2016 ಜೂನ್ 03 ರಂದು ಕರ್ನಾಟಕ ಜಾನಪದ ಪರಿಷತ್ ಆಯೋಜಿಸಿದ್ದ ಜನಪದ ಉತ್ಸವ ಕಾರ್ಯಕ್ರಮಕ್ಕೆ 3 ಕಲಾತಂಡಗಳ ಪ್ರಾಯೋಜನೆ ನೀಡಿತು.

53) 2016 ಆಗಸ್ಟ್ 12 ರಂದು ಗೋಪಾಲಕೃಷ್ಣ ಯುವ ಸೇವಾ ಸಂಘ ಇವರ ಸಹಯೋಗದಲ್ಲಿ ಕೆಸರುಗದ್ದೆ ಕ್ರೀಡೋತ್ಸವ & ಸಾಂಪ್ರದಾಯಿಕ ನಾಟಿ ಓಟ ಕಾರ್ಯಕ್ರಮವನ್ನು ಅವಂದೂರು ಗ್ರಾಮದ ಕಾಳೇರಮ್ಮನ ಗದ್ದೆ ಇಲ್ಲಿ ಹಮ್ಮಿಕೊಳ್ಳಲಾಗಿತ್ತು.

54) 2016 ಆಗಸ್ಟ್ 14 ರಂದು "ಆಟಿ ಸಂಭ್ರಮ-2016" ಕಾರ್ಯಕ್ರಮವನ್ನು ದ.ಕ.ಜಿ.ಪ.ಹಿ.ಪ್ರಾ ಶಾಲೆ ಪೈಲಾರು ಇಲ್ಲಿ ನಡೆಸಲಾಯಿತು.

55) 2016 ಆಗಸ್ಟ್ 15 ರಂದು "ಆಟಿ ಉತ್ಸವ" ಕಾರ್ಯಕ್ರಮವನ್ನು ಸ.ಉ.ಹಿ.ಪ್ರಾ ಶಾಲೆ ಅಜ್ಜನಗದ್ದೆ ಇಲ್ಲಿ ಹಮ್ಮಿಕೊಳ್ಳಲಾಗಿತ್ತು.

56) 2016 ಆಗಸ್ಟ್ 24 ರಂದು ಕೆಸರು ಗದ್ದೆ ಕ್ರೀಡೋತ್ಸವ ಮತ್ತು ಸಾಂಪ್ರದಾಯಿಕ ನಾಟಿ ಓಟ ಕಾರ್ಯಕ್ರಮವನ್ನು ಬೆಳ್ಳಾರೆ ಗ್ರಾಮದ ಕಾವಿನಮೂಲೆ ಐತಪ್ಪಗೌಡರವರ ಗದ್ದೆ ಇಲ್ಲಿ ಹಮ್ಮಿಕೊಳ್ಳಲಾಗಿತ್ತು.

57) 2016 ಆಗಸ್ಟ್ 24 ರಂದು ಮಿತ್ರ ಯುವಕ ಮಂಡಲ (ರಿ) ಇವರು ಸುಳ್ಯದಲ್ಲಿ ಏರ್ಪಡಿಸಿದ್ದ 25ನೆ ವರ್ಷದ ಶ್ರೀ ಕೃಷ್ಣ ಜನ್ಮಾಷ್ಟಮಿ ಬೆಳ್ಳಿಹಬ್ಬ ಕಾರ್ಯಕ್ರಮಕ್ಕೆ ಅರೆಭಾಷೆ ಸಾಂಸ್ಕೃತಿಕ ತಂಡ ಪ್ರಾಯೋಜಿಸಲಾಗಿತ್ತು.

58) 2016 ಆಗಸ್ಟ್ 30 ರಂದು ಕನ್ನಡ ಸಾಹಿತ್ಯ ಪರಿಷತ್, ಮಡಿಕೇರಿ ಇವರು ಶಿರಂಗಾಲ ಗ್ರಾಮದ ಪದವಿ ಪೂರ್ವ ಕಾಲೇಜು ಆವರಣ ಇಲ್ಲಿ ಆಯೋಜಿಸಿದ್ದ "ಮುಂಗಾರು ಸಂಪದ"ಕಾರ್ಯಕ್ರಮಕ್ಕೆ ಸಾಂಸ್ಕೃತಿಕ ಕಲಾತಂಡಗಳನ್ನು ಅಕಾಡೆಮಿಯಿಂದ ಕಳುಹಿಸಲಾಗಿತ್ತು.

59) 2016 ಸೆಪ್ಟೆಂಬರ್ 04 ರಂದು ಮಂಡೆಕೋಲು ಗ್ರಾಮದ ಸುಳ್ಯ ಇವರು ನಡೆಸಿದ ಗಣೇಶೋತ್ಸವ ಕಾರ್ಯಕ್ರಮಕ್ಕೆ "ಯಕ್ಷಗಾನ" ತಂಡ ಪ್ರಾಯೋಜಿಸಲಾಗಿತ್ತು.

60) 2016 ಸೆಪ್ಟೆಂಬರ್ 10 ಮತ್ತು 11 ರಂದು ಕುಕ್ಕೇ ಶ್ರೀ ಸುಬ್ರಹ್ಮಣ್ಯದ ವಲ್ಲೀಶ ಸಭಾ ಭವನ ಇಲ್ಲಿ "ಯುವ ಅರೆಭಾಷೆ ಸಾಹಿತ್ಯ ಸಮಾವೇಶ" ಕಾರ್ಯಕ್ರಮವನ್ನು ಅಕಾಡೆಮಿಯಿಂದ ಹಮ್ಮಿಕೊಳ್ಳಲಾಗಿತ್ತು.

61) 2016 ಸೆಪ್ಟೆಂಬರ್ 13 ರಿಂದ 18 ರವರೆಗೆ ಮರಗೋಡು ಗೌಡ ಸಮಾಜ ಇಲ್ಲಿ "ಅರೆಬಾಸೆ ಸಂಸ್ಕೃತಿಲಿ ಸಾಂಪ್ರದಾಯಿಕ ಅಡಿಗೆ ತರಬೇತಿ ಕಾರ್ಯಾಗಾರ ಮತ್ತು ಪ್ರಾತ್ಯಕ್ಷಿಕೆ" ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

62) 2016 ಸೆಪ್ಟೆಂಬರ್ 30 ರಂದು ಎಬಿವಿ ಸಂಘದ 10ನೇ ವರ್ಷದ ಕೈಲುಮೂಹೂರ್ತ ಕಾರ್ಯಕ್ರಮಕ್ಕೆ ಕಲಾತಂಡ ಪ್ರಾಯೋಜನೆ ನೀಡಿತು.

63) 2016 ಅಕ್ಟೋಬರ್ 11 ರಂದು ಗಾಂಧಿ ಮೈದಾನ, ಮಡಿಕೇರಿ ಇಲ್ಲಿ ವಿಜಯದಶಮಿ ಪ್ರಯುಕ್ತ ನಡೆದ ಮಕ್ಕಳ ದಸರಾ ಕಾರ್ಯಕ್ರಮಕ್ಕೆ "ಯಕ್ಷಗಾನ ಕಲಾತಂಡ" ಮತ್ತು "ಅರೆಭಾಷೆ ಸಾಂಸ್ಕೃತಿಕ ನೃತ್ಯ" ತಂಡ ಪ್ರಾಯೋಜಿಸಲಾಗಿತ್ತು.

64) 2016 ಅಕ್ಟೋಬರ್ 15 ರಂದು ಸವಣೂರಿನಲ್ಲಿ ನಡೆದ "ಕಲಾರಶ್ಮಿ-2016" ಕಾರ್ಯಕ್ರಮಕ್ಕೆ ಸಾಂಸ್ಕೃತಿಕ ಕಲಾತಂಡಗಳನ್ನು ಪ್ರಾಯೋಜಿಸಲಾಗಿತ್ತು.

65) 2016 ಅಕ್ಟೋಬರ್ 16 ರಂದು ಚೆಂಬು ಗ್ರಾಮದ ಸ.ಹಿ.ಪ್ರಾ ಶಾಲೆ ಇಲ್ಲಿ "ಅರೆಬಾಸೆ ಸಂಸ್ಕೃತಿ ಸಿರಿ ಮತ್ತು ಸಾಹಿತ್ಯ ಸುಗ್ಗಿನ ಕೂಡುಕೂಟ" ಕಾರ್ಯಕ್ರಮವನ್ನು ಅಕಾಡೆಮಿವತಿಯಿಂದ ಹಮ್ಮಿಕೊಳ್ಳಲಾಗಿತ್ತು.

66) 2016 ಅಕ್ಟೋಬರ್ 31 ರಂದು "ಸ್ವಾತಂತ್ರ್ಯ ಹೋರಾಟಗಾರ ಸುಬೇದಾರ್ ಗುಡ್ಡೆಮನೆ ಅಪ್ಪಯ್ಯಗೌಡರ ಹುತಾತ್ಮ ದಿನಾಚರಣೆ ಕಾರ್ಯಕ್ರಮವನ್ನು ಅಕಾಡೆಮಿ ವತಿಯಿಂದ ಕೋಟೆ ಆವರಣ ಮಡಿಕೇರಿ ಇಲ್ಲಿ ಹಮ್ಮಿಕೊಳ್ಳಲಾಗಿತ್ತು.

67) 2016 ನವೆಂಬರ್ 05 ರಂದು ಸುಳ್ಯ ಕನ್ನಡ ಸಾಹಿತ್ಯ ಪರಿಷತ್ ಇವರು ಸ.ಪ.ಪೂ ಕಾಲೇಜು ಸುಳ್ಯ ಇಲ್ಲಿ ನಡೆಸಿದ "ಚಿತ್ರಕಲಾ ಸಂಭ್ರಮ" ಕಾರ್ಯಕ್ರಮಕ್ಕೆ ಅಕಾಡೆಮಿ ಪ್ರಾಯೋಜಕತ್ವ ವಹಿಸಲಾಗಿತ್ತು.

68) 2016 ನವೆಂಬರ್ 14 ರಂದು ಮೋಡಲ್ ಎಜುಕೇಷನ್ ಟ್ರಸ್ಟ್ (ರಿ) ಸುಳ್ಯ ಇವರು ನಡೆಸಿದ ಗ್ರೀನ್ ವ್ಯೂ ಮಕ್ಕಳ ಹಬ್ಬ–2016 ಕಾರ್ಯಕ್ರಮಕ್ಕೆ ಸಾಂಸ್ಕೃತಿಕ ಕಲಾತಂಡ ಪ್ರಾಯೋಜಿಸಲಾಗಿತ್ತು.

69) 2016 ನವೆಂಬರ್ 14 ರಂದು ಭಾಲಭವನ ಕಬ್ಬನ್ ಪಾರ್ಕ್ ಬೆಂಗಳೂರು ಇಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆವತಿಯಿಂದ ನಡೆಸಿದ 2016 ಮಕ್ಕಳ ಹಬ್ಬ ಕಾರ್ಯಕ್ರಮಕ್ಕೆ ಸಾಂಸ್ಕೃತಿಕ ಕಲಾತಂಡಗಳನ್ನು ಪ್ರಾಯೋಜಿಸಲಾಗಿತ್ತು.

70) 2016 ನವೆಂಬರ್ 26 ರಂದು 2015ನೇ ಸಾಲಿನ ಗೌರವ ಪ್ರಶಸ್ತಿ ಕಾರ್ಯಕ್ರಮವನ್ನು ರವೀಂದ್ರ ಕಲಾಕ್ಷೇತ್ರ, ಬೆಂಗಳೂರು ಇಲ್ಲಿ ಹಮ್ಮಿಕೊಳ್ಳಲಾಗಿತ್ತು.

71) 2016 ನವೆಂಬರ್ 30 ರಂದು ನಡೆದ ವಿರಾಜಪೇಟೆ ಕನ್ನಡ ಸಾಹಿತ್ಯ ಪರಿಷತ್ ಇದರ 7ನೇ ಕನ್ನಡ ಸಾಹಿತ್ಯ ಸಮ್ಮೇಳನ ಕಾರ್ಯಕ್ರಮಕ್ಕೆ ಸಾಂಸ್ಕೃತಿಕ ಕಲಾತಂಡ ಕಳುಹಿಸಲಾಗಿತ್ತು.

72) 2016 ಡಿಸೆಂಬರ್ 07 ಮತ್ತು 08 ರಂದು ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜು ಆವರಣದಲ್ಲಿ "ಸಂಗಮ ಸಂಭ್ರಮ–2016" ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

73) 2016 ಡಿಸೆಂಬರ್ 10 ಮತ್ತು 11 ರಂದು ಗೌಡ ಸಮುದಾಯ ಭವನ ಕೊಡಿಯಾಲ್‌ಬೈಲು ಸುಳ್ಯ ಇಲ್ಲಿ "ಅರೆಭಾಷೆ ಸಾಂಸ್ಕೃತಿಕ ಮತ್ತು ಸಾಹಿತ್ಯ ಸಮ್ಮೇಳನ ಗೌಜಿ–2016"ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

74) 2016 ಡಿಸೆಂಬರ್ 15 ರಂದು ಅರೆಭಾಷೆ ಅಕಾಡೆಮಿ ಸ್ಥಾಪನೆಯಾದ ದಿನ ಡಿಸೆಂಬರ್ 15ನ್ನು ಅರೆಭಾಷೆ ಸೌಹಾರ್ದ ದಿನವನ್ನಾಗಿ ಕೊಡಗು ಗೌಡ ಸಮಾಜ, ಮಡಿಕೇರಿ ಇಲ್ಲಿ ಆಚರಿಸಲಾಯಿತು.

75) 2016 ಡಿಸೆಂಬರ್ 23 ರಂದು ಜಿಲ್ಲಾ ಕರಾವಳಿ ಉತ್ಸವ ಸಮಿತಿ ಇವರ ಸಹಯೋಗದಲ್ಲಿ "ಕರಾವಳಿ ಉತ್ಸವ" ಮಂಗಳೂರಿನಲ್ಲಿ ಕಲಾ ಉತ್ಸವದ ಮೆರವಣಿಗೆ ತಂಡ ಪ್ರಾಯೋಜಕತ್ವ ನೀಡಿತು.

76) 2016 ಡಿಸೆಂಬರ್ 26 ರಂದು ಐದು ಭಾಷಾ ಅಕಾಡೆಮಿಗಳ ಕೂಡುವಿಕೆಯಿಂದ ಕೆ.ವಿ.ಜಿ. ಸುಳ್ಯ ಹಬ್ಬದ ಅದ್ದೂರಿ ಸಾಂಸ್ಕೃತಿಕ ಮೆರವಣಿಗೆ ಕಾರ್ಯಕ್ರಮ ಪ್ರಾಯೋಜಕತ್ವ ನೀಡಿತು.

77) 2017 ಜನವರಿ 22 ರಂದು ನೇತಾಜಿ ಯುವಕ ಮತ್ತು ಯುವತಿ ಮಂಡಳಿ, ತಾಳತ್ತಮನೆ ಇವರ "ಬೆಳ್ಳಿ ಮಹೋತ್ಸವ 2016–17" ತಂಡ ಪ್ರಾಯೋಜಕತ್ವ ನೀಡಿತು.

78) 2017 ಜನವರಿ 26 ರಂದು ಅಕಾಡೆಮಿ ಸಿದ್ಧಪಡಿಸಿದ ಪೂರ್ಣಚಂದ್ರ ತೇಜಸ್ವಿರವರ "ಕರ್ವಾಲೋ" ಅರೆಭಾಷೆ ನಾಟಕ ಸುಳ್ಯದ ರಂಗಮಂದಿರದಲ್ಲಿ ಪ್ರದರ್ಶನವಾಯಿತು.

79) 2017 ಏಪ್ರಿಲ್ 5 ರಂದು ಸಮಾಜ ಕಲ್ಯಾಣ ಇಲಾಖೆ, ಕೊಡಗು ಜಿಲ್ಲೆ ಇವರು ನಡೆಸಿದ "ಡಾ. ಬಾಬು ಜಗಜೀವನ್ ರಾಮ್‌ರವರ 110ನೇ ಜನ್ಮ ದಿನಾಚರಣೆ"ಗೆ ಮೆರವಣಿಗೆ ತಂಡ ಪ್ರಾಯೋಜನೆ ನೀಡಿತು.

80) 2017 ಏಪ್ರಿಲ್ 24 ರಂದು ಮಂಡೆಕೋಲು ಗ್ರಾಮದಲ್ಲಿ ನಡೆದ "ಶ್ರೀ ಮಹಾವಿಷ್ಣು ದೇವರ ವಾರ್ಷಿಕೋತ್ಸವ" ಕಾರ್ಯಕ್ರಮದಲ್ಲಿ ಕೋಲಾಟ ತಂಡ ಪ್ರಾಯೋಜನೆ ನೀಡಿತು.

81) 2015 ನವೆಂಬರ್ 01 ರಿಂದ 2017 ಆಗಸ್ಟ್ 31ರವರೆಗೆ ಮಡಿಕೇರಿ ಆಕಾಶವಾಣಿಯಲ್ಲಿ ಬಿತ್ತರ ಆಗುತ್ತಿರುವ ಸುದ್ದಿಜೊಂಪೆ, ಅರೆಭಾಷೆ ವಾರ್ತೆಯನ್ನು ಅರೆಭಾಷೆ ಅಕಾಡೆಮಿ ಪ್ರಾಯೋಜನೆ ನೀಡಿತು.

82) 2017 ಜುಲೈ 23 ರಂದು ಅರೆಬಾಸೆ ಸಂಸ್ಕೃತಿ ಪರಿಪಾಲಕರ ಸಮಾಗಮ, ಮೈಸೂರು ಗೌಡ ಸಮಾಜ ಸಹಯೋಗದಲ್ಲಿ ಮೈಸೂರಿನಲ್ಲಿ ನಡೆಯಿತು.

83) 2017 ಆಗಸ್ಟ್ 11 ರಂದು 2016 ಮತ್ತು 2017ನೇ ಸಾಲಿನ ಗೌರವ ಪ್ರಶಸ್ತಿ ಪ್ರದಾನ ಸಮಾರಂಭ, ಗೌಡ ಸಮಾಜ ಮಡಿಕೇರಿಯಲ್ಲಿ ನಡೆಯಿತು.

84) 2017 ಆಗಸ್ಟ್ 11 ರಂದು ಸಂಜೆ ಅಕಾಡೆಮಿ ಕಛೇರಿಯಲ್ಲಿ "ಅನುಭವ ಮಂಟಪ" ಅಕಾಡೆಮಿ ಅಧ್ಯಕ್ಷರು ಮತ್ತು ಸದಸ್ಯರು ತಮ್ಮ ಅಧಿಕಾರದ ಅವಧಿಯ ಅನುಭವಗಳನ್ನು ಹಂಚಿಕೊಂಡರು.

85) 2017 ಆಗಸ್ಟ್ 13 ರಂದು ಕೊಡಗು ಜಿಲ್ಲಾ ಪತ್ರಕರ್ತರ ಸಂಘ ಇವರ ಪ್ರಾಯೋಜಕತ್ವದಲ್ಲಿ ಭಾಷಾ–ಮಾಧ್ಯಮ (ಚಿಂತನ–ಮಂಥನ) ಗೌಡ ಸಮಾಜ ಮಡಿಕೇರಿಯಲ್ಲಿ ಏರ್ಪಡಿಸಲಾಗಿತ್ತು.

# ನೂತನ ಅಧ್ಯಕ್ಷರ ಪದಗ್ರಹಣ ಮತ್ತು ವಿದ್ವಾಂಸರ ವಿಚಾರ ಸಂಕಿರಣ




ದಿನಾಂಕ 08.09.2014 ರಂದು ಅಕಾಡೆಮಿಯ ನೂತನ ಅಧ್ಯಕ್ಷರಾದ ಶ್ರೀ ಕೊಲ್ಯದ ಗಿರೀಶ್‌ರವರು ನಿಕಟ ಪೂರ್ವ ಅಧ್ಯಕ ಶ್ರೀ ಎನ್.ಎಸ್. ದೇವಿಪ್ರಸಾದ್ ರವರಿಂದ ಅಧಿಕಾರ ಸ್ವೀಕಾರ ಮಾಡಿದರು. ಈ ಸಂದರ್ಭ ವಿದ್ವಾಂಸರ ವಿಚಾರ ಸಂಕಿರಣ ಕಾರ್ಯಕ್ರಮವನ್ನು ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು. ಅಕಾಡೆಮಿಯ ಮಾಜಿ ಅಧ್ಯಕ್ಷರಾದ ಶ್ರೀ ಎನ್. ಎಸ್. ದೇವಿಪ್ರಸಾದ್‌ರವರು ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಅರೆಭಾಷೆ ಸಾಹಿತ್ಯ-ಸಂಸ್ಕೃತಿಯ ಸರ್ವಾಂಗೀಣ ಪ್ರಗತಿಗಾಗಿ ದುಡಿಯುತ್ತಿರುವ ಮಹನೀಯರ ಸಲಹೆಗಳನ್ನು ಗಮನದಲ್ಲಿ - ಟ್ಟುಕೊಂಡು ಸರ್ವ ಸದಸ್ಯರ ಸಭೆಯಲ್ಲಿ ಕ್ರಿಯಾಯೋಜನೆ ರೂಪಿಸಲಾಗುವುದೆಂದು ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾದ ಶ್ರೀ ಕೊಲ್ಯದ ಗಿರೀಶ್‌ರವರು ಭರವಸೆ ನೀಡಿದರು. ಅರೆಭಾಷೆ ಸಾಹಿತ್ಯವನ್ನು ಪ್ರೋತ್ಸಾಹಿಸಲು ಪುಸ್ತಕ ಪ್ರಕಟಣೆ, ಪದಕೋಶ ರಚನೆ, ಭಾಷಾಂತರ, ಸಾಕ್ಷ್ಯಚಿತ್ರ ರಚನೆ ಮಾಡಲು ಉದ್ದೇಶಿಸಲಾಗಿದೆ. ಯುವ ಸಾಹಿತಿಗಳಿಗಾಗಿ ವಿಚಾರ ಸಂಕಿರಣ, ಸಾಹಿತ್ಯ ಶಿಬಿರ, ಕವಿಗೋಷ್ಠಿ ಆಯೋಜಿಸುವುದು, ಗೌರವ ಪ್ರಶಸ್ತಿ, ತ್ರೈಮಾಸಿಕ ಸಂಚಿಕೆ ಪ್ರಕಟಣೆ ಹಾಗೂ ಅಕಾಡೆಮಿ ವೆಬ್‌ಸೈಟ್ ರೂಪಿಸುವುದು, ಸಂಸ್ಕೃತಿಯ ಸೊಗಡನ್ನು ಪರಿಚಯಿಸುವ ಸಾಂಸ್ಕೃತಿಕ ಸ್ಪರ್ಧೆ. ಸಂಸ್ಕೃತಿಗೆ ಸಂಬಂಧಿಸಿದ ಕಲೆಗಳ ತರಬೇತಿ ಶಿಬಿರ, ನಾಟಕ ತರಬೇತಿ,ವೇಷಭೂಷಣ-ವಾದ್ಯ ಪರಿಕರ ವಿತರಣೆ, ಜನಪದ ಸಂಗೀತ ಉತ್ಸವ ಮತ್ತು ನೃತ್ಯೋತ್ಸವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. ಹೊರಭಾಗದಲ್ಲಿರುವ ಅರೆಭಾಷಿಕರನ್ನು

ಒಗ್ಗೂಡಿಸುವತ್ತ ಗಮನಹರಿಸಲಾಗುವುದು. ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೆಲೆಸಿರುವ ಅರೆಭಾಷಿಕ ಗೌಡರ ಬಗ್ಗೆ ಅಧ್ಯಯನ ಮಾಡಿ ಅದನ್ನು ಪುಸ್ತಕ ರೂಪದಲ್ಲಿ ದಾಖಲಿಸಲಾಗುವುದು. ಸಾಹಿತ್ಯ,ಸಂಸ್ಕೃತಿ, ಜನಪದವನ್ನು ಲಿಖಿತ ರೂಪದಲ್ಲಿ ದಾಖಲು ಮಾಡಲಾಗುವುದು. ಕನ್ನಡ ಸಾಹಿತ್ಯ ಪರಿಷತ್ ಜತೆಯಲ್ಲಿ ಸಾಹಿತ್ಯ ಸಂಗಮ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದೆಂಬ ಅಭಿಪ್ರಾಯವನ್ನು ಅಧ್ಯಕ್ಷರು ತಿಳಿಸಿದರು.

ಅಕಾಡೆಮಿಯ ಮಾಜಿ ಅಧ್ಯಕ್ಷರಾದ ಶ್ರೀ ಎನ್.ಎಸ್.ದೇವಿಪ್ರಸಾದ್‌ರವರು ಮಾತನಾಡಿ ಚುನಾವಣಾ ನೀತಿ ಸಂಹಿತೆ ಹಿನ್ನೆಲೆಯಲ್ಲಿ ತಮ್ಮ ಅವಧಿಯಲ್ಲಿ ಉದ್ದೇಶಿತ ಕಾರ್ಯಕ್ರಮ ಮಾಡಲು ಸಾಧ್ಯವಾಗಲಿಲ್ಲ, ಹೊಸ ಅಧ್ಯಕ್ಷರಿಗೆ ಸಂಪೂರ್ಣ ಸಹಕಾರ ನೀಡಲಾಗುವುದು ಎಂದು ಹೇಳಿದರು.

ನಮ್ಮ ಜನಪದ ಉಳಿಸಲು ಸರ್ಕಾರ ಅಕಾಡೆಮಿ ರಚಿಸಿದೆ. ಅರೆಭಾಷಿಕರನ್ನು ವೃದ್ಧಿ ಮಾಡಬೇಕು. ಅರೆಭಾಷೆ ಗೌಡರ ಮೂಲ ಭಾಷೆಯಾಗಿದ್ದು, ಅರೆಭಾಷೆ ಮಾತನಾಡುವ ಅಭಿಮಾನಿಗಳ ಸಂಖ್ಯೆ ಹೆಚ್ಚಾಗಬೇಕು. ಮೂಲ ಸಂಸ್ಕೃತಿಯ ಉದಯದ ಬಗ್ಗೆ ಸಂಶೋಧನೆ ನಡೆಯಬೇಕು, ಕೊಡವ ಮತ್ತು ಅರೆಭಾಷೆ ಅಕಾಡೆಮಿಗೆ ಕನ್ನಡ ಸಾಹಿತ್ಯ ಪರಿಷತ್ ಮಾತೃ



ಸಮಾನ ಎಂದು ಕಸಾಪ ಜಿಲ್ಲಾಧ್ಯಕ್ಷ ಶ್ರೀ ಟಿ.ಪಿ.ರಮೇಶ್ ಹೇಳಿದರು.

ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾದ ಶ್ರೀ ಬಿ.ಎಸ್.ತಮ್ಮಯ್ಯ, ಮಾಜಿ ಶಾಸಕರಾದ ಶ್ರೀ ಎಚ್.ಡಿ.ಬಸವರಾಜು, ಕಾಂಗ್ರೆಸ್ ಜಿಲ್ಲಾಧ್ಯಕ್ಷರಾದ ಶ್ರೀ ಬಿ.ಟಿ.ಪ್ರದೀಪ್,ಅಕಾಡೆಮಿ ಸದಸ್ಯರಾದ ಡಾ. ಕೋರನ ಸರಸ್ವತಿ ಪ್ರಕಾಶ್, ಶ್ರೀಮತಿ ಸಂಗೀತಾ ರವಿರಾಜ್‌ರವರು ವೇದಿಕೆಯಲ್ಲಿದ್ದರು. ಶ್ರೀಮತಿ ರೇವತಿ ರಮೇಶ್, ಶ್ರೀಮತಿ ಕಾಂಚನಾ ಗೌಡ ಮತ್ತು ಶ್ರೀಮತಿ ಗುತ್ತಿಮುಂಡನ ಇಂದಿರಾ ಪ್ರಾರ್ಥಿಸಿದರು. ಶ್ರೀಮತಿ ಪುದಿಯನೆರವನ ರೇವತಿ ರಮೇಶ್ ನಿರೂಪಿಸಿದರು. ಅಕಾಡೆಮಿ ರಿಜಿಸ್ಟ್ರಾರ್ ಶ್ರೀಮತಿ ಮಂಗಳ ಎಂ. ನಾಯಕ್ ರವರು ಸ್ವಾಗತಿಸಿದರು. ಡಾ.ಕೋರನ ಸರಸ್ವತಿಯವರು ವಂದಿಸಿದರು.

---

**■ ವಿದ್ವಾಂಸರ ಸಭೆಯಲ್ಲಿ ಅಕಾಡೆಮಿ ಅಧ್ಯಕ್ಷ ಕೊಲ್ಯದ ಗಿರೀಶ್ ಭರವಸೆ**

# ಅರೆಭಾಷೆ ಅಭಿವೃದ್ಧಿಗೆ ಕ್ರಿಯಾ ಯೋಜನೆ

ಮಡಿಕೇರಿ: ಅರೆಭಾಷೆ ಸಾಹಿತ್ಯ- ಸಂಸ್ಕೃತಿಯ ಸರ್ವಾಂಗೀಣ ಪ್ರಗತಿಗಾಗಿ ದುಡಿಯುತ್ತಿರುವ ಮಹನೀಯರ ಸಲಹೆ ಗಮನದಲ್ಲಿಟ್ಟುಕೊಂಡು ಸರ್ವ ಸದಸ್ಯರ ಸಭೆಯಲ್ಲಿ ಕ್ರಿಯಾಯೋಜನೆ ರೂಪಿಸಲಾಗುವುದೆಂದು ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಕೊಲ್ಯದ ಗಿರೀಶ್ ಭರವಸೆ ನೀಡಿದರು.

ಅಕಾಡೆಮಿ ಕಚೇರಿಯಲ್ಲಿ ಸೋಮವಾರ ನಡೆದ ವಿದ್ವಾಂಸರ ಸಭೆ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಅರೆಭಾಷೆ ಸಾಹಿತ್ಯ ಪ್ರೋತ್ಸಾಹಿಸಲು ಪುಸ್ತಕ ಪ್ರಕಟಣೆ, ಪದಕೋಶ ರಚನೆ, ಭಾಷಾಂತರ, ಸಾಕ್ಷ್ಯಚಿತ್ರ ರಚನೆ ಮಾಡಲು ಉದ್ದೇಶಿಸಲಾಗಿದೆ



ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಕಚೇರಿಯಲ್ಲಿ ಸೋಮವಾರ ನಡೆದ ವಿದ್ವಾಂಸರ ಸಭೆಯನ್ನುದ್ದೇಶಿಸಿ ಮಾಜಿ ಶಾಸಕ ಎಚ್.ಡಿ. ಬಸವರಾಜು ಮಾತನಾಡಿದರು.

ವೇದಿಕೆಯಲ್ಲಿ ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಬಿ.ಎಸ್ ತಮ್ಮಯ್ಯ, ಮಾಜಿ ಶಾಸಕ ಎಚ್ ಡಿ ಬಸವರಾಜು, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಬಿ.ಟಿ ಪ್ರದೀಪ್, ಅಕಾಡೆಮಿ ಸದಸ್ಯರಾದ ಡಾ ಕೋರನ ಸರಸ್ವತಿ, ಸಂಗೀತಾ ರವಿರಾಜ್ ಇದ್ದರು.

ರೇವತಿ ರಮೇಶ್, ಕಾಂಚನಾ ಗೌಡ, ಗುತ್ತಿಮುಂಡನ ಇಂದಿರಾ ಪ್ರಾರ್ಥಿಸಿದರು. ಪುದಿಯನೆರವನ ರೇವತಿ ರಮೇಶ್ ನಿರೂಪಿಸಿದರು. ಮಂಗಳಾ ನಾಯಕ್ ಸ್ವಾಗತಿಸಿದರು. ಡಾ ಕೋರನ ಸರಸ್ವತಿ ವಂದಿಸಿದರು.



# ಐನ್‌ಮನೆ ಸಂಸ್ಕೃತಿ ಜಂಬರ

**ಅವಿಭಕ್ತ ಕುಟುಂಬ ಪದ್ಧತಿಯು ರೂಢಿಯಲ್ಲಿರುವ ಕಡೆ ಅರೆಭಾಷಿಕರು ಐನ್ ಮನೆಗಳಲ್ಲಿ ವಾಸಿಸುತ್ತಿದ್ದರು. ಒಂದೇ ಅಡುಗೆ ಮನೆಯನ್ನು ಹೊಂದಿರುವ, ಕುಟುಂಬಸ್ಥರೆಲ್ಲಾ ಕೂಡುಕುಟುಂಬವಾಗಿ ವಾಸವಾಗುವ ಮನೆಯನ್ನು "ಐನ್‌ಮನೆ" ಅಥವಾ "ದೊಡ್ಡಮನೆ" ಎನ್ನುತ್ತಾರೆ. ಇವು ಅರೆಭಾಷಿಕರ ಜೀವನಾದರ್ಶ, ಸಂಸ್ಕೃತಿಗಳ ಪ್ರತೀಕವಾಗಿದೆ.**

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಹಾಗೂ ಕೊಂಪುಳಿರ ಐನ್‌ಮನೆ ಆಶ್ರಯದಲ್ಲಿ ಐನ್‌ಮನೆ ಸಂಸ್ಕೃತಿ ಜಂಬರ ದಿನಾಂಕ 14.12.2014 ರಂದು ವಿಜೃಂಭಣೆಯಿಂದ ನಡೆಯಿತು.

ಐಕೊಳ ಗ್ರಾಮದಲ್ಲಿ ಕೊಂಪುಳಿರ ಐನ್‌ಮನೆಯಲ್ಲಿ ಆಯೋಜಿಸಿದ್ದ ಐನ್‌ಮನೆ ಸಂಸ್ಕೃತಿ ಜಂಬರವನ್ನು ಗೌಡ ಸಂಸ್ಕೃತಿಯಂತೆ ಗುರುಕಾರ್ಣರಿಗೆ ಪೂಜೆ ಸಲ್ಲಿಸಿ ಕೊಂಪುಳಿರ ಕುಟುಂಬದ ಪಟ್ಟೆದಾರ ಕೊಂಪುಳಿರ ಕುಟ್ಟಪ್ಪನವರು ನೆಲ್ಲಕ್ಕಿ ದೀಪ ಬೆಳಗಿಸಿ ಚಾಲನೆ ಕೊಟ್ಟರು.

ಐನ್‌ಮನೆ ಸಂಸ್ಕೃತಿ ಜಂಬರ ಪ್ರಯುಕ್ತ ಗ್ರಾಮೀಣ ಕ್ರೀಡಾ ಸ್ಪರ್ಧೆಯನ್ನು ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಕೊಲ್ಯದ ಗಿರೀಶ್ ತೆಂಗಿನ ಕಾಯಿಗೆ ಗುಂಡು ಹೊಡೆಯುವ ಮೂಲಕ ಉದ್ಘಾಟನೆ ಮಾಡಿದರು.





ಕೊಂಪುಳಿರ ಕುಟುಂಬ ಹಾಗೂ ಐಕೊಳ ಗ್ರಾಮಸ್ಥರಿಗೆ ಆಯೋಜಿಸಿದ್ದ ವಿವಿಧ ಸ್ಪರ್ಧೆಗಳಲ್ಲಿ ಮಕ್ಕಳಿಂದ ಇಳಿವಯಸ್ಸಿನವರೆಗೂ ಸೇರಿದ್ದ ಜನರು ಭಾಗವಹಿಸಿ ಸಂಭ್ರಮಿಸಿದರು.

ವಿಚಾರಗೋಷ್ಠಿ: ಶ್ರೀ ಕಟ್ರತನ ಬೆಳ್ಯಪ್ಪ ರವರ ಅಧ್ಯಕ್ಷತೆಯಲ್ಲಿ ನಡೆದ ವಿಚಾರಗೋಷ್ಠಿಯಲ್ಲಿ "ಅವಿಭಕ್ತ ಕುಟುಂಬ" ಬಗ್ಗೆ ಬಾರಿಯಂಡ ಜೋಯಪ್ಪ, "ಐನ್‌ಮನೆ ಸಂಸ್ಕೃತಿ" ಆಚಾರ-ವಿಚಾರ ಬಗ್ಗೆ ಶ್ರೀಮತಿ ಮಿಲನ ಭರತ್, "ಅರೆಭಾಷೆ ಜನಾಂಗ ನಡೆದು ಬಂದ ಹಾದಿ" ಬಗ್ಗೆ ಶ್ರೀ ಕುಡೆಕಲ್ ಸಂತೋಷ್ ವಿಚಾರ ಮಂಡಿಸಿದರು.

ಸಂಜೆ ನಡೆದ ಮುಕ್ತಾಯ ಸಮಾರಂಭವನ್ನು ಜಿ.ಪಂ. ಅಧ್ಯಕ್ಷೆ ಚೋಡುಮಾಡ ಶರೀನ್ ಸುಬ್ಬಯ್ಯ ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು,

# ಸಂಸ್ಕೃತಿ - ಪದ್ಧತಿಯನ್ನು ಮರೆಯದಿರಿ

## 'ಐನ್‌ಮನೆ' ಸಂಸ್ಕೃತಿ ಜಂಬರದಲ್ಲಿ ಗಣ್ಯರ ಅಭಿಮತ



ಆಶ್ರಯದಲ್ಲಿ ನಡೆದ 'ಐನ್‌ಮನೆ' ಸಂಸ್ಕೃತಿ

ಕೊಡಗಿನ ಸಂಸ್ಕೃತಿಯ ಪ್ರತೀಕವಾಗಿರುವ ಐನ್‌ಮನೆಗಳನ್ನು ಪೋಷಿಸಬೇಕು. ಈ ಕಾರ್ಯದಲ್ಲಿ ಮಹಿಳೆಯರ ಪಾತ್ರ ಬಹಳಷ್ಟಿದೆ ಎಂದು ಹೇಳಿದರು. ಹೈಟೆಕ್ ಯುಗದಲ್ಲಿ ಯುವ ಪೀಳಿಗೆ ಉದ್ಯೋಗ ಅರಸಿ ಹೊರ ರಾಜ್ಯ, ದೇಶಗಳಿಗೆ ಹೋಗುತ್ತಾರೆ. ಎಲ್ಲೇ ಇದ್ದರೂ ನಮ್ಮ ಸಂಸ್ಕೃತಿಯನ್ನು ಮರೆಯಬಾರದೆಂದರು. ನಮ್ಮ ಆಸ್ತಿ-ಪಾಸ್ತಿಯನ್ನು ಯಾವುದೇ ಕಾರಣಕ್ಕೂ ಮಾರಾಟ ಮಾಡಬಾರದೆಂದು ಯುವ ಪೀಳಿಗೆಗೆ ಕಿವಿಮಾತು ಹೇಳಿದ ಅವರು, ಗ್ರಾಮದ ಅಭಿವೃದ್ಧಿಗೆ ಸಹಕಾರ ನೀಡುವುದಾಗಿ ಭರವಸೆ ನೀಡಿದರು. ವಿಶಾಲವಾದ ಐನ್‌ಮನೆಯನ್ನು ಪೋಷಿಸುತ್ತಾ ಬಂದಿರುವ ಕೊಂಪುಳಿ ಕುಟುಂಬಸ್ಥರ ಕಾಳಜಿ ಬಗ್ಗೆ ಶ್ಲಾಘನೆ ವ್ಯಕ್ತಪಡಿಸಿದ ಶರೀನ್ ಸುಬ್ಬಯ್ಯ, ಗ್ರಾಮ ಮಟ್ಟದಲ್ಲಿ ಇಂತಹ ಕಾರ್ಯಕ್ರಮ ಹಮ್ಮಿಕೊಂಡಿರು-ವುದರಿಂದ ಸಂಸ್ಕೃತಿ ಉಳಿಯಲು ಸಾಧ್ಯವೆಂದು ಹೇಳಿದರು.

ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಶಾಂತೆಯಂಡ ವೀಣಾ ಅಚ್ಚಯ್ಯ ಮಾತನಾಡಿ ಕೊಡಗಿನ ಸಂಸ್ಕೃತಿಯನ್ನು ಉಳಿಸಿ, ಬೆಳೆಸುವುದು ಯುವ ಪೀಳಿಗೆಯಿಂದ ಮಾತ್ರ ಸಾಧ್ಯವೆಂದು ಹೇಳಿದರು. ಹಿಂದೆ ಇದ್ದಂತಹ ಐನ್‌ಮನೆಗಳು, ಅವಿಭಕ್ತ ಕುಟುಂಬ ಜೀವನ ಇಂದು ಮರೆಯಾಗಿದೆ. ಇಂತಹ ಸಂದರ್ಭದಲ್ಲಿ ಅರೆಭಾಷೆ ಅಕಾಡೆಮಿ ಐನ್‌ಮನೆ ಸಂಸ್ಕೃತಿ ಎಂಬ ಕಾರ್ಯಕ್ರಮ ಹಮ್ಮಿಕೊಂಡಿರುವುದು ಶ್ಲಾಘನೀಯ ಕಾರ್ಯವೆಂದರು. ಜಿಲ್ಲೆಯ ಅರೆಭಾಷೆ ಗೌಡ ಜನಾಂಗ ಹಾಗೂ ಕೊಡವ ಜನಾಂಗದವರ ಸಂಸ್ಕೃತಿ, ಪದ್ಧತಿ, ಆಚಾರಗಳು ಒಂದೇ ರೀತಿಯಾಗಿದ್ದು, ಇದನ್ನು ಮುಂದಿನ ಪೀಳಿಗೆಗೆ ಉಳಿಸಿಕೊಳ್ಳಬೇಕಿದೆ ಎಂದು ಹೇಳಿದರು.














# ಮುಖ್ಯಮಂತ್ರಿಗಳಿಂದ ಲೋಕಾರ್ಪಣೆಗೊಂಡ ವೆಬ್‌ಸೈಟ್




ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಗೆ ತನ್ನದೇ ಆದ ವೆಬ್ ಸೈಟ್‌ನ ಅಗತ್ಯ ಇರುವುದನ್ನು ಮನಗಂಡು ಅಕಾಡೆಮಿ ಅದರ ರಚನೆಗೆ ಕ್ರಮ ಕೈಗೊಂಡಿತು. ಅದರಂತೆ ***"www.arebhasheacademy.com"*** ವೆಬ್‌ಸೈಟನ್ನು ರಚಿಸಿ ದಿನಾಂಕ 03.11.2014 ರಂದು ಮಡಿಕೇರಿಯು ಗಾಂಧಿ ಮೈದಾನದಲ್ಲಿ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರಿಂದ ಲೋಕಾರ್ಪಣೆಗೊಂಡಿತು. ವೆಬ್‌ಸೈಟನ್ನು ಚೀಯಂಡಿ ತೇಜಸ್ ಪಾಪಯ್ಯರವರು ರಚನೆ ಮಾಡಿರುತ್ತಾರೆ. ಈ ಕಾರ್ಯಕ್ರಮದಲ್ಲಿ ಕೊಡಗು ಗೌಡ ಯುವ ವೇದಿಕೆ ಕಲಾತಂಡದವರು ಮುಖ್ಯಮಂತ್ರಿಗಳನ್ನು ಸ್ವಾಗತಿಸಿತು.



# ಕುಶಾಲನಗರದಲ್ಲಿ ನಡೆದ ಅರೆಬಾಷೆ ಸಾಂಸ್ಕೃತಿಕ ಸಮ್ಮಿಲನ

## "ಅರೆಬಾಷೆ ಹಿರಿನ್ನ ಸಂಸ್ಕೃತಿ ಹಾಗೂ ಸಾಂಪ್ರದಾಯ ಇರುವ ಸುಂದರ ಸುಲಲಿತ ಬಾಷೆ" - ಸಚಿವೆ ಉಮಾಶ್ರೀ



ದಿನಾಂಕ 27.12.2014 ರಂದು ಅರೆಬಾಷೆ ಸಾಂಸ್ಕೃತಿಕ ಸಮ್ಮಿಲನ ಕಾರ್ಯಕ್ರಮವನ್ನು ಕನ್ನಡ ಮತ್ತು ಸಂಸ್ಕೃತಿ ಸಚಿವೆ ಉಮಾಶ್ರೀ ಉದ್ಘಾಟಿಸಿದರು. ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೆಲಸಿರುವ ಅರೆಬಾಷೆ ಜನಾಂಗದ ಆಚಾರ ವಿಚಾರ ಸಂಸ್ಕೃತಿ ಪರಂಪರೆಯನ್ನು ಉಳಿಸಿ ಬೆಳೆಸುವ ಮೂಲಕ ಮುಂದಿನ ಪೀಳಿಗೆಗೆ ಕೊಡುಗೆಯಾಗಿ ನೀಡಬೇಕು ಎಂಬ ಸದುದ್ದೇಶದಿಂದ ಅರೆಬಾಷೆ ಸಂಸ್ಕೃತಿಮತ್ತು ಸಾಹಿತ್ಯ ಅಕಾಡೆಮಿಯುನ್ನು ಸ್ಥಾಪಿಸಲಾಗಿದೆ ಎಂದು ಉಮಾಶ್ರೀ ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕೊಲ್ಯದ ಗಿರೀಶ್ ಮಾತನಾಡಿ, ಅರೆಭಾಷೆ ಸಂಸ್ಕೃತಿ, ಪರಂಪರೆಯನ್ನು ಬೆಳೆಸುವ ನಿಟ್ಟಿನಲ್ಲಿ ಅಕಾಡೆಮಿಯಿಂದ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ನುಡಿದರು.

ಶಾಸಕರಾದ ಶ್ರೀ ಕೆ.ಜಿ. ಬೋಪಯ್ಯ, ಶ್ರೀ ಅಪ್ಪಚ್ಚು ರಂಜನ್, ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ಶರೀನ್ ಸುಬ್ಬಯ್ಯ, ಕರಕುಶಲ ನಿಗಮದ ಅಧ್ಯಕ್ಷರಾದ, ಶ್ರೀಮತಿ ವೀಣಾ ಅಚ್ಚಯ್ಯ, ಕುಶಾಲನಗರ ಗೌಡಸಮಾಜದ ಅಧ್ಯಕ್ಷರಾದ ಕೇಚಪ್ಪನ ಮೋಹನ್ ಜಲ ಮಂಡಳಿ ಮಾಜಿ ಅಧ್ಯಕ್ಷೆ ಕೆ.ಪಿ.ಚಂದ್ರಕಲಾ, ಜಿಲ್ಲಾಕಾಂಗ್ರೆಸ್ ಅಧ್ಯಕ್ಷ ಬಿ.ಟಿ. ಪ್ರದೀಪ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಎಂ. ಲೋಕೇಶ್, ಅಲ್ಲದೆ ಗೌಡ ಸಮಾಜಗಳ ಅಧ್ಯಕ್ಷರುಗಳು ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಅಕಾಡೆಮಿ ರಿಜಿಸ್ಟ್ರಾರ್ ಶ್ರೀಮತಿ ಮಂಗಳಾ ಎಂ. ನಾಯಕ್ ಸಮಾರಂಭದಲ್ಲಿ ಉಪಸ್ಥಿತರಿದ್ದರು. ಅಕಾಡೆಮಿ ಸದಸ್ಯೆ ಕೋರನ ಸರಸ್ವತಿ ಆಶಯ ನುಡಿಗಳನ್ನಾಡಿ ದರು. ಗೌಡ ಸಮಾಜದ ನಿರ್ದೇಶಕ ಆನಂದ ಕರಂದ್ಲಾಜೆ ಪ್ರಾಸ್ತಾವಿಕ ಮಾತನ್ನಾಡಿದರು.

ಬೆಳಿಗ್ಗೆ ನಡೆದ ಮೆರವಣಿಗೆಯಲ್ಲಿ ಸುಬೇದಾರ್ ಗುಡ್ಡೆಮನೆ ಅಪ್ಪಯ್ಯಗೌಡರ ವೇಷಭೂಷಣದಲ್ಲಿ ಕುದುರೆ ಮೇಲೆ ಕುಳಿತು ಸಾಗಿದ ಮೆರವಣಿಗೆ ಆಕರ್ಷಕವಾಗಿತ್ತು. ಅಲ್ಲದೆ ಆಟಿಕಳಂಜ, ಯಕ್ಷಗಾನ ವೇಷದಲ್ಲಿದ್ದವರು ಮೆರವಣಿಗೆಗೆ ಮತ್ತಷ್ಟು ಮೆರಗು ನೀಡಿದರು.

ಅರೆಭಾಷೆ ಸಾಂಸ್ಕೃತಿಕ ಕಾರ್ಯಕ್ರಮಗಳಾದ ಜಾನಪದ, ಅರೆಭಾಷೆ ಸಾಂಸ್ಕೃತಿಕ ಸೊಬಗನ್ನು ಬಿಂಬಿಸುವ ಗೌಡರ ಸಿರಿ ಸಂಸ್ಕೃತಿ ದರ್ಶನ, ಜಾನಪದ ನೃತ್ಯ, ಏಕಪಾತ್ರಾಭಿನಯ, ಬೆಳ್ಕಾಟ, ಲಾವಣಿ ಪದ, ಸಾಂಪ್ರದಾಯಿಕ ನೃತ್ಯ, ಸೋಬಾನೆ, ಅರೆಭಾಷೆ ಹಾಡುಗಳು ಸಭಿಕರನ್ನು ರಂಜಿಸಿತು.

ಅಕಾಡೆಮಿ ಸದಸ್ಯ ಕುಡೇಕಲ್ ಯಶ್ವಂತ್ ಸ್ವಾಗತಿಸಿದರು. ಗೌಡಸಮಾಜದ ನಿರ್ದೇಶಕ ಮೋಹನ್ ನಿರೂಪಿಸಿದರು. ಕುರುಂಜಿ ಕಾವ್ಯ ತಂಡದವರು ಪ್ರಾರ್ಥಿಸಿದರು ಸಾವಿರಾರು ಭಾಷಾಭಿಮಾನಿಗಳು ಸಮಾರಂಭದಲ್ಲಿ ಭಾಗವಹಿಸಿದ್ದರು.

# ರಾಜ್ಯ ರಾಜಧಾನಿಯಲ್ಲಿ ಸಾಂಸ್ಕೃತಿಕ ಸಮಾವೇಶ



22.02.2015ರಂದು ಶ್ರೀಗಂಧಕಾವಲು, ಬೆಂಗಳೂರು ಇಲ್ಲಿ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ, ಕೊಡಗು ಜಿಲ್ಲಾ ಗೌಡ ಸಮಾಜ ಹಾಗೂ ದಕ್ಷಿಣ ಕನ್ನಡ ಗೌಡ ಸಮಾಜ, ಬೆಂಗಳೂರು ಇವರ ಸಹಯೋಗದಲ್ಲಿ ಸಾಂಸ್ಕೃತಿಕ ಸಮಾವೇಶ ಜರುಗಿತು. ಕ್ಯಾಲಿಫೋರ್ನಿಯಾದಲ್ಲಿ ನೆಲೆಸಿರುವ




ಕುಸುಮಾಧರ ಗೌಡ ಇವರು ಸಮಾವೇಶವನ್ನು ಉದ್ಘಾಟಿಸಿದರು. ಅಕಾಡೆಮಿ ಅಧ್ಯಕ್ಷರಾದ ಶ್ರೀ ಕೊಲ್ಯದ ಗಿರೀಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜ, ಬೆಂಗಳೂರು ಇದರ ಅಧ್ಯಕ್ಷರಾದ ಶ್ರೀ ಪದ್ಮಾಕೋಲ್ಚಾರ್, ಶ್ರೀಮತಿ ಡಾಟಿ ಸದಾನಂದಗೌಡ, ಸೀತಾ ಐಸ್‌ಕ್ರೀಂನ ವ್ಯವಸ್ಥಾಪಕ ನಿರ್ದೇಶಕ ಕಾಪಿಲ ಗಿರಿಯಪ್ಪ ಗೌಡ, ಹುಂಡೈ ಸೇವಾ ವಿಭಾಗದ ನಿರ್ದೇಶಕ ಬಿ.ರಾಧಾಕೃಷ್ಣ ಗೌಡ, ಶ್ರೀ ನಂಗಾರು ನಾಣಯ್ಯ, ಕದಂಬಾಡಿ ವಿಜಯಲಕ್ಷ್ಮಿ, ಅಕಾಡೆಮಿ ಸದಸ್ಯರಾದ ಮಂದ್ರೀರ ಮೋಹನ್‌ದಾಸ್ ಹಾಗೂ ಡಾ. ಪೂವಪ್ಪ ಕಣಿಯೂರು ಅವರುಗಳು ಉಪಸ್ಥಿತರಿದ್ದರು.







ರಾಜಧಾನಿಯಲ್ಲಿ ಅರೆಭಾಷೆ ಸಂಸ್ಕೃತಿ ಅನಾ










ಅಲ್ಲದೆ ಎಲ್ಲಾ ಗೌಡ ಸಮಾಜದ. ಸಂಘಸಂಸ್ಥೆಗಳ ಮುಖಂಡರು ಸಮಾರಂಭದಲ್ಲಿ ಆಸೀನರಾಗಿದ್ದರು.


ಆ ದಿನ ಶ್ರೀ ಹೊದ್ದೆಟಿ ಭವಾನಿಶಂಕರ ರವರ ಅಧ್ಯಕ್ಷತೆಯಲ್ಲಿ ನಡೆದ ವಿಚಾರಗೋಷ್ಠಿಯಲ್ಲಿ 'ಗೌಡರ ಮದುವೆಲಿ ಬಳಿ ಪದ್ಧತಿ' ಎಂಬ ವಿಚಾರದ ಕುರಿತು ಎಸ್.ಡಿ.ಎಂ. ಕಾಲೇಜಿನ ಉಪನ್ಯಾಸಕಾರದ ದಿವಾಕರ ಕೊಕ್ಕಡ ಇವರು ವಿಷಯ ಮಂಡಿಸಿದರು. 'ಗೌಡರ ಸಂಸ್ಕೃತಿಲಿ ಸೋಬಾನೆ' ಎಂಬ ವಿಷಯದ ಕುರಿತು ಹಿರಿಯ ಚಿಂತಕರಾದ ಶ್ರೀ ಅಮೆ ಕೆ. ಶಿವರಾಯ್ ಇವರು ಉಪನ್ಯಾಸ ನೀಡಿದರು.

ಅರೆಭಾಷೆ ಜಾನಪದ ಕೋಲಾಟ. ಅರೆಭಾಷೆ ನಾಟಕ. ಯಕ್ಷಗಾನ. ಮದುವೆ ಸಂಪ್ರದಾಯ ಪ್ರದರ್ಶನ. ಕೊಡಗು ಮತ್ತು ದಕ್ಷಿಣ ಕನ್ನಡ ಗೌಡರ ಸಾಂಸ್ಕೃತಿಕ ಬದುಕಿನ ಪ್ರದರ್ಶನ, ಅರೆಭಾಷೆ ಜಾನಪದ ನೃತ್ಯ ಸಿದ್ದವೇಷ. ಸೋಬಾನೆ, ಅರೆಭಾಷೆ ಪದ್ಯ, ನೃತ್ಯ. ಯೋಗಗುಚ್ಛ. ಕರಾವಳಿ ಗೌಡರ ದೀಪಾವಳಿ ಆಚರಣೆ ಮುಂತಾದ ಸಾಂಸ್ಕೃತಿಕ ಪ್ರದರ್ಶನ ನೋಡುಗರ ಮನಗೆದ್ದಿತು. ಶಿಕ್ಷಕಿ ಕುಂಬುಗೌಡನ ಲೀಲಾವತಿ ಹಾಗೂ ಓಂಡಿಮನೆ ನಾಗವೇಣಿ ಮೋಹನ್‌ಪ್ರಕಾಶ್ ನಿರೂಪಿಸಿದರು. ಚೆಟ್ಟಿಮಾಡ ನೇಹಾ ರವೀಂದ್ರ ಪ್ರಾರ್ಥಿಸಿದರೆ. ಅಕಾಡೆಮಿ ಸದಸ್ಯ ಕುದೆಕಲ್ ಸಂತೋಷ್ ವಂದಿಸಿದರು.

# ಚಿತ್ರಕಲಾ ಶಿಬಿ










ಸುಳ್ಯ ತಾಲೂಕಿನ ಕನಕಮಜಲು ಗ್ರಾಮದ ಯುವಕ ಮಂಡಲ ಇವರ ಸಹಯೋಗದಲ್ಲಿ ಅರೆಭಾಷೆ ಸಂಸ್ಕೃತಿಗೆ ಸಂಬಂಧಿಸಿದ ಚಿತ್ರಕಲಾ ಶಿಬಿರ ಒಂದು ವಾರಗಳವರೆಗೆ ನಡೆಸಲಾಯಿತು. ದಿನಾಂಕ: 11-04-2015 ರಂದು ಶ್ರೀ ವಸಂತ ಗಬಲಡ್ಕ ರವರ ಅಧ್ಯಕ್ಷತೆಯಲ್ಲಿ ಉದ್ಘಾಟನಾ ಕಾರ್ಯಕ್ರಮ ನಡೆಯಿತು. ದಿನಾಂಕ 17.04.2015 ರಂದು  ಕನಕಮಜಲುವಿನ ಶ್ರೀ ಆತ್ಮರಾಮ ಭಜನ ಮಂದಿರದಲ್ಲಿ







ಚಿತ್ರಕಲೆಯಲ್ಲಿ ಅರಳಿದ ಅರೆಭಾಷೆ ಸಂಸ್ಕೃತಿ, ಬದುಕು



ಕಲಾವಿದರ ಕುಂಚದಲ್ಲಿ ಅರಳಿದ ಭಾಷಾ ಸಂಸ್ಕೃತಿ ಚಿತ್ರಣ

■ ಅರೆ ಭಾಷೆ ಅಕಾಡೆಮಿಯಿಂದ ವಿಶಿಷ್ಟ ಕಲಾ ಪ್ರಯೋಗ ■ ಸುಳ್ಯದಲ್ಲಿ ಒಂದು ವಾರ ನಡೆದ ಶಿಬಿರ ಸಮಾರೋಪ

















ಸಮಾರೋಪ ಸಮಾರಂಭ ಶ್ರೀ ಕೊಲ್ಯದ ಗಿರೀಶ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು.

ದೇಶದ ನಾನಾ ಭಾಗಗಳಿದಂದ ಕಲಾವಿದರು ಭಾಗವಹಿಸಿದ್ದರು. ಕಲಾವಿದರು ರಚಿಸಿದ ಒಂದೊಂದು ಚಿತ್ರಗಳು ಅರೆಭಾಷೆ ಸಂಸ್ಕೃತಿಯನ್ನು ಬಿಂಬಿಸುವಂತಿದ್ದು ಚಿತ್ರಗಳನ್ನು ಆಲ್ಬಮ್ ಮಾಡಿಸಿ ಅಕಾಡೆಮಿ ಕಚೇರಿಯಲ್ಲಿ ಇರಿಸಲಾಗಿದೆ.

ಆ ದಿನ ಸ್ಥಳೀಯ ಕವಿಗಳು ಅರೆಭಾಷೆ ಕಾವ್ಯ ವಾಚನ ಮಾಡಿದರು. "ಅರೆಭಾಷೆ ಸಂಸ್ಕೃತಿ"ಬಗ್ಗೆ ಡಾ. ಕರುಣಾಕರ ನಿಡಿಂಜಿ ಇವರು ಉಪನ್ಯಾಸ ಮಾಡಿದರು.

ಅಕಾಡೆಮಿ ಸದಸ್ಯರಾದ ಮೋಹನ್ ಸೋನರವರು ಸಂಚಾಲಕರಾಗಿ ಕಾರ್ಯ ನಿರ್ವಹಿಸಿದರು.











# ಕರವಾಳಿಯಲ್ಲಿ ಸಂಗಮ ಸಂಭ್ರಮ

ಕನ್ನಡ ಸಂಸ್ಕೃತಿ ಇಲಾಖೆ ಬೆಂಗಳೂರು ಇವರ ಅಧೀನದಲ್ಲಿ 2015ನೇ ಜುಲೈ 24 ಮತ್ತು 25 ರಂದು ರಾಜ್ಯದ ಐದು ಅಕಾಡೆಮಿಗಳು, ಪುಸ್ತಕ ಪ್ರಾಧಿಕಾರ, ಭಾಷಾ ಭಾರತಿ ಹಾಗೂ ಅಧ್ಯಯನ ಕೇಂದ್ರಗಳ "ಸಂಗಮ ಸಂಭ್ರಮ-2015" 2 ದಿನಗಳ ರಾಜ್ಯ ಸಮ್ಮೇಳನ ಮಂಗಳೂರಿನ ಪಿಲಿಕುಳ ನಿಸರ್ಗಧಾಮ ಇಲ್ಲಿ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಅಕಾಡೆಮಿಯಿಂದ ಸಾಂಸ್ಕೃತಿಕ ಮೆರವಣಿಗೆ ಕಲಾತಂಡಗಳು, ಕುದುರೆ ಮೇಲೆ ಸುಭೇದಾರ್ ಅಪ್ಪಯ್ಯಗೌಡರ ವೇಷಭೂಷಣದ ಮೆರವಣಿಗೆ ನಡೆಯಿತು. "ವರ್ತಮಾನದ ತಲ್ಲಣಗಳು-ಸಾಂಸ್ಕೃತಿಕ ಪ್ರತಿಕ್ರಿಯೆ" ಎಂಬ ತಿರುಳಿನ ಮೇಲೆ ಸಾಂಸ್ಕೃತಿಕ ಕಾರ್ಯಕ್ರಮವನ್ನು




ಅಕಾಡೆಮಿವತಿಯಿಂದ ಅಭಿನಯ ಕಲಾಮಿಲನ, ಭಾಗಮಂಡಲ ಇವರ 60 ಜನ ಕಲಾವಿದರು ಬಹಳ ಅರ್ಥಪೂರ್ಣವಾಗಿ ಪ್ರದರ್ಶಿಸಿದರು. ಶ್ರೀಮತಿ ಲೀಲಾ ದಾಮೋದರ, ಸುಳ್ಯ ಇವರು ಬಹುಭಾಷಾ ಕವಿಗೋಷ್ಠಿಯಲ್ಲಿ ಅರೆಭಾಷೆ ಕವನ ವಾಚನ ಮಾಡಿದರು. ಶ್ರೀ ಬಾರಿಯಂಡ ಜೋಯಪ್ಪನವರು ಕಥಾರಂಗದಲ್ಲಿ ಅರೆಭಾಷೆ ಕಥೆ ಹೇಳಿದರು. "ಅಧ್ಯಕ್ಷರೊಂದಿಗೆ ಒಂದು ಮಾತು" ಕುರಿತು ವಿಶೇಷ ಆಹ್ವಾನಿತರಿಂದ ಪ್ರಶ್ನೆ-ಉತ್ತರ ಕಾರ್ಯಕ್ರಮದಲ್ಲಿ ಶ್ರೀ ಶಿವಕುಮಾರ್, ಶ್ರೀಮತಿ ಕಾಂಚನ, ಶ್ರೀ ಜಿ.ಆರ್. ಜೋಯಪ್ಪ, ಶ್ರೀ ಎನ್.ಎ.ಜ್ಞಾನೇಶ್, ಶ್ರೀ ಚಂದ್ರಶೇಖರ ಪೇರಾಲು ಇವರು ಭಾಗವಹಿಸಿದ್ದರು.

**ಅರೆಭಾಷೆ ಅಕಾಡೆಮಿಯಿಂದ ರಾಜ್ಯದ ಜನತೆಗೆ ಅರೆಭಾಷೆ, ಸಂಸ್ಕೃತಿ, ಸಾಹಿತ್ಯ ಮತ್ತು ಜನಪದ ಇವುಗಳ ಮೊದಲ ಪರಿಚಯ ಮತ್ತು ಅಥಿತಿಗಳು ಮತ್ತು ವೀಕ್ಷಕರುಗಳಿಂದ ಶ್ಲಾಘನೆ**








# ಮರೆತಿದ್ದ ಆಚರಣೆ ನೆನಪಿಸಿದ 'ಆಟಿ ಹಬ್ಬ'

ಜುಲೈ ಮಧ್ಯಭಾಗದಿಂದ ಆಗಸ್ಟ್ ಮಧ್ಯ ಭಾಗವನ್ನು ವಿಶೇಷವಾಗಿ ಆಟಿತಿಂಗಳು ಎಂದು ಪರಿಗಣಿಸಲಾಗುವುದು. ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಈ ಸಂದರ್ಭದಲ್ಲಿ ಅತಿಯಾದ ಮಳೆ ಇರುವ ಕಾರಣ ಹಾಗೂ ಈ ಸಮಯದಲ್ಲಿ ಭತ್ತದ ಕೃಷಿ ಚಟುವಟಿಕೆಯಿಂದ ರೈತರ ಆರೋಗ್ಯ ಕಾಪಾಡಿಕೊಳ್ಳಲು ಆಟಿ ತಿಂಗಳಲ್ಲಿ ವಿಶೇಷ ವಾದ ಖಾದ್ಯಗಳನ್ನು ಹಾಗೂ ತಿನಿಸುಗಳನ್ನು ಸೇವಿಸುತ್ತಾರೆ.

ಆಟಿ ತಿಂಗಳ 18ನೇ ದಿನದಂದು ಆಟಿಸೊಪ್ಪಿನ ರಸದಿಂದ ಬಗೆ ಬಗೆಯ ತಿನಿಸುಗಳನ್ನು ಮಾಡಿ ಉಪಯೋಗಿಸಲಾಗುವುದು. ಅಂದು ಆಟಿಸೊಪ್ಪಿನ ಗಿಡದಲ್ಲಿ (ಮದ್ದುಸೊಪ್ಪು) 18 ಬಗೆಯ ಔಷದಿಗಳು ತುಂಬಿರುತ್ತದೆ ಎಂಬುದು ವಾಡಿಕೆ.

## ಮರಗೋಡು

2015ನೇ ಆಗಸ್ಟ್ 08 ಶನಿವಾರದಂದು ಮರಗೋಡು ಸ್ಪೋರ್ಟ್ಸ್ ಅಂಡ್ ರಿಕ್ರಿಯೇಷನ್ ಕ್ಲಬ್ ಇವರ ಸಹಯೋಗದಲ್ಲಿ "ಆಟಿ ಹಬ್ಬ" ಕಾರ್ಯಕ್ರಮವನ್ನು ಮರಗೋಡುವಿನಲ್ಲಿ ಆಚರಿಸಲಾಯಿತು. ಸಭಾರಂಭದ ಅಧ್ಯಕ್ಷತೆಯನ್ನು ಅಕಾಡೆಮಿ ಅಧ್ಯಕ್ಷರಾದ ಕೊಲ್ಯದ ಗಿರೀಶ್‌ರವರು ವಹಿಸಿದರು. ಉದ್ಘಾಟನೆಯನ್ನು ಮರಗೋಡು ಸ್ಪೋರ್ಟ್ಸ್ ಅಂಡ್ ರಿಕ್ರಿಯೇಷನ್ ಕ್ಲಬ್‌ನ ಅಧ್ಯಕ್ಷ



ಕೋಚನ ಲವಿನ್ ರವರು ನೆರವೇರಿಸಿದರು. ಮುಖ್ಯ ಅಥಿತಿಗಳಾಗಿ ಶಾಸಕರಾದ ಕೆ.ಜಿ. ಬೋಪಯ್ಯ, ಜಿಲ್ಲಾ ಪಂಚಾಯತ್ ಸದಸ್ಯೆ ಕೆ.ಪಿ. ಚಂದ್ರಕಲಾ, ಗ್ರಾಮ ಪಂಚಾಯ್ತಿ ಅಧ್ಯಕ್ಷ ಬಿದ್ರುಪಣೆ ಮೋಹನ್, ಕೊಡಗು ಗೌಡ ಸಮಾಜದ ಅಧ್ಯಕ್ಷ ಪೇರಿಯನ ಜಯಾನಂದ್, ಶ್ರೀಮತಿ ತೋಟಂಬೈಲು ಪಾರ್ವತಿ ಇವರು ಉಪಸ್ಥಿತರಿದ್ದರು. ಕಾರ್ಯಕ್ರಮ ಸಂಚಾಲಕ ರಾಗಿ ಮಂದ್ರಿರ ಮೋಹನ್‌ದಾಸ್ ಕಾರ್ಯ ನಿರ್ವಹಿಸಿದರು. ಸಮಾರಂಭದ ನಿರೂಪಣೆಯನ್ನು ಶ್ರೀಮತಿ ಕೋಚನ ಡೀನಾ ಅನುಪ್ ಮತ್ತು ಕಟ್ಟೆಮನೆ ಸೋನಾಜಿತ್ ನಿರ್ವಹಿಸಿದರು.

ಸಾಂಪ್ರದಾಯಿಕ ಆಚರಣೆ, ಪದ್ಧತಿ, ಜೀವನ ಶೈಲಿ ಮರೆಯಾಗುತ್ತಿರುವ ಇಂದಿನ ಜೀವನ ವ್ಯವಸ್ಥೆ ನಡುವೆ ಮರಗೋಡುವಿನಲ್ಲಿ ನಡೆದ ಆಟಿ ಹಬ್ಬ ಕಾರ್ಯಕ್ರಮ ಹಿಂದಿನ ತಲೆಮಾರಿನ ಆಚರಣೆ ಹೇಗಿತ್ತು ಎಂಬುದನ್ನು ನೆನಪಿಸಿತು.

ಕೊಡಗಿನಲ್ಲಿ ಕೃಷಿ ಚಟುವಟಿಕೆ ಬಿರುಸು ಪಡೆಯುತ್ತಿರುವ ಸಂದರ್ಭ ಆಟಿ ತಿಂಗಳಿಗೆ ವಿಶೇಷ ಮಹತ್ವವಿದೆ. ಎಲ್ಲರೂ ಒಂದಾಗಿ ಬೆರೆತು ಆಚರಿಸುವ ಇಂತಹ ವಿನೂತನ ಸಂಪ್ರದಾಯಕ್ಕೆ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಹಾಗೂ ಮರಗೋಡು ಸ್ಪೋರ್ಟ್ಸ್ ಅಂಡ್ ರಿಕ್ರಿಯೇಷನ್ ಕ್ಲಬ್ ನಾಂದಿ ಹಾಡಿತು.

ಇಲ್ಲಿನ ಗೌಡ ಸಮಾಜಕ್ಕೆ ಬಂದವರಿಗೆ






ಯಾವುದೋ ಹಳ್ಳಿ ಮನೆಗೆ ಬಂದ ಅನುಭವ. ಆವರಣ ಪ್ರವೇಶಿಸುತ್ತಿದ್ದಂತೆ ಎತ್ತು, ಕೋಳಿ, ಭತ್ತ ಕುಟ್ಟುವ ಪರಿಕರ, ಸಭಾಂಗಣದ ಒಳ ಭಾಗದಲ್ಲಿ ಭತ್ತದ ಹುಲ್ಲಿನ ಚಪ್ಪರ, ನೊಗ ನೇಗಿಲು, ತಳಿರು ತೋರಣದ ಸ್ವಾಗತವಿತ್ತು. ಕಾರ್ಯಕ್ರಮಕ್ಕೆ ಬಂದಿದ್ದ ಕಿರಿ ವಯಸ್ಸಿನವರು ತಮ್ಮ ಹಿರಿಯರ ಪಾದ ಮುಟ್ಟಿ ನಮಸ್ಕರಿಸಿ ಆಶೀರ್ವಾದ ಪಡೆಯುತ್ತಿದ್ದರು. ಗ್ರಾಮೀಣ ಭಾಗದಲ್ಲಿ ಹೆಚ್ಚಾಗಿ ಬಳಕೆ ಮಾಡುವ ಬೆಲ್ಲದ ಕಪ್ಪು ಕಾಫಿ ಹಾಗೂ ತಿಂಡಿ ನೀಡಿ ಬಂದ ಅತಿಥಿಗಳನ್ನು ಸಂಘಟಕರು ಉಪಚರಿಸಿದರು.

ಒಳಭಾಗದಲ್ಲಿ ವಿನೂತನವಾಗಿ ಸಿಂಗಾರ ಗೊಂಡಿದ್ದ ಆಕರ್ಷಕ ವೇದಿಕೆ ಕಣ್ಮನ ಸೆಳೆಯಿತು. ಭತ್ತದ ಪೈರಿನಿಂದ ಕೆಳಭಾಗ ಸಿಂಗಾರಗೊಂಡಿದ್ದರೆ, ಮೇಲ್ಭಾಗದಲ್ಲಿ ಭತ್ತದ ಒಣ ಹುಲ್ಲಿನ ಅಲಂಕಾರ ಮಾಡಲಾಗಿತ್ತು. ತೋಟಂಬೈಲು ಪಾರ್ವತಿ ಸಂಗ್ರಹಿಸಿರುವ ಅಪರೂಪದಲ್ಲಿ ಅಪರೂಪ ಎನಿಸುವ ಪರಿಕರಗಳು ವೇದಿಕೆಯನ್ನು ಕಳೆಗಟ್ಟುವಂತೆ ಮಾಡಿತ್ತು.

ಆಟಿ ತಿಂಗಳಲ್ಲಿ ಜಿಲ್ಲೆಯ ಜನ ಸೇವಿಸುವ ವಿವಿಧ ಖಾದ್ಯ ಸಭಾಂಗಣದ ಒಂದು ಬದಿಯಲ್ಲಿ, ಕೊಡಗಿನಲ್ಲಿ ಸಿಗುವ ಕಾಡುಹಣ್ಣು ಮತ್ತು ಗಿಡಗಳ ಪ್ರದರ್ಶನವನ್ನು ಮತ್ತೊಂದು ಬದಿಯಲ್ಲಿ ಏರ್ಪಡಿಸಲಾಗಿತ್ತು. ವೇದಿಕೆ ಕಾರ್ಯಕ್ರಮಕ್ಕೆ ಸಾಂಕೇತಿಕವಾಗಿ ನಾಟ ನೆಡುವ ಮೂಲಕ ಗಣ್ಯರು ಚಾಲನೆ ನೀಡಿದರು. ಬಳಿಕ ಮಧ್ಯಾಹ್ನ

ಪ್ರದರ್ಶನಗೊಂಡ ಕಾಡು ಹಣ್ಣು ಮತ್ತು ಗಿಡಗಳು

ಕರ್ಮಂಜೆ ಹಣ್ಣು
ಮಜ್ಜಿಗೆ ಹಣ್ಣು
ಇಡಂಜಿ ಹಣ್ಣು
ಮಡಕೆ ಹಣ್ಣು
ಗೊಣ್ಣೆ ಹಣ್ಣು
ಲಕೋಟೆ ಹಣ್ಣು
ಬೀರಂಗಿ ಹಣ್ಣು
ಜೀರುಗುಳ್ಳಿ ಹಣ್ಣು
ನೇರಳೆ ಹಣ್ಣು
ರಂಜೋಳ ಹಣ್ಣು
ಕಕ್ಕಡೆ ಹಣ್ಣು
ಕಾರ ಹಣ್ಣು
ಗೊಟ್ಟೆ ಹಣ್ಣು
ರಾಮಫಲ
ಸೀತಾಫಲ
ಕೊಕ್ಕರಚಿ ಹಣ್ಣು
ಚೂರಿ ಹಣ್ಣು
ಕೊಡಂಬಾಳೆ ಹಣ್ಣು
ಪಡಚಿ ಹಣ್ಣು
ಮೇದ ಪಡಚಿ ಹಣ್ಣು
ಸರಳಿ ಹಣ್ಣು
ತಡಸಲೆ ಹಣ್ಣು
ಕೂಮೆ ಹಣ್ಣು
ಇಪ್ಪಿಲಿ ಹಣ್ಣು
ಗೆಣಕೆ ಹಣ್ಣು
ಗುಮ್ಮಟೆ ಹಣ್ಣು
ಪೊಪ್ಪಾಯಿ ಹಣ್ಣು
ಸಣ್ಣಕ್ಕಿ ಹಣ್ಣು
ಅತ್ತಿ ಹಣ್ಣು
ಕಿತ್ತಳೆ ಹಣ್ಣು
ಪಡುಗುಳಿ
ಚಕ್ಕೋತ
ನೆಲ್ಲಿಕಾಯಿ
ಕೋಡ ಕಿತ್ತುಳಿ
ಮಾವಿನ ಹಣ್ಣು
ಸೀಪೆಕಾಯಿ
ಪುಣಸೆ ಹಣ್ಣು




ಭೋಜನಕ್ಕಾಗಿ ಸಿದ್ಧಪಡಿಸಿದ್ದ ಆಟಿ ಪಾಯಸ, ಪತ್ರೊಡೆ, ನಾಟಿ ಕೋಳಿ ಸಾರು, ಅನ್ನ, ಕಣಲೆ ಪಲ್ಯ, ಗಾಂಧಾರಿ ಮೆಣಸಿನ ಚಟ್ನಿಯನ್ನು ಸಾರ್ವಜನಿಕರು ಸವಿದರು.

## ಜಾನಪದ ಕ್ರೀಡಾ ಕಲರವ :

ನಂತರ ಜಾನಪದ ಕ್ರೀಡೆಗಳಾದ ಬಳೆಚೂರು ಆಟ, ಕವಡೆ ಆಟ, ಕಡ್ಡಿ ಆಟ, ಕಲ್ಲಾಟ, ಹಗ್ಗ ಹಾರುವುದು, ಕುಂಟೆ ಬಿಲ್ಲೆ ಆಟದಲ್ಲಿ ಮಹಿಳೆಯರು ಹಾಗೂ ಮಕ್ಕಳು ಪಾಲ್ಗೊಂಡು ಸಂಭ್ರಮಿಸಿದರು.

## ಆಟಿರುಚಿ– ರಸದೂಟ

ಅಣಬೆ, ಮರಕೆಸ, ಆಟಿ ಸೊಪ್ಪು, ಕಣಿಲೆ, ಏಡಿ ಮುಂತಾದವುಗಳಿಂದ ಖಾದ್ಯ ತಯಾರಿಸಲಾಗಿತ್ತು. ಉಪ್ಪಿಟ್ಟು, ಪತ್ರೊಡೆ, ಹಪ್ಪಳ, ಹಲ್ವಾ, ಕಡುಬು, ಪಕೋಡ, ರೊಟ್ಟಿ, ಪಾಯಸ, ಚಟ್ನಿ ಸೇರಿದಂತೆ ವಿವಿಧ ಬಗೆಯ ಖಾದ್ಯಗಳನ್ನು ಪ್ರದರ್ಶನಕ್ಕಿಡಲಾಗಿತ್ತು. ಜತೆಗೆ ಶುಂಠಿ,ಕಿತ್ತಳೆ, ಜಂಬು ನೇರಳೆ, ಕಾಡು ಹಲಸು, ಕಾಡು ನೆಲ್ಲಿ, ಅಮಹಣ್ಣು, ಚಿತ್ರಾಂಗಿ, ಚುಂಡೆಹಣ್ಣು, ಕಾಡು ಟೊಮ್ಯಾಟೋ, ರೋಸ್ ಹಣ್ಣು, ಗುಮ್ಮಟೆ ಹಣ್ಣು, ಪುಣರ್ ಪುಳಿ ಒಳಗೊಂಡತೆ ಹಲವು ಬಗೆಯ ಕಾಡು ಹಣ್ಣು ಹಾಗೂ ಗಿಡಗಳು ಜನರಿಗೆ ಪರಿಚಿತವಾದವು.



# ಕೋಡಿಯಾಲ್ ಬೈಲ್

2015ನೇ ಆಗಸ್ಟ್ 09 ರ ಆದಿತ್ಯವಾರ ಸುಳ್ಯ ತಾಲೂಕಿನ ಗೌಡರ ಯುವ ಸೇವಾ ಸಂಘ(ರಿ), ನಗರ ಸಮಿತಿ, ಮಹಿಳಾ ಘಟಕ ಮತ್ತು ತರುಣ ಘಟಕಗಳ ಸಹಕಾರಲಿ "ಆಟಿ ಜಂಬರ" ಕಾರ್ಯಕ್ರಮವನ್ನು ಗೌಡ ಸಮುದಾಯ ಭವನ, ಕೊಡಿಯಾಲ್ ಬೈಲ್ ಇಲ್ಲಿ ಏರ್ಪಡಿಸಲಾಗಿತ್ತು.

ಹಿರಿಯರು ಆಚರಿಸಿಕೊಂಡು ಬಂದಿದ್ದ ಆಟಿ ಈಗಿನ ಯುವ ಪೀಳಿಗೆ ತಿಳಿದುಕೊಂಡು ಮುಂದೆಯೂ ಆಚರಿಸಿಕೊಂಡು ಹೋಗುವ ಸಲುವಾಗಿ ಈ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಶ್ರೀ ಕೊಲ್ಯದ ಗಿರೀಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಶ್ರೀ ದಿನೇಶ್ ಮಡಪ್ಪಾಡಿ ಅಧ್ಯಕ್ಷರು, ಗೌಡರ ಯುವಾ ಸೇವಾ ಸಂಘ(ರಿ) ಸುಳ್ಯ ಇವರು ಕಾರ್ಯಕ್ರಮದ ಉದ್ಘಾಟನೆ ಮಾಡಿದರು. ಪಡ್ಡಂಬೈಲ್ ಶ್ರೀ ವೆಂಕಟರಮಣ ಗೌಡ, ಹಿರಿಯ ನ್ಯಾಯವಾದಿ, ಶ್ರೀಮತಿ ಸಾವಿತ್ರಿ ವಿಶ್ವನಾಥ, ಕುರುಂಜಿ ಕುಟುಂಬದ ಹಿರಿಯರು ಮುಖ್ಯ ಅತಿಥಿಗಳಾಗಿ ಭಾಗ ವಹಿಸಿದ್ದರು.

ಈ ಕಾರ್ಯಕ್ರಮದಲ್ಲಿ ಚನ್ನೆಮಣೆ ಆಟ, ಅಡಿಕೆ ಸುಲಿಯುವುದು, ಮದರಂಗಿ, ರಂಗೋಲಿ ಹಾಕುವುದು, ಶೋಭಾನೆ ಹೇಳುವುದು, ಸಂಗೀತ ಕುರ್ಚಿ, ಅರೆಭಾಷೆ ಗಾದೆ ಮಾತು, ಬರವಣಿಗೆ ಸ್ಪರ್ಧೆ, ತೆಂಗಿನಕಾಯಿ ಸಿಪ್ಪೆ ತೆಗೆಯುವುದು, ತೆಂಗಿನ ಕಾಯಿ ಕುಟ್ಟುವುದು ಮುಂತಾದ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಮಕ್ಕಳು, ಮಹಿಳೆಯರು, ವಯಸ್ಕರು, ಪುರುಷರು ಎಲ್ಲರು ಭೇದ-ಭಾವ



## ಸುಳ್ಯದಲ್ಲಿ ಅರೆಭಾಷೆ ಅಕಾಡೆಮಿಯಿಂದ 'ಆಟಿ ಜಂಬರ'



ಇಲ್ಲದೆ ಈ ಸ್ಪರ್ಧೆಯಲ್ಲಿ ಭಾಗವಹಿಸಿ ಮನರಂಜನೆ ಪಡೆದರು. ನೃತ್ಯ, ಹಾಡು, ಮಿಮಿಕ್ರಿ, ವಾದ್ಯ ಕುಣಿತ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು.

ಸಾಂಪ್ರದಾಯಿಕ ವಸ್ತುಗಳನ್ನು ಪ್ರದರ್ಶನಕ್ಕೆ ಇಡಲಾಗಿತ್ತು. ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು. ಹೆಚ್ಚಿನ ಸಂಖ್ಯೆಯಲ್ಲಿ ಭಾಷಾಭಿಮಾನಿಗಳು ಭಾಗಿಯಾಗಿದ್ದರು. ಎಲ್ಲರಿಗೂ ಆಟಿ ತಿಂಗಳ ಸಾಂಪ್ರದಾಯಿಕ ಊಟದ ವ್ಯವಸ್ಥೆಯನ್ನು ಮಾಡಲಾಗಿತ್ತು. ಶ್ರೀ ಬಿ.ಸಿ.ವಸಂತ ಅಕಾಡೆಮಿ ಸದಸ್ಯರು ಕಾರ್ಯಕ್ರಮದ ಸಂಚಾಲಕರಾಗಿ ಕಾರ್ಯನಿರ್ವಹಿಸಿದ್ದರು.







## ಮಂಡೆಕೋಲು

2015ರ ಆಗಸ್ಟ್ 09 ರ ಆದಿತ್ಯವಾರ ಸುಳ್ಯ ತಾಲೂಕಿನ ಸ.ಹಿ.ಪ್ರಾಥಮಿಕ ಶಾಲೆ, ಪುತ್ಯ ಇಲ್ಲಿ ಮಂಡೆಕೋಲು ಗೌಡ ಸಮಿತಿ, ಮಹಿಳಾ ಘಟಕ, ತರುಣ ಘಟಕ, ಶಿವಾಜಿ ಆರ್ಟ್ಸ್ ಕ್ಲಬ್ ಸಹಕಾರದಲ್ಲಿ ಆಟಿ ಉತ್ಸವವನ್ನು ಏರ್ಪಡಿಸ ಲಾಗಿತ್ತು. ಗ್ರಾಮ ಪಂಚಾಯಿತಿ ಅಧ್ಯಕ್ಷೆ ಶ್ರೀಮತಿ ಮೋಹಿನಿ ಚಂದ್ರಶೇಖರ್ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಅಕಾಡೆಮಿ ಸದಸ್ಯರಾದ ಶ್ರೀ ಸದಾನಂದ ಮಾವಜಿಯವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು.

ಚೆನ್ನೆಮಣೆ, ತಟ್ಟೆ ಹೆಣೆಯುವುದು, ತೆಂಗಿನ ಕಾಯಿಗೆ ಕಲ್ಲು ಹೊಡೆಯುವುದು, ಅಂಬುಗಾಯಿ, ಸಂಗೀತ ಕುರ್ಚಿ ಮುಂತಾದ ಜಾನಪದ ಆಟಗಳ ಸ್ಪರ್ಧೆಗಳಿದ್ದುವು. ನೃತ್ಯ, ಅರೆಭಾಷೆ ಹಾಡು, ಕೋಲಾಟ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳಿದ್ದವು.

ಸಮಾರೋಪ ಸಮಾರಂಭದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು. ಭಾಷಾಭಿಮಾನಿಗಳು, ಸ್ಥಳೀಯರು ಮುಂತಾಗಿ ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

## ದುಗ್ಗಲಡ್ಕ

ಸುಳ್ಯ ತಾಲೂಕು ಸರಕಾರಿ ಪ್ರೌಢ ಶಾಲೆ, ದುಗ್ಗಲಡ್ಕ ಇಲ್ಲಿ 2015ರ ಆಗಸ್ಟ್ 16 ರಂದು ಕುರಲ್ ತುಳುಕೂಟ ದುಗ್ಗಲಡ್ಕ, ಗೌಡ ಸಂಘ ದುಗ್ಗಲಡ್ಕ, ಮಿತ್ರ ಯುವಕ ಮಂಡಲ ಕ್ಕೊಕುಳಿ ಇವುಗಳ ಸಹಕಾರದಲ್ಲಿ "ಆಟಿ ಉತ್ಸವ" ವನ್ನು ಏರ್ಪಡಿಸ ಲಾಗಿತ್ತು.

ಸಮಾರಂಭವನ್ನು ಅಕಾಡೆಮಿ ಅಧ್ಯಕ್ಷರಾದ ಶ್ರೀ ಕೊಲ್ಯದ ಗಿರೀಶ್ ಅವರು ಬೆಳಿಗ್ಗೆ 9.30ಕ್ಕೆ ಉದ್ಘಾಟಿಸಿದರು. ಸುಳ್ಯ ನಗರ ಪಂಚಾಯತ್‌ನ ಅಧ್ಯಕ್ಷರಾದ ಶ್ರೀ ಎನ್. ಎ.ರಾಮಚಂದ್ರ ಇವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀ ದುರ್ಗಾಪ್ರಸಾದ್ ರೈ ಕುಂಬ್ರ, ಸದಸ್ಯರು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಶ್ರೀ ಚಂದ್ರಾಕೋಲ್ಚಾರ್, ಅಧ್ಯಕ್ಷರು ಶ್ರೀ ವೆಂಕಟರಮಣ ಕ್ರೆಡಿಟ್ ಕೋ. ಆಪರೇಟಿವ್ ಸುಳ್ಯ, ಶ್ರೀಮತಿ ಶಶಿಕಲಾ ನೀರಜಿದರೆ, ಅಕಾಡೆಮಿ ಸದಸ್ಯರಾದ ಶ್ರೀ ಸದಾನಂದ ಮಾವಾಜಿ, ಶ್ರೀಮತಿ ರಾಜೇಶ್ವರಿ, ಪ್ರಭಾರ ಮುಖ್ಯೋಪಾಧ್ಯಾ ಯರು ಇವರು ಮುಖ್ಯ ಅತಿಥಿಗಳಾಗಿದ್ದರು.

ಆಟಿ ತಿಂಗಳ ಮಹತ್ವದ ಬಗ್ಗೆ ಶ್ರೀ ನಂದರಾಜ್ ಸಂಕೇಶ್, ನಿವೃತ್ತ ಅಂಚೆ ಪಾಲಕರು ಅರ್ಥಪೂರ್ಣ ವಾಗಿ ಮಾತನಾಡಿದರು. ಜಾನಪದ ಆಟಗಳ ಸ್ಪರ್ಧೆ, ಜಾನಪದ ಕುಣಿತ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮ ಗಳಿದ್ದವು. ಹೆಚ್ಚಿನ ಸಂಖ್ಯೆಯಲ್ಲಿ ಅಭಿಮಾನಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಎಲ್ಲರಿಗೂ ಆಟಿ ತಿಂಗಳ ಸಾಂಪ್ರದಾಯಿಕ





## ಆಟಿ ಸಂಭ್ರಮ 2016

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ವತಿಯಿಂದ ದಿನಾಂಕ 14.08.2016 ಭಾನುವಾರದಂದು ಸುಳ್ಯ ತಾಲೂಕಿನ ದ.ಕ.ಜಿ.ಸ.ಹಿ.ಪ್ರಾ ಶಾಲೆ ಪೈಲಾರು ಇಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ರಿ) ಪ್ರಗತಿ ಬಂಧು ಸ್ವ ಸಹಾಯ ಸಂಘಗಳ ಒಕ್ಕೂಟ ಪೈಲಾರು ಶ್ರೀ ಲಕ್ಷ್ಮೀ ಮಹಿಳಾ ಜ್ಞಾನವಿಕಾಸ ಕೇಂದ್ರ ಪೈಲಾರು ಹಾಗೂ ಫ್ರೆಂಡ್ಸ್ ಕ್ಲಬ್ ಪೈಲಾರು (ರಿ) ಇವರ ಆಶ್ರಯದಲ್ಲಿ ಆಟಿ ಸಂಭ್ರಮ 2016 ಕಾರ್ಯಕ್ರಮ ವನ್ನು ವಿಜೃಂಭಣೆಯಿಂದ ನಡೆಸಲಾಯಿತು.

ಗ್ರಾಮೀಣ ಹಾಗೂ ಮನರಂಜನೆ ಕ್ರೀಡೆಗಳಾದ ಲಗೋರಿ, ಮಡಲ್ ಹೆಣೆಯೋದು, ಕಾಯಿ ಕುಟ್ಟುವುದು, ಚೆನ್ನೆಮಣೆ, ಕುಂಟಬಿಲ್ಲೆ, ಅಂಬುಗಾಯಿ, ನೋಂಡಿ, ಕಲ್ಲಾಟ, ಅಡಿಕೆ ಹಾಳೆಲಿ ಕುಳಿತು ಎಳೆಯುವುದು ಕೆಸರು ಗದ್ದೆ ಓಟ ಇವುಗಳನ್ನು ಹಮ್ಮಿಕೊಳ್ಳಲಾಗಿತ್ತು. ಭಜನೆ, ಅರೆಭಾಸೆ ಜಾನಪದ ಹಾಡು ಸ್ಪರ್ಧೆಗಳು ಜಾನಪದ ಸಂಭ್ರಮ ಸಾಂಸ್ಕೃತಿಕ ಕಾರ್ಯಕ್ರಮ ವನ್ನು ಹಮ್ಮಿಕೊಂಡು ಬೆಳಿಗ್ಗೆ 9.00 ಗಂಟೆಗೆ ಪ್ರಾರಂಭವಾಗಿ ಸಂಜೆ 6.30 ಗಂಟೆಗೆ ಮುಕ್ತಾಯ ವಾದ ಈ ಕಾರ್ಯಕ್ರಮದಲ್ಲಿ ಸ್ಥಳೀಯರು, ಕಲಾವಿದರು, ಅತಿಥಿಗಳು, ಕ್ರೀಡಾಭಿಮಾನಿಗಳೂ, ಭಾಷಾಭಿಮಾನಿಗಳು ಸೇರಿದ್ದು ಇವರಿಗೆ ಆಟಿ ತಿಂಗಳ ಸಂಪ್ರದಾಯದಂತೆ ಊಟದ ವ್ಯವಸ್ಥೆ ಮಾಡಲಾಗಿತ್ತು.

## ಆಟಿ ಉತ್ಸವ

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಮಡಿಕೇರಿ ವತಿಯಿಂದ ದಿನಾಂಕ 15.08.2016 ರಂದು ಸುಳ್ಯ ತಾಲೂಕಿನ ಸ.ಉ.ಹಿ.ಪ್ರಾ ಶಾಲೆ ಅಜ್ಜನಗದ್ದೆ ಇಲ್ಲಿ ಗರುಡ ಯುವಕ ಮಂಡಲ (ರಿ) ಚೊಕ್ಕಾಡಿ ಇವರ ಸಹಯೋಗದಲ್ಲಿ ಆಟಿ ಉತ್ಸವ ಕಾರ್ಯಕ್ರಮ ವನ್ನು ನಡೆಸಲಾಯಿತು.

ಗ್ರಾಮೀಣ/ಮನರಂಜನೆ ಕ್ರೀಡೆಗಳಾದ ತೆಂಗಿನ ಕಾಯಿ ಕುಟ್ಟುವುದು, ನೋಂಡಿ, ಹಗ್ಗಜಗ್ಗಾಟ, ಸೋಗೆ ಓಟ, ಮಕ್ಕಳಿಗೆ ಕಪ್ಪೆ ಜಿಗಿತ, ಬಗ್ಗೆ ಒಡೆಯುವುದು, ಹುಣಸೆ ಬೀಜ ಹೆಕ್ಕುವುದು, ಕೆಸರು ಓಟ, ತೆಂಗಿನ ಕಾಯಿಗೆ ಗುರಿ ಇಡುವುದು, ಹಲಸಿನಕಾಯಿ ಪಾಸುಮಾಡುವುದು, ದಂಪತಿ ಇಟ್ಟಿಗೆ ನಡಿಗೆ ಇವುಗಳನ್ನು ಏರ್ಪಡಿಸಲಾಗಿತ್ತು.

ಸಾಂಸ್ಕೃತಿಕ ಕಾರ್ಯಕ್ರಮಗಳಾದ ಅರೆಭಾಷೆ ಗಾಯನ, ಅರೆಭಾಷೆ ಜಾನಪದ ನೃತ್ಯ, ಪ್ರಹಸನ ಮುಂತಾದ ಮನೋರಂಜನಾ ಕಾರ್ಯ ಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಬೆಳಿಗ್ಗೆ 9.30 ಗಂಟೆಗೆ ಪ್ರಾರಂಭವಾಗಿ ಸಂಜೆ 6.00 ಗಂಟೆಗೆ ಮುಕ್ತಾಯವಾದ ಈ ಕಾರ್ಯಕ್ರಮದಲ್ಲಿ ಕಲಾವಿದರು, ಭಾಷಾಭಿಮಾನಿ ಗಳು, ಕ್ರೀಡಾಭಿಮಾನಿಗಳು, ಅತಿಥಿಗಳು ಸ್ಥಳೀಯರು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮ ದಲ್ಲಿ ಭಾಗಿಯಾಗಿದ್ದು ಇವರಿಗೆಲ್ಲಾ ಆಟಿ ತಿಂಗಳ ಸಂಪ್ರದಾಯದ ಊಟದ ವ್ಯವಸ್ಥೆನೂ ಮಾಡ ಲಾಗಿದ್ದು ಕಾರ್ಯಕ್ರಮವು ವಿಜೃಂಭಣೆಯಿಂದ ನಡೆಯಿತು.



# ಪುತ್ತೂರಿನಲ್ಲಿ ಸಾಂಸ್ಕೃತಿಕ ಸಮಾವೇಶ

2015ರ ಭಾನುವಾರದಂದು ಒಕ್ಕಲಿಗರ ಗೌಡ ಸೇವಾ ಸಂಘ(ರಿ) ಪುತ್ತೂರು, ಗೌಡ ಯುವ ಸಂಘ ಮತ್ತು ಗೌಡ ಮಹಿಳಾ ಘಟಕ ಇವರ ಸಹಕಾರದಲ್ಲಿ "ಸಾಂಸ್ಕೃತಿಕ ಸಮಾವೇಶ" ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಶಾಸಕರಾದ ಶ್ರೀಮತಿ ಶಕುಂತಲಾ ಶೆಟ್ಟಿ ಸಮಾರಂಭವನ್ನು ಉದ್ಘಾಟಿಸಿದರು, ಶ್ರೀ ಕೊಲ್ಯದ ಗಿರೀಶ್, ಅಕಾಡೆಮಿ ಅಧ್ಯಕ್ಷರು, ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಇವರು ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಚಿವರಾದ ಶ್ರೀ ಬಿ. ರಮಾನಾಥ್ ರೈ,



ಶ್ರೀಮತಿ ಪಿಲಸ್ಯಾ ರೈ, ಅಧ್ಯಕ್ಷರು, ತಾಲೂಕು ಪಂಚಾಯತ್ ಪುತ್ತೂರು, ಶ್ರೀ ಜೀವಂಧರ್ ಜೈನ್, ಅಧ್ಯಕ್ಷರು ನಗರಸಭೆ ಪುತ್ತೂರು, ಶ್ರೀ ಸಿ.ಪಿ.ಜಯರಾಮ ಗೌಡ, ಶ್ರೀ ಮೋಹನ ಗೌಡ ಇಡ್ಯಡ್ಕ, ಶ್ರೀ ಯು.ಪಿ.ರಾಮಕೃಷ್ಣ







ಇವರು ಆಗಮಿಸಿದ್ದರು. ಅಕಾಡೆಮಿ ರಿಜಿಸ್ಟ್ರಾರ್ ಶ್ರೀ ಉಮರಬ್ಬನವರು ಉಪಸ್ಥಿತರಿದ್ದರು.

ಬೆಳಿಗ್ಗೆ 10.00 ಗಂಟೆಗೆ ವಿಚಾರಗೋಷ್ಠಿ ಆರಂಭವಾಯಿತು. ಇದರ ಅಧ್ಯಕ್ಷರಾಗಿ ಶ್ರೀ ಯು.ಸುಬ್ರಾಯಗೌಡ, ಪ್ರಾಂಶುಪಾಲರು, ಸರಕಾರಿ ಪದವಿ ಪೂರ್ವ ಕಾಲೇಜು, ಬೆಳ್ಳಾರೆ, ಅರೆಭಾಷೆ ವಿಕಾಸದ ಬಗ್ಗೆ ಉಪನ್ಯಾಸಕರಾಗಿ ಶ್ರೀ ಸೀತರಾಮ ಕೇವಳ, ಪ್ರಾಂಶುಪಾಲರು, ವಿದ್ಯಾರಶ್ಮಿ ವಿದ್ಯಾಸಂಸ್ಥೆ ಸವಣೂರು, ಹಾಗೂ ಮಹಿಳೆ ಮತ್ತು ಸಮಾಜದ ಬಗ್ಗೆ ಶ್ರೀಮತಿ ಚಂದ್ರಮತಿ, ಸರಕಾರಿ ಪ್ರೌಢಶಾಲೆ ಮರ್ಕಂಜ ಇವರು ಉಪನ್ಯಾಸ ನೀಡಿದರು.

ಸಾಂಸ್ಕೃತಿಕ ವೈಭವ ಕಾರ್ಯಕ್ರಮದಲ್ಲಿ ಡ್ಯಾನ್ಸ್‌ನಿನಾದ ತಂಡದಿಂದ ಶಾಸ್ತ್ರೀಯ ನೃತ್ಯ, ಜಾನಪದ ನೃತ್ಯ, ದೇಶಭಕ್ತಿಗೀತೆ, ಮಿತ್ರಬಳಗ (ರಿ). ಇವರಿಂದ ಅರೆಭಾಷೆ ನಾಟಕ, ಸುಭಾಷ್ ಪುಂಜ ನಿರ್ದೇಶನದ "ಪಂಚವಟಿ" ಅರೆಭಾಷೆ ಯಕ್ಷಗಾನವನ್ನು ಚೇತನ್ ಮತ್ತು ತಂಡದವರು ಪ್ರದರ್ಶನ ನೀಡಿದರು. ಗೌಡ ಯುವ ಸಂಘದವರು ಸಾಂಸ್ಕೃತಿಕ ನೃತ್ಯ, ಕುದುಪಜೆ ಪ್ರಕಾಶ ತಂಡ ಭಾಗಮಂಡಲ ಇವರಿಂದ ಅರೆಭಾಷೆ ಜಾನಪದ ಕೋಲಾಟ, ನಾಟ್ಯ ಮಿಲನ ನೃತ್ಯ ಶಾಲೆ ಇವರಿಂದ ಅರೆಭಾಷೆ ಜಾನಪದ ನೃತ್ಯ ಕಾರ್ಯಕ್ರಮದ ಪ್ರದರ್ಶನ ನಡೆಯಿತು.





# ಚೇರಂಬಾಣೆಯಲ್ಲಿ ವಿಜ್ರಂಭಿಸಿದ ಸಾಂಸ್ಕೃತಿಕ ವೈಭವ

2015 ಅಕ್ಟೋಬರ್ 11 ಮತ್ತು 12 ರಂದು "ಸಾಂಸ್ಕೃತಿಕ ವೈಭವ" ಕಾರ್ಯಕ್ರಮವನ್ನು ಕರ್ನಾಟಕ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ವತಿಯಿಂದ ಗೌಡಸಮಾಜ ಚೇರಂಬಾಣೆರವರ ಸಹಯೋಗದಲ್ಲಿ ಮಡಿಕೇರಿ ತಾಲೂಕಿನ ಚೇರಂಬಾಣೆ ಗ್ರಾಮದ ಅರುಣ ಪದವಿ ಪೂರ್ವ ಕಾಲೇಜ್ ಇಲ್ಲಿ ಆಯೋಜಿಸಲಾಗಿತ್ತು.

ತಾ॥ 12ರಂದು ನಡೆದ ಸಾಂಸ್ಕೃತಿಕ ವೈಭವ ಕಾರ್ಯಕ್ರಮವನ್ನು ಶಾಸಕರಾದ ಕೊಂಬಾರನ ಜಿ.ಬೋಪಯ್ಯ ಉದ್ಘಾಟಿಸಿದರು. ಅಕಾಡೆಮಿ ಅಧ್ಯಕ್ಷರಾದ ಶ್ರೀ ಕೊಲ್ಯದ ಗಿರೀಶ್‌ರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕೊಡಗು ಜಿಲ್ಲಾ ಪಂಚಾಯಿತಿ ಅಧ್ಯಕ್ಷರಾದ ಶ್ರೀಮತಿ ಶರೀನ್ ಸುಬ್ಬಯ್ಯ, ಶಾಸಕರುಗಳಾದ ಶ್ರೀ ಮಂಡೆಪಂಡ ಪಿ. ಅಪ್ಪಚ್ಚು ರಂಜನ್, ಶ್ರೀ ವಾಸು, ಶ್ರೀ ಟಿ. ಜಾನ್, ಸಂಸದರಾದ ಶ್ರೀ ಪ್ರತಾಪ್ ಸಿಂಹ, ಕರ್ನಾಟಕ ಕರಕುಶಲ ನಿಗಮ ಮಂಡಳಿ,ಅಧ್ಯಕ್ಷರಾದ ಶ್ರೀಮತಿ ವೀಣಾ ಅಚ್ಚಯ್ಯ, ಚೇರಂಬಾಣೆ ಗೌಡ ಸಮಾಜದ ಅಧ್ಯಕ್ಷರಾದ ಕೊಡಪಾಲು ಗಣಪತಿ, ಜಿಲ್ಲಾಧಿಕಾರಿಯಾದ ಶ್ರೀ ಮೀರ್ ಅನೀಸ್ ಅಹ್ಮದ್, ಸಹಾಯಕ ನಿರ್ದೇಶಕರಾದ ಶ್ರೀ ಎಸ್.ಐ. ಭಾವಿಕಟ್ಟಿ, ಕೊಡಗು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರು ಶ್ರೀ ಟಿ.ಪಿ.ರಮೇಶ್,
ಶ್ರೀ ಪೊಡನೋಳಂಡ ಸುಬ್ಬಯ್ಯ,
ಶ್ರೀ ಕೇಕಡ ನಾಣಯ್ಯ ಉಪಸ್ಥಿತರಿದ್ದರು.



**ಅಕಾಡೆಮಿ ತ್ರೈಮಾಸಿಕ "ಹಿಂಗಾರ" ಮೊದಲ ಸಂಚಿಕೆಯನ್ನು** ಬಿಡುಗಡೆ ಮಾಡಲಾಯಿತು. ಡಾ.ಕೋರನ ಸರಸ್ವತಿ, ಅಕಾಡೆಮಿ ಸದಸ್ಯರು ಆಶಯ ನುಡಿ ನುಡಿದರು.

ತಾರೀಕು 10ರಂದು ಕಡ್ಲೇರ ತುಳಸಿ ಮೋಹನ್ ಮತ್ತು ತಂಡದವರಿಂದ ಪ್ರಾರ್ಥನೆಯೊಂದಿಗೆ, ಗ್ರಾಮೀಣ ಕ್ರೀಡಾ ಸ್ಪರ್ಧೆಯನ್ನು ನಾಡಿನ ಹಿರಿಯರಾದ ಬೈಮನ ಪೊನ್ನಪ್ಪನವರು ಮತ್ತು ಸಾಂಸ್ಕೃತಿಕ ಸ್ಪರ್ಧೆಗಳನ್ನು ಪ್ರೊಫೆಸರ್ ದಂಬೆಕೋಡಿ ಸುಶೀಲಾ ಸುಬ್ರಮಣಿ, ಉದ್ಘಾಟನೆ ಮಾಡಿದರು.
ಗಾಮೀಣ ಕ್ರೀಡಾ ಸ್ಪರ್ಧೆಗಳಾದ ಮಕ್ಕಳಿಗೆ



ಕಾಳು ಹೆಕ್ಕುವುದು, ಕಪ್ಪೆ ಹಾರುವುದು, ಸಾರ್ವಜನಿಕರಿಗೆ ಓಟದ ಸ್ಪರ್ಧೆ, ವಯಸ್ಕ ಪುರುಷ, ಮಹಿಳೆಯರಿಗೆ ರಭಸದ ನಡಿಗೆ, ಸೂಜಿಗೆ ನೂಲು ಹಾಕಿ ಓಡುವುದು, ಸಂಗೀತ ಕುರ್ಚಿ, ಭಾರದ ಗುಂಡು ಎಸೆಯುವುದು, ತೆಂಗಿನ ಕಾಯಿಗೆ ಗುಂಡು ಹೊಡೆಯುವುದು ಮತ್ತು ಹಗ್ಗಜಗ್ಗಾಟ, ದಂಪತಿಗಳಿಗೆ ಕೃಷ್ಣ-ರುಕ್ಮಿಣಿ ಓಟ, ಪುರುಷರಿಗೆ ಮ್ಯಾರಾಥಾನ್ ಓಟ ಅರೆಭಾಷೆ ಸಂಸ್ಕೃತಿಯಲ್ಲಿ ಛದ್ಮವೇಷ, ಅರೆಭಾಷಿಕರ ಹಬ್ಬ ಹರಿದಿನಗಳ ಬಗ್ಗೆ ತಪ್ಪಿಲ್ಲದೆ ಮಾತನಾಡುವುದು, ಸಾಂಸ್ಕೃತಿಕ ಉಡುಗೆ ತೊಡುಗೆಯಲ್ಲಿ ನಡಿಗೆ ಪ್ರದರ್ಶನ, ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಅರೆಭಾಷೆ ಸ್ವರಚಿತ ಕವನ ವಾಚನ ಸ್ಪರ್ಧೆ, ಸಾರ್ವಜನಿಕರಿಗೆ ಅರೆಭಾಷೆ ಹಾಡಿಗೆ ಗುಂಪು ನೃತ್ಯ, ಏಕ ಪಾತ್ರ ಅಭಿನಯ-ಕೂಡುಕುಟುಂಬದ ತವಾಷೆ ಸಂಗತಿಗಳ ಸೋಬಾನೆ, ಅರೆಭಾಷೆ ಹಾಡು ಹಾಡುವುದು, ಹೊಸ ಅರೆಭಾಷೆ ಹಾಡು ಹಾಡುವುದು, ಅರೆಭಾಷೆ ಕೋಲಾಟ ಸ್ಪರ್ಧೆ ಗಳನ್ನು ಏರ್ಪಡಿಸಲಾಗಿತ್ತು. ತೀರ್ಪುಗಾರರಾಗಿ ಶ್ರೀ ಬಾರಿಯಂಡ ಜೋಯಪ್ಪ, ಶ್ರೀ ಕೊಟ್ಟಕೇರಿಯನ ಲೀಲಾ ದಯಾನಂದ, ಶ್ರೀಮತಿ



ಜೈತಡ್ಕ ಜಾನಕಿ, ಶ್ರೀ ದಿವಾಕರ, ಶ್ರೀಮತಿ ಸುನಿತಾ ಇವರುಗಳು ಭಾಗವಹಿಸಿದ್ದರು.

ದಿನಾಂಕ 11 ರಂದು ಬೆಳಿಗ್ಗೆ



9.00ಗಂಟೆಗೆ ಸಾಂಸ್ಕೃತಿಕ ಮೆರವಣಿಗೆ, ಸಾಂಪ್ರದಾಯಿಕ ವಾದ್ಯ, ಚಂಡೆ, ಕುದುರೆ ಮೇಲೆ ಅಪ್ಪಯ್ಯಗೌಡರ ವೇಷಭೂಷಣ, ಸಂಸ್ಕೃತಿಗೆ ಸಂಬಂಧಪಟ್ಟ ಸ್ತಬ್ದಚಿತ್ರಗಳೊಂದಿಗೆ ಎಲ್ಲಾ ಗೌಡ





ಸಮಾಜದವರು, ಸಂಘ ಸಂಸ್ಥೆಯವರು, ಸ್ಥಳೀಯರು ಸೇರಿ ಅದ್ದೂರಿಯಾಗಿ ಸಾವಿರಾರು ಜನ ಮೆರವಣಿಗೆಯಲ್ಲಿ ಭಾಗಿಯಾಗಿದ್ದರು.

ವಿಚಾರಗೋಷ್ಠಿಯಲ್ಲಿ ಶ್ರೀಮತಿ ಆನೇರ ಜಾನಕಿ, ಪ್ರಾಂಶುಪಾಲರು ಕಾವೇರಿ ಕಾಲೇಜು, ಭಾಗಮಂಡಲ ಇವರು **"ಅರೆಭಾಷೆ ಸಾಂಸ್ಕೃತಿಕ ಗೌಜಿ ಅಂದ್-ಇಂದ್"** ಬಗ್ಗೆ ವಿಷಯ ಮಂಡನೆ ಮಾಡಿ ಹಲವಾರು ವಿಚಾರಗಳನ್ನು ಜನಕ್ಕೆ ಮನದಟ್ಟಾಗುವಂತೆ ಹೇಳಿದರು. ಸಂಜೆ



ನಡೆದ ಮುಕ್ತಾಯ ಜಂಬರದ ಅಧ್ಯಕ್ಷತೆಯನ್ನು ಶ್ರೀ ಕೊಲ್ಯದ ಗಿರೀಶ್ ವಹಿಸಿದರು, ಸಮಾರೋಪ ನುಡಿಯನ್ನು ಶ್ರೀಮತಿ ನಿಡ್ಯಮಲೆ ದೇವಕ್ಕಿ ನುಡಿದರು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ಪಟ್ಟಡ ಶಿವಕುಮಾರ್ ರವರು ನಿರ್ವಹಿಸಿದರು.

ಎರಡು ದಿನವೂ ಬೆಳಿಗ್ಗೆ 9.00ಗಂಟೆ ಯಿಂದ ರಾತ್ರಿ 8.00 ಗಂಟೆಯವರೆಗೆ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದ ಸಂಚಾಲಕರಾಗಿ ಅಕಾಡೆಮಿಯ ಸದಸ್ಯರಾದ ಶ್ರೀ ಮಂದ್ರೀರ ಮೋಹನ್‌ದಾಸ್ ನವರು ಕಾರ್ಯ ನಿರ್ವಹಿಸಿ ದರು. ಅರೆಭಾಷೆ ಜನಾಂಗ ದವರು ಸ್ಥಳೀಯರು, ಭಾಷಾಭಿಮಾನಿಗಳು ಸಾಹಿತಿಗಳು ಸೇರಿ ಸಹಸ್ರಾರು ಸಂಖ್ಯೆಯಲ್ಲಿ ಜನರು ಭಾಗ ವಹಿಸಿದ್ದು. ಕಾರ್ಯಕ್ರಮವನ್ನು ಅವಿಸ್ಮರಣೀಯ ಗೊಳಿಸಿದರು.

## ಚೇರಂಬಾಣೆ: ಮೇಳೈಸಿದ 'ಗೌಡ ಸಾಂಸ್ಕೃತಿಕ ವೈಭವ'

» ನಮ್ಮ ಮೊದಲ ಪುಟದಿಂದ

ಜಿಲ್ಲಾ ಪಂಚಾಯಿತಿ ಅಧ್ಯಕ್ಷೆ ಶರೀನ್ ಸುಬ್ಬಯ್ಯ ಮಾತನಾಡಿ, ಕೊಡಗಿನ ಸಂಸ್ಕೃತಿಯನ್ನು ಪರಿಚಯಿಸುವ ನಿಟ್ಟನಲ್ಲಿ ಇಂತಹ ಕಾರ್ಯಕ್ರಮಗಳು ಸಹಕಾರಿಯಾಗಿದೆ. ಆದರೆ, ಹಿಂದಿನಿಂದ ಉಳಿಸಿಕೊಂಡು ಬಂದಿರುವ ಸಂಸ್ಕೃತಿಯನ್ನು ಅಧಿಕಾರಿಗಳು ಬದಲಿಸಲು ಯತ್ನಿಸುತ್ತಾರೆ. ಇಂತಹ ಕೆಲಸ ಆಗದಂತೆ ಎಚ್ಚರವಹಿಸಬೇಕು. ಈ ಬಗ್ಗೆ ಜಿಲ್ಲಾಧಿಕಾರಿ ಗಮನ ಹರಿಸಬೇಕು ಎಂದು ಮನವಿ ಮಾಡಿದರು.

ಕೊಡವ ಮತ್ತು ಗೌಡ ಜನಾಂಗದವರು ಒಗ್ಗೂಡಿ ಏನೇ ಸಮಸ್ಯೆ ಇದ್ದರೂ ಅದನ್ನು ನಿಭಾಯಿಸಬೇಕು ಎಂದು ಸಲಹೆ ನೀಡಿದರು.


ಕಾರ್ಯಕ್ರಮದಲ್ಲಿ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಕೊಲ್ಯದ ಗಿರೀಶ್, ಜಿಲ್ಲಾಧಿಕಾರಿ ಮೀರ್ ಅನೀಸ್ ಅಹ್ಮದ್, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಟಿ.ಪಿ. ರಮೇಶ್, ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದ ... ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ







## ...ರಂಬಾಣೆ: ಮೇಳೈಸಿದ 'ಗೌಡ ಸಾಂಸ್ಕೃತಿಕ ವೈಭವ...



ಗ್ರಾಮೀಣ ಕ್ರೀಡಾಕೂಟ...

# ಹೋರಾಟದ ಕಿಚ್ಚು ಹಚ್ಚಿದ ಅಪ್ಪಯ್ಯಗೌಡ



1857ರಲ್ಲಿ ನಡೆದ ಸಿಪಾಯಿ ದಂಗೆಯನ್ನು ಪ್ರಥಮ ಸ್ವಾತಂತ್ರ್ಯ ಹೋರಾಟ ಎಂದು ಹೇಳಲಾಗುತ್ತದೆ. 1834 ರಲ್ಲಿ ಬ್ರಿಟಿಷರ ವಿರುದ್ಧ ತನ್ನ ತಂಡದೊಂದಿಗೆ ಕ್ರಾಂತಿಕಾರಿ ಹೋರಾಟ ನಡೆಸಿದ ಅಪ್ಪಯ್ಯಗೌಡ 1837 ರಲ್ಲಿ ಬಲಿಯಾಗಿದ್ದವರು ಬ್ರಿಟಿಷರ ಕುತಂತ್ರಕ್ಕೆ ಬಲಿಯಾದರು. ತನ್ನ ಕೆಲಸಕ್ಕೆ ರಾಜಿನಾಮೆ ನೀಡಿ, ಬ್ರಿಟಿಷರ ದಬ್ಬಾಳಿಕೆ ವಿರುದ್ಧ ಹೋರಾಟ ನಡೆಸಿದ ಸ್ವಾತಂತ್ರ್ಯ ಹೋರಾಟಗಾರರನ್ನು ಬ್ರಿಟಿಷರು ದಂಗೆಕೋರರೆಂದು ಬಿಂಬಿಸಿದರು. ಇದನ್ನು ಕೆಲವು ಚರಿತ್ರೆಕಾರರು ದಾಖಲಿಸಿದರು. ಆದರೆ ದೇಶಕ್ಕಾಗಿ ತ್ಯಾಗ, ಬಲಿದಾನ ಮಾಡಿದ್ದ ಅಪ್ಪಯ್ಯಗೌಡರು ಗೌಡ ಸಮುದಾಯಕ್ಕೆ ಸ್ಫೂರ್ತಿ.

ಭಾರತ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಹುತಾತ್ಮರಾದ ಮಹನೀಯರಲ್ಲಿ ಕೊಡಗು ಜಿಲ್ಲೆಯ ಸುಬೇದಾರ್ ಗುಡ್ಡೆಮನೆ ಅಪ್ಪಯ್ಯಗೌಡರು ಒಬ್ಬರು. ಸುಬೇದಾರ್ ಗುಡ್ಡೆಮನೆ ಅಪ್ಪಯ್ಯಗೌಡರ ಸ್ಮರಣಾರ್ಥ ಮಡಿಕೇರಿಯ ಸುದರ್ಶನ ವೃತ್ತದ ಬಳಿ



ಸ್ಮಾರಕವನ್ನು ನಿರ್ಮಿಸಲಾಗಿದೆ. ಅವರ ಬಲಿದಾನವಾದ ಸ್ಥಳ ಮಡಿಕೇರಿ ಕೋಟೆ ಆವರಣದಲ್ಲಿ ಹುತಾತ್ಮರ ಸ್ಮರಣಾರ್ಥ ಶಿಲಾ ಫಲಕವನ್ನು ಅಳವಡಿಸಲಾಗಿದೆ.



**ಪ್ರಥಮ ಬಾರಿಗೆ ವಿಶೇಷ ಆಚರಣೆ**

ನಗರದ ಕಾವೇರಿ ಕಲಾಕ್ಷೇತ್ರದಲ್ಲಿ ಸ್ವಾತಂತ್ರ್ಯ ಹೋರಾಟಗಾರ ಸುಬೇದಾರ್ ಗುಡ್ಡೆಮನೆ



ಅಪ್ಪಯ್ಯಗೌಡರ ಹುತಾತ್ಮ ದಿನಾಚರಣೆಯನ್ನು ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಆಶ್ರಯದಲ್ಲಿ ಪ್ರಥಮ ಬಾರಿಗೆ ವಿಶೇಷ ರೀತಿ ಕಾರ್ಯಕ್ರಮ ಆಚರಿಸಲಾಯಿತು.

ದೇಶದಲ್ಲಿ ಸ್ವಾತಂತ್ರ್ಯ ಚಳವಳಿ ಪ್ರಾರಂಭವಾಗುವ ಮುನ್ನವೇ ಬ್ರಿಟಿಷರ ವಿರುದ್ಧ ಹೋರಾಟದ ಕಿಚ್ಚು ಹಚ್ಚಿದ ಮಹಾನ್ ವ್ಯಕ್ತಿ ಸುಬೇದಾರ್ ಗುಡ್ಡೆಮನೆ ಅಪ್ಪಯ್ಯಗೌಡ ಎಂದು ವಿರಾಜಪೇಟೆ ಶಾಸಕ ಕೆ.ಜಿ.ಬೋಪಯ್ಯ ಬಣ್ಣಿಸಿದರು.

ಹುತಾತ್ಮರ ದಿನಾಚರಣೆಯನ್ನು ಭಾವನಾತ್ಮಕವಾಗಿ ಆಚರಿಸಬೇಕಾಗಿತ್ತೆಂಬ ಭಾವನೆ ಹಲವರಲ್ಲಿದೆ. ಸ್ವಾತಂತ್ರ್ಯ ಸಂಗ್ರಾಮ ಹೋರಾಟಕ್ಕೆ ಚಾಲನೆ ನೀಡಿ ವೀರ ಮರಣವನ್ನಪ್ಪಿದ ಅಪ್ಪಯ್ಯಗೌಡ ಇತರರಿಗೆ ಸ್ಫೂರ್ತಿ ಆಗಬೇಕು. ಆ ಕಾರಣಕ್ಕಾಗಿಯೇ ಸಂಭ್ರಮಿಸುವ ರೀತಿಯಲ್ಲಿ ವಿಶೇಷ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎಸ್.ಐ.ಭಾವಿಕಟ್ಟಿ, ಹೇಳಿದರು. ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ಅಧ್ಯಕ್ಷೆ ಶಾಂತೆಯಂಡ ಶ್ರೀಮತಿ ವೀಣಾ ಅಚ್ಚಯ್ಯ, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಶ್ರೀ ಟಿ.ಪಿ.ರಮೇಶ್, ಜಿಲ್ಲಾಧಿಕಾರಿ ಶ್ರೀ ಮೀರ್ ಅನೀಸ್ ಅಹಮ್ಮದ್,



ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಬಿದ್ದಾಟಂಡ ಎಸ್.ತಮ್ಮಯ್ಯ, ನಗರಸಭೆ ಅಧ್ಯಕ್ಷೆ ಶ್ರೀಮತಿ ಬಂಗೇರ, ಎಲ್ಲಾ ಗೌಡ ಸಮಾಜದ ಅಧ್ಯಕ್ಷರು, ಸಂಘ-ಸಂಸ್ಥೆಗಳ ಮುಖಂಡರುಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಸುಬೇದಾರ್ ಅಪ್ಪಯ್ಯಗೌಡರ ಜೀವನ















ಚರಿತ್ರೆ ಬಗ್ಗೆ ಸವಣೂರು ವಿದ್ಯಾರಶ್ಮಿ ವಿದ್ಯಾಸಂಸ್ಥೆ ಪ್ರಾಂಶುಪಾಲ ಶ್ರೀ ಸೀತರಾಮ ಕೇವಳರವರು ಮನಮುಟ್ಟುವ ರೀತಿಯಲ್ಲಿ ವಿಷಯ ಮಂಡಿಸಿದರು. ಪುದಿಯನೆರವನ ರೇವತಿ ರಮೇಶ್, ಕೊಟ್ಟಕೇರಿಯನ ಲೀಲಾ ದಯಾನಂದ ಇವರು ಕವನ ವಾಚಿಸಿದರು. ಸುಬೇದಾರ್ ಅಪ್ಪಯ್ಯಗೌಡರ ಜೀವನ ಚರಿತ್ರೆ ಬಗ್ಗೆ ಭರಣಿ ಕಲಾತಂಡದಿಂದ ನಾಟಕ ಮತ್ತು ತಾಂಡವ ಡ್ಯಾನ್ಸ್ ಅಕಾಡೆಮಿಯಿಂದ ನೃತ್ಯ ರೂಪಕ ಪ್ರದರ್ಶನ ನಡೆಯಿತು. ಪಾಂಡನ ಶಾರದ ನಾಗೇಶ್ ತಂಡದಿಂದ ಲಾವಣಿ ಮೂಲಕ ಅಪ್ಪಯ್ಯ ಗೌಡರ ಗುಣಗಾನ ಕಾರ್ಯಕ್ರಮ ಜರುಗಿತು.

## ಮುಖ್ಯ ಬೀದಿಯಲ್ಲಿ ಗಮನ ಸೆಳೆದ ಮೆರವಣಿಗೆ

ಜಿಲ್ಲಾಧಿಕಾರಿ ಮೀರ್ ಅನೀಸ್ ಅಹಮ್ಮದ್ ಅವರು ಅಪ್ಪಯ್ಯಗೌಡರ ಪ್ರತಿಮೆಗೆ ಪುಷ್ಪಾರ್ಚನೆ ಅರ್ಪಿಸುವ ಮೂಲಕ ಗೌರವ ನಮನ ಸಲ್ಲಿಸಿದರು. ಅರೆಭಾಷಿಕ ಸಾಂಪ್ರದಾಯಿಕ ಉಡುಗೆ-ತೊಡುಗೆಯಲ್ಲಿ ಸ್ತ್ರೀ-ಪುರುಷರು, ಸ್ಕೌಟ್ಸ್ ಅಂಡ್ ಗೈಡ್ಸ್ ಸೇವಾದಳದ ವಿದ್ಯಾರ್ಥಿಗಳು ಹಾಗೂ ಬಿಳಿ ಕುದುರೆ ಮೇಲೆ ಸುಬೇದಾರ್ ಅಪ್ಪಯ್ಯಗೌಡ ವೇಷಧಾರಿ, ಮಂಡ್ಯದ ಸವಿತಾ ಚಿರಕುನ್ನಯ್ಯ ನೇತೃತ್ವದ ಪೂಜಾಕುಣಿತ, ಬೆಂಗಳೂರಿನ ನಿರಂಜನ್ ಮೂರ್ತಿ ನೇತೃತ್ವದ ವೀರಗಾಸೆ (ವೀರಭದ್ರ ನೃತ್ಯ) ಮೆರವಣಿಗೆಯಲ್ಲಿ ಪಾಲ್ಗೊಂಡು ಮಡಿಕೇರಿ ಮುಖ್ಯಬೀದಿಯಲ್ಲಿ ನಡೆದ ಈ ಮೆರವಣಿಗೆ ಪ್ರತಿಯೊಬ್ಬರ ಗಮನ ಸೆಳೆಯುವಂತಿತ್ತು.


ಹೋರಾಟದ ಕಿಚ್ಚು ಹಚ್ಚಿದ ಅಪ್ಪಯ್ಯಗೌ

# ಸುಬೇದಾರ್ ಗುಡ್ಡೆಮನೆ ಅಪ್ಪಯ್ಯಗೌಡರ ಸಂಸ್ಮರಣಾ ದಿನ-2016



ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ವತಿಯಿಂದ ದಿನಾಂಕ 31.10.2016 ರಂದು ಸ್ವಾತಂತ್ರ್ಯ ಹೋರಾಟಗಾರ ಸುಬೇದಾರ್ ಗುಡ್ಡೆಮನೆ ಅಪ್ಪಯ್ಯಗೌಡರ ಹುತಾತ್ಮ ದಿನಾಚರಣೆಯನ್ನು ಮಡಿಕೇರಿ ಕೋಟೆ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಸುಬೇದಾರ್ ಗುಡ್ಡೆಮನೆ ಅಪ್ಪಯ್ಯಗೌಡರ ಪ್ರತಿಮೆಗೆ ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಎಂ.ಆರ್. ಸೀತಾರಾಮ್ ಪುಷ್ಪಾರ್ಚನೆ ಗೌರವಾರ್ಪಿಸಿದರು. ಶ್ರೀಮತಿ ರೇವತಿ ರಮೇಶ್ ಮತ್ತು ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯ ಭಾರತ ಸೇವಾದಳದ ವಿದ್ಯಾರ್ಥಿಗಳು ನಮನ ಗೀತೆ ಹಾಡಿದರು. ಅಪ್ಪಯ್ಯಗೌಡರನ್ನು ಗಲ್ಲಿಗೇರಿಸಿದ ಸ್ಥಳದಲ್ಲಿ ಗಣ್ಯರು ಪುಷ್ಪಾರ್ಚನೆ ಮಾಡಿ ಗೌರವ ಸಲ್ಲಿಸಿದರು.

ಕೋಟೆ ಆವರಣದಲ್ಲಿ ನಡೆದ ಸಭಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕರಾದ ಮಂಡೇಪಂಡ ಅಪ್ಪಚ್ಚುರಂಜನ್, ವಸತಿ ಸಚಿವರಾದ ಎಂ. ಕೃಷ್ಣಪ್ಪ ಉದ್ಘಾಟಿಸಿದರು. ವಸತಿ ಸಚಿವರು ಮಾತನಾಡಿ ಗುಡ್ಡೆಮನೆ ಅಪ್ಪಯ್ಯಗೌಡರ ಜ್ಞಾಪಕಾರ್ಥವಾಗಿ ಅಪ್ಪಯ್ಯಗೌಡರ ಸ್ಮಾರಕ ನಿರ್ಮಾಣಕ್ಕೆ ಅಗತ್ಯ ಸಹಕಾರ ನೀಡಲಾಗುವುದು, ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷರ ವಿರುದ್ಧ ಹೋರಾಟ ಮಾಡಿದ ಹುತಾತ್ಮ ಗುಡ್ಡೆಮನೆ ಅಪ್ಪಯ್ಯಗೌಡ ರಂತಹ ಸ್ವಾತಂತ್ರ್ಯ ಸೇನಾನಿಯನ್ನು ಸದಾ ಸ್ಮರಿಸುವಂತೆ ಆಗಬೇಕು ಎಂದು ಹೇಳಿದರು. ಮುಖ್ಯಅಥಿತಿಗಳಾಗಿ ಶಾಸಕರುಗಳಾದ ಶ್ರೀ ಕೋಬಾರನ ಬೋಪಯ್ಯ, ಶ್ರೀ ವಾಸು, ಶ್ರೀ ಎಂ.ಪಿ. ಸುನಿಲ್ ಸುಬ್ರಮಣಿ ಶಾಂತೇಯಂಡ ವೀಣಾ ಅಚ್ಚಯ್ಯ, ಜಿಲ್ಲಾಧಿಕಾರಿಗಳಾದ ಡಾ. ವಿನ್ಸೆಂಟ್ ಡಿಸೋಜ, ಪೋಲೀಸ್ ವರಿಷ್ಠಾಧಿಕಾರಿ ಶ್ರೀ ಪಿ. ರಾಜೇಂದ್ರ ಪ್ರಸಾದ್, ಉಪಸ್ಥಿತರಿದ್ದರು. ವಿಶೇಷ ಆಹ್ವಾನಿತರಾಗಿ ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷರಾದ ಡಾ. ಅಪ್ಪಾಜಿ ಗೌಡ, ಗೌಡಸಮಾಜಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ದಂಬೆಕೋಡಿ ಎಸ್. ಆನಂದ, ಚರಿತ್ರಕಾರರಾದ ಶ್ರೀ ತಲಕಾಡು ಚಿಕ್ಕರಂಗೇಗೌಡ ವೇದಿಕೆಯಲ್ಲಿದ್ದರು.

ಶ್ರೀ ಪಟ್ಟಡ ಶಿವಕುಮಾರ್‌ರವರಿಂದ ವಿಚಾರ ಮಂಡನೆ, ಶ್ರೀಮತಿ ಕಡ್ಲೇರ ತುಳಸಿ ಮೋಹನ್ ಕವನ ವಾಚನ, ಲಿಟ್ಲ್ ಫ್ಲವರ್ ಶಾಲಾ ಮಕ್ಕಳಿಂದ ನೃತ್ಯ ರೂಪಕ ಕಾರ್ಯಕ್ರಮಗಳು ನಡೆದವು.







# ದೆಹಲಿಯಲ್ಲಿ "ಸಾಂಸ್ಕೃತಿಕ ಸಂಗಮ"

**ಒಳ್ಳೆಯ ಸಾಹಿತ್ಯ ಅರೆಭಾಷೆಗೆ ಭಾಷಾಂತರವಾಗಬೇಕು–ಡಾ.ಪುರುಷೋತ್ತಮ ಬಿಳಿಮಲೆ**

2015ರ ಡಿಸೆಂಬರ್ 12ರಂದು ದೆಹಲಿ ಕರ್ನಾಟಕ ಸಂಘ, ನವದೆಹಲಿ ಇವರ ಸಹಯೋಗದಲ್ಲಿ ದೆಹಲಿಯಲ್ಲಿ "ಸಾಂಸ್ಕೃತಿಕ ಸಂಗಮ" ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ವೇದಿಕೆಯಲ್ಲಿ ಸಂಸದರಾದ ಶ್ರೀ ಪ್ರತಾ ಪ ಸಿಂಹ, ಶಾಸಕರುಗಳಾದ ಶ್ರೀ ಕೆ.ಜಿ. ಬೋಪಯ್ಯ, ಶ್ರೀ ವಾಸು, ಶಾಸಕರು, ಚಾಮರಾಜ ಕ್ಷೇತ್ರ, ಶ್ರೀ ಪುರುಷೋತ್ತಮ ಬಿಳಿಮಲೆ, ನಿರ್ದೇಶಕರು ಕನ್ನಡ ಅಧ್ಯಯನ ಪೀಠ, ನವದಹಲಿ, ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು, ದೆಹಲಿ ಕರ್ನಾಟಕ ಸಂಘ, ನವದೆಹಲಿ, ಶ್ರೀ ನಂಗಾರ್ ನಾಣಯ್ಯ, ನಿವೃತ್ತ ಜಂಟಿ ಆಯುಕ್ತರು,ವಾಣಿಜ್ಯ ತೆರಿಗೆ ಇಲಾಖೆ, ಶ್ರೀ ಬೆಳ್ಯಪ್ಪ, ಜಂಟಿ ಕಾರ್ಯದರ್ಶಿಗಳು ದೆಹಲಿ ಕರ್ನಾಟಕ ಸಂಘ, ಶ್ರೀ ಎಸ್.ಐ.ಭಾವಿಕಟ್ಟಿ, ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕೊಡಗು, ಅಕಾಡೆಮಿ ರಿಜಿಸ್ಟ್ರಾರ್ ಶ್ರೀ ಉಮರಬ್ಬ ಇನ್ನು ಹಲವಾರು ಗಣ್ಯ ವ್ಯಕ್ತಿಗಳು ಉಪಸ್ಥಿತರಿದ್ದರು. ಎಲ್ಲರನ್ನೂ ಅರೆಭಾಷೆ ಜನಾಂಗದ ಸಂಪ್ರದಾಯದ ಪೇಟ ತೊಡಿಸಿ ಸ್ವಾಗತಿಸಲಾಯಿತು.

ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥ ಡಾ.ಪುರುಷೋತ್ತಮ ಬಿಳಿಮಲೆ ಅವರು ಮಾತನಾಡುತ್ತಾ ಅರೆಭಾಷೆ ಅಕಾಡೆಮಿ ಭಾಷೆಯ ಅಧ್ಯಯನ, ಪ್ರಸಾರ ಹಾಗೂ ಬಳಸುವಿಕೆಯನ್ನು ಇನ್ನೂ ಹೆಚ್ಚು ಮುತುವರ್ಜಿಯಿಂದ ನಡೆಸಿಕೊಂಡು ಬರಬೇಕು. ಸಂಶೋಧನೆ ಮತ್ತು ಪ್ರಕಾಶನಕ್ಕಾಗಿ ಒತ್ತು ಕೊಟ್ಟು ಒಳ್ಳೆಯ ವಿದ್ವಾಂಸರಿಂದ ಕನ್ನಡದ ನಾಟಕ, ಕವನ, ಕಥೆಗಳನ್ನು ಅರೆಭಾಷೆ ಭಾಷಾಂತರಿಸುವಂತಾಗಬೇಕು. ಅಲ್ಲದೆ





ಸುಮಾರು 500 ವರ್ಷಕ್ಕೂ ಹೆಚ್ಚು ಇತಿಹಾಸವುಳ್ಳ ಸಾಂಸ್ಕೃತಿಕವಾಗಿ ಅತ್ಯಂತ ಸಂಪದ್ಭರಿತವಾದ ಈ ಒಂದು ಪುಟ್ಟ ಭಾಷೆಯನ್ನು ಹೆಚ್ಚು ಹೆಚ್ಚು ಜನಕ್ಕೆ ತಲುಪವಂತೆ ಮಾಡಿ ಉಳಿಸಿ, ಬೆಳೆಸಬೇಕಾಗಿದೆ ಎಂದರು. ಜಗತ್ತಿನಲ್ಲಿ ಈಗಾಗಲೇ ಹಲವಾರು ಇಂತಹ ಸಣ್ಣ ಸಣ್ಣ ಭಾಷೆಗಳು ಇಂಗ್ಲಿಷ್ ಹಾಗೂ ಇನ್ನಿತರ ಬಾಹ್ಯ ಭಾಷೆಗಳ ಹೊಡೆತಕ್ಕೆ ಒಳಗಾಗಿ ಅತ್ಯಂತ ರಭಸದಿಂದ ನಶಿಸಿಹೋಗುತ್ತಿವೆ ಎಂದು ಎಚ್ಚರಿಕೆ ನೀಡಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಅಕಾಡೆಮಿ ಇಂದು ನಡೆಸುತ್ತಿರುವ ಈ ಸಾಂಸ್ಕೃತಿಕ ಕಾರ್ಯಕ್ರಮ ಒಂದು ಚಾರಿತ್ರಿಕ ಹೆಜ್ಜೆ ಎಂದು ನುಡಿದರು.

ಅಧ್ಯಕ್ಷರು, ಸದಸ್ಯರು, ಕಲಾವಿದರು ದೆಹಲಿಗೆ ದಿನಾಂಕ 09 ರಂದು ಹೋಗಿ 15 ರಂದು ವಾಪಾಸಾದರು. ಹೋಗಿ-ಬರಲು ಪ್ರಯಾಣ ವ್ಯವಸ್ಥೆಯನ್ನು ಅಕಾಡೆಮಿಯಿಂದ ಮಾಡಲಾಗಿತ್ತು. ಅಕಾಡೆಮಿಯಿಂದ 61 ಜನ ಕಲಾವಿದರನ್ನು ಕರೆದುಕೊಂಡು ಹೋಗಲಾಗಿತ್ತು, ದೆಹಲಿ ಕಲಾವಿದರು ಸಹ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. ನಾಟ್ಯಮಿಲನ ನೃತ್ಯ ಶಾಲೆ ಭಾಗಮಂಡಲ ಇವರಿಂದ ಗೌಡರ ಸಿರಿ ಸಂಸ್ಕೃತಿ ದರ್ಶನ ಎಂಬ ಅರೆಭಾಷೆ ಸಂಸ್ಕೃತಿಯನ್ನು ಬಿಂಬಿಸುವ ನೃತ್ಯ “ಕಲಾಸಿರಿ” ತಂಡದಿಂದ ರಾಧಾಕೃಷ್ಣ ಲೀಲೆ ನೃತ್ಯ, ಶ್ರೀ ಕುದುಪಜೆ ಪ್ರಕಾಶ್ ಮತ್ತು ಬಳಗದಿಂದ ಸಾಂಪ್ರಾದಾಯಿಕ ಉಡುಗೆ ತೊಡುಗೆ ತೊಟ್ಟು ಅರೆಭಾಷೆ ಜನಪದ ಕೋಲಾಟ, ಶ್ರೀಮತಿ ವಿದುಷಿ ಪ್ರಮೀಳಾ ಲೋಕೇಶ್ ಮತ್ತು ಬಳಗದವರಿಂದ ಹೆಜ್ಜೆಗೆಜ್ಜೆ ನಿನಾದದೊಳಗೆನುಟ್ಟು ಹೇಮಾವತಿ ನದಿ ಮತ್ತು ಅದರ ದಡದಲ್ಲಿ ಬೆಳೆದು ಬಂದ ಅರೆಭಾಷೆ ಸಂಸ್ಕೃತಿ, ಸಂಪ್ರದಾಯಗಳನ್ನು ಬಹಳ ಮಾರ್ಮಿಕವಾಗಿ ತಮ್ಮ ಹಾಡು, ನೃತ್ಯಗಳ ಮೂಲಕ ಪ್ರದರ್ಶಿಸುತ್ತಾ ಅರೆಭಾಷೆ ಗೌಡ ಜನಾಂಗ ಕಾರಣಾಂತರಗಳಿಂದ ಹೇಗೆ ಮಡಿಕೇರಿಯಿಂದ ದಕ್ಷಿಣ ಕನ್ನಡ ಪುತ್ತೂರು, ಸುಬ್ರಹ್ಮಣ್ಯ, ಸುಳ್ಯದೆಡೆಗೆ ಘಟ್ಟದಿಂದ ಇಳಿದುಬಂದರು ಎಂಬುದನ್ನು ಈ ನೃತ್ಯ ತೆರೆದಿಟ್ಟಿತು.ಎ.ವಿ.ಲವಿನ್ ಮತ್ತು ಕು.ರಕ್ಷ ಇವರಿಂದ ಅರೆಭಾಷೆ ಯಕ್ಷಗಾನ ವೈಭವ.





ಮನಸ್ವಿ ರಾಜೇಂದ್ರ, ದೆಹಲಿ ಇವರಿಂದ ಭರತನಾಟ್ಯ, ಕೊಡಗು ಗೌಡ ಯುವ ವೇದಿಕೆ, ಮಡಿಕೇರಿ ಇವರಿಂದ ಮೂಡಿಬಂದ ಸುಬೇದಾರ್ ಗುಡ್ಡೆಮನೆ ಅಪ್ಪಯ್ಯಗೌಡ ಜೀವನ ಆಧಾರಿತ ವೀರಪರಂಪರೆ ಎಂಬ ನೃತ್ಯರೂಪಕವು ಅರೆಭಾಷೆ ಜನಾಂಗದ ವೀರತ್ವ, ದೇಶಭಕ್ತಿ ಹಾಗೂ ಸಂಸ್ಕೃತಿಯ ಝಲಕನ್ನು ಬಹಳ ಅದ್ಭುತವಾಗಿ ಪ್ರದರ್ಶಿಸಿತು. ಶ್ರೀ ಲಕ್ಷ್ಮೀಕಾಂತ ಮೂಲೆಮಜಲು ಇವರಿಂದ ಅರೆಭಾಷೆ ಹಾಡು, ಶ್ರೀಮತಿ ಜಯಾ ಶ್ರೀನಿವಾಸ್ ದೆಹಲಿ ಇವರಿಂದ ಸೋಬಾನೆ ಶ್ರೀ ಟಿ.ಪಿ.ಬೆಳ್ಳಿಯಪ್ಪ ಮತ್ತು ಬಳಗದಿಂದ ಕೋಲಾಟ ನೃತ್ಯ ಈ ಎಲ್ಲಾ ಸಾಂಸ್ಕೃತಿಕ ಕಾರ್ಯಕ್ರಮಗಳು ನೆರೆದ ಜನರ ಮನರಂಜಿಸಿದವು.

ಸಂಘದ ಜಂಟಿ ಕಾರ್ಯದರ್ಶಿ ಶ್ರೀ ಟಿ.ಪಿ.ಬೆಳ್ಳಿಯಪ್ಪ ಅವರು ಈ ಕಾರ್ಯಕ್ರಮವನ್ನು ಸಂಯೋಜಿಸುವಲ್ಲಿ ಅತ್ಯಂತ ಶ್ರದ್ಧೆಯಿಂದ ದುಡಿದಿದ್ದು, ಅರೆಭಾಷೆ ಅಕಾಡೆಮಿ ಮತ್ತು ದೆಹಲಿ ಕರ್ನಾಟಕ ಸಂಘದ ನಡುವೆ ಸಾಂಸ್ಕೃತಿಕ ಸೇತುವೆಯಾಗಿ ಕಾರ್ಯಕ್ರಮದ ಯಶಸ್ಸಿಗೆ ಕಾರಣಕರ್ತರಾದರು.




ದೆಹಲಿ ಕರ್ನಾಟಕ ಸಂಘ 'ಅಭಿಮತ' ಮಾಸಪತ್ರಿಕೆ ಮುಖಪುಟದಲ್ಲಿ ಅಕಾಡೆಮಿ ಕಲಾವಿದೆ.








# ಗೌರವ ಪ್ರಶಸ್ತಿಗಳು

## 2014



ಶ್ರೀ ಬಾರಿಯಂಡ ಜೋಯಪ್ಪ
ಸಾಹಿತ್ಯ



ಶ್ರೀ ಹೊದ್ದೆಟ್ಟಿ ಭವಾನಿಶಂಕರ
ಜನಪದ

## 2015



ಶ್ರೀ ಟಿ.ಜಿ. ಮುಡೂರು
ಸಾಹಿತ್ಯ



ಶ್ರೀಮತಿ ಬೈತಡ್ಕ ಜಾನಕಿ ಬೆಳ್ಯಪ್ಪ
ಜನಪದ



ಶ್ರೀಮತಿ ಗೀತಾಮೋಂಟಡ್ಕ
ರಂಗಭೂಮಿ

## 2016



ಶ್ರೀ ಪಟ್ಟಡ ಪ್ರಭಾಕರ
ಸಾಹಿತ್ಯ



ಶ್ರೀ ಕೇಪು ಅಜಿಲ
ಜನಪದ ಸಾಹಿತ್ಯ



ಶ್ರೀ ಅಮ್ಮಾಜೀರ ಪೊನ್ನಪ್ಪ
ಸಂಗೀತ

## 2017



ಡಾ.ಪುರುಷೋತ್ತಮ ಬಿಳಿಮಲೆ
ಸಂಶೋಧನೆ




ಶ್ರೀ ಕುಲ್ಲಚನ ಕಾರ್ಯಪ್ಪ
ಜನಪದ ಸಾಹಿತ್ಯ



ಶ್ರೀಮತಿ ಎಂ.ಜಿ. ಕಾವೇರಮ್ಮ
ಸಾಹಿತ್ಯ

# 2013–14ನೇ ಸಾಲಿನ ಗೌರವ ಪ್ರಶಸ್ತಿ ಕಾರ್ಯಕ್ರಮ









ದಿನಾಂಕ 14.03.2016 ರಂದು ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ 2013–14ನೇ ಸಾಲಿನ ಗೌರವ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಕೊಡಗು ಗೌಡ ಸಮಾಜ, ಮಡಿಕೇರಿ ಇಲ್ಲಿ ಆಯೋಜಿಸಲಾಗಿತ್ತು. ಸಾಹಿತ್ಯ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿರುವ ಇಬ್ಬರು ಹಿರಿಯ ಸಾಹಿತಿಗಳಾದ ಹೊದ್ದೇಟಿ ಭವಾನಿಶಂಕರ್ ಮತ್ತು ಬಾರಿಯಂಡ ಜೋಯಪ್ಪರವರಿಗೆ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್, ಶಾಲು ಹೊದಿಸಿ, ಫಲ ತಾಂಬೂಲ, ನೆನಪಿನ ಕಾಣಿಕೆ ಹಾಗೂ ರೂ.10,000.00ದ ಚೆಕ್ ನೀಡಿ ಪ್ರಶಸ್ತಿ ಪ್ರಧಾನ ಮಾಡಿದರು.

ಕಾರ್ಯಕ್ರಮವನ್ನು ವಿರಾಜಪೇಟೆ ಕ್ಷೇತ್ರ ಶಾಸಕರಾದ ಶ್ರೀ ಕೆ.ಜಿ. ಬೋಪಯ್ಯ ಉದ್ಘಾಟನೆ ಮಾಡಿದರು. ಶ್ರೀ ಕೊಲ್ಯದ ಗಿರೀಶ್‌ರವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶಾಸಕ ಶ್ರೀ ಎಂ. ಪಿ ಅಪ್ಪಚ್ಚುರಂಜನ್, ವಿಧಾನ ಪರಿಷತ್ ಸದಸ್ಯ ಶ್ರೀ ಸುನೀಲ್ ಸುಬ್ರಮಣಿ, ಕರ್ನಾಟಕ ಕರಕುಶಲ ಅಭಿವೃದ್ಧಿ ನಿಗಮ ಅಧ್ಯಕ್ಷೆ ಶ್ರೀಮತಿ ವೀಣಾ ಅಚ್ಚಯ್ಯ, ನಗರ ಸಭಾ ಅಧ್ಯಕ್ಷೆ ಶ್ರೀಮತಿ ಬಂಗೇರಾ ಉಪಸ್ಥಿತರಿದ್ದರು.



**ಹೊದ್ದೆಟ್ಟಿ ಭವಾನಿ ಶಂಕರ್, ಬಾರಿಯಂಡ ಜೋಯ**

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯಿಂದ 2013-14 ನೇ




# 2015ನೇ ಸಾಲಿನ ಗೌರವ ಪ್ರಶಸ್ತಿ ಪ್ರದಾನ ಸಮಾರಂಭ

## ಬೆಂಗಳೂರಿನ ರವೀಂದ್ರ ಕಲಾ ಕ್ಷೇತ್ರದಲ್ಲಿ ವರ್ಣರಂಜಿತ ಕಾರ್ಯಕ್ರಮ

ಕರ್ನಾಟಕ ಅರೆಬಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ 2015ನೇ ಸಾಲಿನ ಗೌರವ ಪ್ರಶಸ್ತಿ ಪ್ರದಾನ ಸಮಾರಂಭ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ದಿ.26.11.2016 ನೇ ಸಂಜೆ ನಡೆಯಿತು ಕಾರ್ಯಕ್ರಮವನ್ನು ಕೇಂದ್ರ ಸಾಂಖ್ಯಿಕ ಯೋಜನಾ ಅನುಷ್ಠಾನ ಸಚಿವರಾದ ಸನ್ಮಾನ್ಯ ಶ್ರೀ.ಡಿ.ವಿ.ಸದಾನಂದ ಗೌಡರು ಉದ್ಘಾಟಿಸಿದರು.

ದೀಪ ಬೆಳಗಿಸುವುದರೊಂದಿಗೆ ಕಾರ್ಯಕ್ರಮವನ್ನು ಉದ್ಘಾಟಿಸಿದ ಸಚಿವರು ಅರೆಭಾಷಿಕ ಗೌಡರು ಹಾಸನದ ಐಗೂರು ಸೀಮೆಯಿಂದ ದಕ್ಷಿಣ ಕನ್ನಡದ ಪುತ್ತೂರು, ಸುಬ್ರಹ್ಮಣ್ಯ, ಸುಳ್ಯದಲ್ಲಿ ನೆಲೆಸಿ ಅನಂತರ 18ನೇ ಶತಮಾನದಲ್ಲಿ ಕೊಡಗಿಗೆ ಬಂದು ನೆಲೆಸಿದ ಗೌಡರು ಕೃಷಿ ಪ್ರಧಾನ ವ್ಯವಸ್ಥೆಯಿಂದ ಗುರುತಿಸಿಕೊಂಡವರು. ವಿವಿಧತೆಯಲ್ಲಿ ಏಕತೆಯನ್ನು ಹೊಂದಿದ ಭಾರತದಲ್ಲಿ ಹಲವು ಸಂಸ್ಕೃತಿಗಳಿದ್ದರೂ ಗೌಡರ ಸಂಸ್ಕೃತಿ ವಿಶಿಷ್ಟವಾದದ್ದು. ಆದರೆ ಆಧುನಿಕರಣ ಗೌಡರ ಸಾಂಸ್ಕೃತಿಕ ಬದುಕಿನಲ್ಲಿ ಬದಲಾವಣೆಯನ್ನು ತಂದಿದೆ ಎನ್ನುತ್ತಾ ಹಿಂದೆ ಊರಿನಲ್ಲಿ ನಡೆಯುತ್ತಿದ್ದ ಮದುವೆಗಳಲ್ಲಿ ಊರಿನ ಪ್ರತಿಯೊಬ್ಬರು ತಮ್ಮದೇ ಮನೆ ಮದುವೆಯಂತೆ ಸಂಭ್ರಮಿಸುತ್ತಿದ್ದರು. ಆದರೆ ಇಂದು ಬದಲಾಗುತ್ತಿರುವ ಸ್ಥಿತಿಗತಿಗಳಲ್ಲಿ ಒಂದು ರೀತಿಯ ಯಾಂತ್ರೀಕರಣ ಮನೋಭಾವ ಜನರಲ್ಲಿ ಮೂಡಿದೆ ಎಂದರು. ತಾನು ಕರ್ನಾಟಕದ ಮುಖ್ಯಮಂತ್ರಿಯಾಗಿದ್ದಾಗ ಅರೆಭಾಷೆಗೆ ಒಂದು ಅಕಾಡೆಮಿಯನ್ನು ಮಾಡುವ ಕಾರ್ಯವಾದದ್ದಕ್ಕೆ ಹೆಮ್ಮೆ ಇದೆ ಎಂದರಲ್ಲದೆ ಇಂದು ಅಕಾಡೆಮಿಯ ಕಾರ್ಯಕ್ರಮಗಳು ದೂರದ ದೆಹಲಿಯವರೆಗೆ ತಲುಪಿದ್ದು ಅರೆಭಾಷೆಯ ಸಾಹಿತ್ಯ ಮತ್ತು ಸಂಸ್ಕೃತಿಯು ಇನ್ನೂ ವಿಸ್ತರಿಸಲು ಓದುವ ಜನ






# ಮುಡೂರು, ಜಾನಕಿ, ಗೀತಾಗೆ ಅರೆಭಾಷೆ ಅಕಾಡೆಮಿ ಗೌರವ ಪ್ರಶಸ್ತಿ

ವಿಕ ಸುದ್ದಿಲೋಕ, ಮಡಿಕೇರಿ

ಹೆಚ್ಚಾಗಬೇಕು ಮತ್ತು ಭಾಷೆಯನ್ನು ಬಳಸುವವರ ಸಂಖ್ಯೆ ಹೆಚ್ಚಾಗಬೇಕು, ಮನೆ ಮಂದಿ ಮಕ್ಕಳೊಡನೆ ಅರೆಭಾಷೆಯನ್ನು ಮಾತನಾಡಬೇಕು ಎಂದರು.

ಸಮಾರಂಭದಲ್ಲಿ ಹಿರಿಯ ವಿದ್ವಾಂಸ ಟಿ.ಜಿ. ಮುಡೂರು ಮತ್ತು ಶ್ರೀಮತಿ ಬೈತಡ್ಕ ಜಾನಕಿಯವರಿಗೆ ಗೌರವ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಪ್ರಶಸ್ತಿಯು 50,000 ರೂಗಳ ಚೆಕ್,ಪ್ರಶಸ್ತಿ ಪತ್ರ, ಪ್ರಶಸ್ತಿ ಫಲಕ, ಶಾಲು, ಹಾರ, ಹಣ್ಣು ಹಂಪಲುಗಳನ್ನು ಒಳಗೊಂಡಿತು. ದೆಹಲಿಯ ಜವಹರಲಾಲ್ ನೆಹರೂ ವಿಶ್ವವಿದ್ಯಾನಿಲಯದ ಕನ್ನಡ ಭಾಷಾ ನಿರ್ದೇಶಕರಾದ ಪ್ರೊ. ಪುರುಷೋತ್ತಮ ಬಿಳಿಮಲೆಯವರು ಪ್ರಶಸ್ತಿ ಪ್ರದಾನ ಭಾಷಣ ಮಾಡಿದರು. ಅರೆಭಾಷೆಗೊಂದು ಸಾಹಿತ್ಯವನ್ನು ಸೃಷ್ಟಿಮಾಡುವ ಶಕ್ತಿ ಇದೆ ಅರೆಭಾಷೆ ಜನಪದ ಕಥೆಗಳಲ್ಲಿ ತಮ್ಮದೇ ಆದ ಸಾಂಸ್ಕೃತಿಕ ಮೌಲ್ಯವಿದೆ ಎಂದರು. ರಾಮಾಯಣ, ಮಹಾಭಾರತದ ಪಾತ್ರಗಳು ಅರೆಭಾಷೆಯ ಕಥೆಗಳಲ್ಲಿ ತಮ್ಮದೇ ಆದ ಜಾನಪದ ಸೊಗಡಿನೊಂದಿಗೆ ಹೊರಹೊಮ್ಮಿದೆ ಎಂದರು. ಅರೆಭಾಷೆಗೆ ತನ್ನದೇ ಆದ ಸೌಂದರ್ಯವಿದೆ ಸೊಗಡಿದೆ ಎನ್ನುತ್ತಾ ಈಗಲೂ ಬಹಳಷ್ಟು ಹಿರಿಯರು ಅರೆಭಾಷೆಯಲ್ಲಿ ಮೌಖಿಕ ಸಾಹಿತ್ಯವನ್ನು ನಿರರ್ಗಳವಾಗಿ ಅಭಿವ್ಯಕ್ತಿಸುತ್ತಾರೆ ಎಂದರು.

ಇದೇ ವೇಳೆ ಅರೆಭಾಷೆಯಲ್ಲಿ ತ್ರೈಮಾಸಿಕ "ಹಿಂಗಾರ"ದ ಬಿಡುಗಡೆಯನ್ನು ವಿರಾಜಪೇಟೆಯ ಶಾಸಕರಾದ ಸನ್ಮಾನ್ಯ ಶ್ರೀ ಕೆ.ಜಿ.ಬೋಪಯ್ಯನವರು ಬಿಡುಗಡೆ ಮಾಡಿದರು. ಅಕಾಡೆಮಿಯ ಕಾರ್ಯವೈಖರಿಯ ಬಗ್ಗೆ ಮೆಚ್ಚುಗೆಯ ಮಾತಾನಾಡಿದ ಅವರು ಸರ್ಕಾರದಿಂದ ಇನ್ನೂ ಹೆಚ್ಚಿನ ಅನುದಾನ ಅಕಾಡೆಮಿಗೆ ಬಿಡುಗಡೆಯಾಗಬೇಕು ಆ ಮೂಲಕ ಇನ್ನೂ ಅನೇಕ ಸಂಸ್ಕೃತಿಪರವಾದ ಮತ್ತು ಸಾಹಿತ್ಯಕ ಪರವಾದ ಕಾರ್ಯಕ್ರಮಗಳು ಮೂಡಿಬರಬೇಕು ಎಂದರು.

ಕನ್ನಡ ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ.ಕೆ.ಸಿ.ದಯಾನಂದರವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು ಮತ್ತು ಕಾರ್ಯಕ್ರಮದ ಯಶಸ್ವಿಗೆ ಶುಭಕೋರಿದರು.

ಸಭಾ ಕಾರ್ಯಕ್ರಮದ ನಂತರ ಕಾವ್ಯಕಲಾ ತಂಡ ಮರಗೋಡು ಅವರಿಂದ ನೃತ್ಯ ರೂಪಕ, ಚೆಂಬು ದಬ್ಬಡ್ಕ ತಂಡದವರಿಂದ ಸಿದ್ಧವೇಷ, ಶಶಿಧರ ಮಾವಿನಕಟ್ಟೆಯವರಿಂದ ಅರೆಭಾಷೆ ಹಾಡುಗಳು, ಕೊಡಗು ಗೌಡ ಸಮಾಜ ಬೆಂಗಳೂರು, ದಕ್ಷಿಣ ಕನ್ನಡ ಕೊಡಗು ಗೌಡ ಸಮಾಜಗಳ ಸದಸ್ಯರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದು ಜನರ ಮೆಚ್ಚುಗೆಗೆ ಪಾತ್ರವಾದವು.



# 2016 ಮತ್ತು 2017ನೇ ಸಾಲಿನ ಗೌರವ ಪ್ರಶಸ್ತಿ ಪ್ರದಾನ ಸಮಾರಂಭ

ದಿನಾಂಕ 11.08.2017 ರಂದು ಕೊಡಗು ಗೌಡ ಸಮಾಜ, ಮಡಿಕೇರಿ ಇಲ್ಲಿ 2016 ಮತ್ತು 2017 ನೇ ಸಾಲಿನ ಗೌರವ ಪ್ರಶಸ್ತಿ ಪ್ರದಾನ ಸಮಾರಂಭ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಅಕಾಡೆಮಿ ಅಧ್ಯಕ್ಷರಾದ ಶ್ರೀ ಕೊಲ್ಯದ ಗಿರೀಶ್‌ರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಅರೆಭಾಷೆ ಸಂಸ್ಕೃತಿಯನ್ನು ಬಿಂಬಿಸುವ ಮೆರವಣಿಗೆಯನ್ನು ಹಮ್ಮಿಕೊಳ್ಳಲಾಗಿತ್ತು. ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರಾದ ಶ್ರೀ ರಮಾನಾಥ ರೈರವರು ಪ್ರಶಸ್ತಿ ಪ್ರಧಾನ ಮಾಡಿ ಯಾವುದೇ ಭಾಷೆ ಬಳಕೆ ಇಲ್ಲದಿದ್ದರೆ ನಶಿಸಿ ಹೋಗುವ ಸಾಧ್ಯತೆ ಹೆಚ್ಚಿದೆ. ಆದ್ದರಿಂದ ಮಾತೃ ಭಾಷೆಯಾದ ಅರೆಭಾಷೆ ಸೇರಿದಂತೆ ಹಲವು ಸ್ಥಳೀಯ ಭಾಷೆ, ಜನಪದ ಸಾಹಿತ್ಯ ಸಂಸ್ಕೃತಿಯನ್ನು ಉಳಿಸಿ ಬೆಳೆಸುವುದು ಅತ್ಯಗತ್ಯವಾಗಿದೆ ಎಂದು ಹೇಳಿದರು.

2016 ಮತ್ತು 2017 ನೇ ಸಾಲಿನ ಪ್ರಶಸ್ತಿಗೆ ಭಾಜನರಾದ ಡಾ.ಪುರುಷೋತ್ತಮ ಬಿಳಿಮಲೆ, ಶ್ರೀ ಕುಲ್ಲಚನ ಕಾರ್ಯಪ್ಪ, ಶ್ರೀಮತಿ ಎಂ.ಜಿ.ಕಾವೇರಮ್ಮ, ಶ್ರೀ ಪಟ್ಟಡ ಪ್ರಭಾಕರ, ಶ್ರೀ ಕೇಪು ಅಜಿಲಾ ಮತ್ತು ಶ್ರೀ ಅಮ್ಮಾಜೀರ ಪೊನ್ನಪ್ಪ ರವರನ್ನು ಶಾಲು ಹೊದಿಸಿ, ಗೌರವ ಪ್ರಶಸ್ತಿ ಫಲಕ, ಪ್ರಶಸ್ತಿ ಪತ್ರ ಹಾಗೂ ರೂ 50,000/-ಗಳ ಚೆಕ್ ನೀಡಿ ಗೌರವಿಸಲಾಯಿತು. ವೇದಿಕೆಯಲ್ಲಿ ಶಾಸಕರಾದ ವೇದಿಕೆಯಲ್ಲಿ ವಿಧಾನಪರಿಷತ್ ಸದಸ್ಯರಾದ ಎಂ.ಪಿ. ಸುನಿಲ್ ಸುಬ್ರಮಣಿ, ಕರ್ನಾಟಕ ರಾಜ್ಯ ರೇಷ್ಮೆ ಮಾರಾಟ ಮಂಡಳಿ ಆದ್ಯಕ್ಷರಾದ ಶ್ರೀ ಟಿ.ಪಿ. ರಮೇಶ್, ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ಉಪಾಧ್ಯಕ್ಷರಾದ ಶ್ರೀಮತಿ ಪದ್ಮಿನಿ ಪೊನ್ನಪ್ಪ, ಕೊಡಗು ಗೌಡ ಸಮಾಜಗಳ ಒಕ್ಕೂಟ ಅಧ್ಯಕ್ಷರಾದ ಶ್ರೀ ಸೂರ್ತಲೆ ಸೋಮಣ್ಣ, ಬೆಂಗಳೂರಿನ ಮಾಜಿ ಕಾರ್ಪೊರೇಟರ್ ಶ್ರೀ ಹರೀಶ್ ಬೋಪಣ್ಣ, ಕೊಡಗು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಶ್ರೀ ಲೋಕೇಶ್ ಸಾಗರ್, ಶಕ್ತಿ ದಿನ ಪತ್ರಿಕೆ ಪ್ರಧಾನ ಸಂಪಾದಕರಾದ ಜಿ.ರಾಜೇಂದ್ರ ಮತ್ತು ಕೊಡಗು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷರಾದ ಶ್ರೀ ಅಜ್ಜಮಾಡ ರಮೇಶ್ ಕುಟ್ಟಪ್ಪ ಉಪಸ್ಥಿತರಿದ್ದರು.

ರಿಜಿಸ್ಟ್ರಾರ್ ಉಮರಬ್ಬ ಸ್ವಾಗತಿಸಿದರು. ಶ್ರೀಮತಿ ಕಡ್ಲೇರ ತುಳಸಿ ಮೋಹನ್ ಪ್ರಾರ್ಥಿಸಿದರು. ಡಾ.ಕೋರನ ಸರಸ್ವತಿ ಮತ್ತು ಶ್ರೀಮತಿ ಸಂಗೀತರವರು ಕಾರ್ಯಕ್ರಮ ನಿರೂಪಣೆ ಮಾಡಿದರು. ಶ್ರೀ ಕುಡೆಕಲ್ ಸಂತೋಷ್ ಮತ್ತು ಶ್ರೀ ಸದಾನಂದ ಮಾವಜಿಯವರು ಪ್ರಶಸ್ತಿ ಪ್ರದಾನ ನಿರ್ವಹಣೆ ಮಾಡಿದರು, ಶ್ರೀ ಬಿ.ಸಿ.ವಸಂತ, ಶ್ರೀ ಪಿ.ಯಸ್.ಕಾರ್ಯಪ್ಪ, ಡಾ.ಪೂವಪ್ಪ ಕಣಿಯೂರು, ಶ್ರೀ ಅಣ್ಣಾಜಿ ಗೌಡ, ಶ್ರೀ ಯಶವಂತ ಕುಡೆಕಲ್‌ರವರು ಪ್ರಶಸ್ತಿ ಭಾಜನರ ಪರಿಚಯ ಮಾಡಿದರು. ಶ್ರೀ ಮಂದ್ರೀರ ಮೋಹನ್‌ದಾಸ್‌ರವರು ಕಾರ್ಯಕ್ರಮದ ಸಂಚಾಲಕರಾಗಿ ಕಾರ್ಯನಿರ್ವಹಿಸಿದರು. ಕೊನೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.



ಅಕಾಡೆಮಿ ವತಿಯಿಂದ ಸಾಂಪ್ರದಾಯಿಕ ಧಿರಿಸುಗಳ ವಿತರಣೆ



# ಸಾಂಸ್ಕೃತಿಕ ನಗರ ಮೈಸೂರಿನಲ್ಲಿ ಅರೆಭಾಷೆ ಐಸಿರಿ

**"ಅರೆಬಾಷಿಕರು ಶಿಸ್ತು ಮತ್ತು ಸಂಸ್ಕೃತಿಗೆ ಹೆಸರುವಾಸಿ" - ಶಾಸಕ ಶ್ರೀ ವಾಸು ಅಭಿಮತ**

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ವತಿಯಿಂದ ದಿನಾಂಕ 14.10.2016 ಮತ್ತು 15.10.2016 ರಂದು ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನ, ಮೈಸೂರು ಇಲ್ಲಿ ಅರೆಭಾಷೆ ಐಸಿರಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಸಾಂಸ್ಕೃತಿಕ ನಗರಿ ಎಂದೇ ಪ್ರಸಿದ್ಧಿಯಾಗಿರುವ ಮೈಸೂರಿನಲ್ಲಿ ಅರೆಭಾಷಿಕ ಗೌಡ ಜನಾಂಗದವರ ಸಂಸ್ಕೃತಿ ಅನಾವರಣಗೊಂಡಿತು. ವೈಭವಯುತ ಸಾಂಸ್ಕೃತಿಕ, ಸಾಂಪ್ರದಾಯಿಕ ಮೆರವಣಿಗೆ, ವಿಚಾರಗೋಷ್ಠಿ, ಸಾಂಸ್ಕೃತಿಕ ಕಾರ್ಯಕ್ರಮಗಳು ಅರ್ಥಪೂರ್ಣ ಕಾರ್ಯಕ್ರಮಕ್ಕೆ ಸಾಕ್ಷಿಯಾಯಿತು. ಶಿಸ್ತುಬದ್ಧ ಮೆರವಣಿಗೆಯಲ್ಲಿ ಸಹಸ್ರಾರು ಮಂದಿ ಪಾಲ್ಗೊಂಡು ಯಶಸ್ಸಿಗೆ ಕಾರಣೀಭೂತರಾದರು.

ಅರಮನೆ ಬಳಿಯ ಶ್ರೀ ಕೋಟೆ ಆಂಜನೇಯ ದೇವಾಲಯ ಬಳಿಯಿಂದ ಹೊರಟ ಮೆರವಣಿಗೆಯನ್ನು ಚಾಮರಾಜ ಕ್ಷೇತ್ರದ ಶಾಸಕ ವಾಸು ಉದ್ಘಾಟಿಸಿದರು. ಕುದುರೆ ಮೇಲೆ ಕುಳಿತ ಹುತಾತ್ಮ ಸ್ವಾತಂತ್ರ್ಯ ಹೋರಾಟಗಾರ ಸುಬೇದಾರ್ ಅಪ್ಪಯ್ಯ ಗೌಡ ಪ್ರತಿರೂಪ, ಹರಿಸೇವೆ, ಮದುವೆ, ಸಂಪ್ರದಾಯದ ಮಂಟಪಗಳು ಮೆರವಣಿಗೆಯಲ್ಲಿ ಸಂಸ್ಕೃತಿಯನ್ನು ಬಿಂಬಿಸಿದರೆ, ಮಾಜಿ ಸೈನಿಕರ ಸಂಘದ ಸ್ತಬ್ಧ ಚಿತ್ರ, ಕಾರ್ಗಿಲ್ ಯುದ್ಧದ ವೀರ ಸನ್ನಿವೇಶವನ್ನು ಬಿಂಬಿಸುವಂತಿತ್ತು.





**ಎಲ್ಲಾ ಭಾಷೆಗಿಂತ ಮಾತೃ ಭಾಷೆ ಶ್ರೇಷ್ಠ ಮಾತೃಭಾಷೆಯಲ್ಲಿ ಭಾವನೆಯನ್ನು ಮತ್ತು ಭಾವುಕತೆಯನ್ನು ಸರಳವಾಗಿ ವ್ಯಕ್ತಪಡಿಸಬಹುದು. - ವಿಶ್ರಾಂತ ಕುಲಪತಿ ಡಾ. ಚಿದಾನಂದಗೌಡ**

"ಅರೆಭಾಷೆ ಸಂಸ್ಕೃತಿಯ ಸಾಂಸ್ಕೃತಿಕ ಪಲ್ಲಟಗಳು"ಈ ವಿಷಯದ ಕುರಿತು ಶ್ರೀ ಸೀತರಾಮ ಕೇವಳ "ಅರೆಭಾಷೆ ಸಂಸ್ಕೃತಿ ನಿರ್ಮಾಣದಲ್ಲಿ ಮಹಿಳೆಯರ ಪಾತ್ರ" ಕುರಿತು ಶ್ರೀಮತಿ ಚಂದ್ರಮತಿ ಯವರು ಹಾಗೂ ಅರೆಭಾಷಿಕರ ನಂಬಿಕೆಗಳ ಹಿನ್ನೆಲೆ ಮತ್ತು ಅನನ್ಯತೆ" ಬಗ್ಗೆ ಶ್ರೀ ಪಟ್ಟಡ ಶಿವಕುಮಾರ್ ವಿಷಯ ಮಂಡನೆ ಮಾಡಿದರು. ಈ ಗೋಷ್ಠಿಯ ಅಧ್ಯಕ್ಷತೆಯನ್ನು ನಿವೃತ್ತ ಪ್ರಾಂಶುಪಾಲ ಡಾ. ಚೆರಿಯಮನೆ ಬಿ. ರಾಮಚಂದ್ರನವರು ವಹಿಸಿದ್ದರು.

ದಿನಾಂಕ 15.05.2016ರಂದು ಬೆಳಿಗ್ಗೆ ಸಾಂಸ್ಕೃತಿಕ ನಗರಿ ಮೈಸೂರಿನ ಅರಮನೆ ಆಂಜನೇಯ ದೇವಸ್ಥಾನದಿಂದ ಡೊಳ್ಳು ಕುಣಿತ, ಸೋಮನ ಕುಣಿತ, ಪೂಜಾ ಕುಣಿತ, ವೀರಗಾಸೆ, ಯಕ್ಷಗಾನ,ಸಿದ್ದವೇಷ, ಚಂಡೆ ವಾಲಗ ಭೂತದ ಕೋಲ, ಆಟಿ ಕಳಂಜ ವೇಷ, ಗುಡ್ಡೆಮನೆ ಅಪ್ಪಯ್ಯ ಗೌಡರ ವೇಷಭೂಷಣದೊಂದಿಗೆ ಕುದುರೆ ಮೇಲೆ ಮೆರವಣಿಗೆ ಮತ್ತು ಶ್ತಬ್ದ ಚಿತ್ರಗಳಾದ ಹರಿಸೇವೆ, ಐನ್‌ಮನೆ, ಕಾರ್ಗಿಲ್ ಯುದ್ಧದ ವೀರ ಸನ್ನಿವೇಶ, ಮದುವೆ ಸಂಪ್ರದಾಯದ ಮಂಟಪ ಅಲ್ಲದೆ ಸಾಂಪ್ರದಾಯಿಕ ಉಡುಪಿನಲ್ಲಿ ಪುರುಷರು ಮತ್ತು ಮಹಿಳೆಯರು ಕಳಶ ಹೊತ್ತ ಬೃಹತ್ ಮೆರವಣಿಗೆ ಮೂಲಕ ಭಾರತ್ ಸ್ಕೌಟ್ ಅಂಡ್ ಗೈಡ್ಸ್ ಮೈದಾನಕ್ಕೆ ಬರಲಾಯಿತು.


ಸಂಜೆ ವೇಳೆ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳು ಜನಮನ ಸೂರೆಗೊಂಡು ಹತ್ತು ವಿವಿಧ ಕಲಾತಂಡಗಳು ನಡೆಸಿಕೊಟ್ಟ ಕಾರ್ಯಕ್ರಮ ಗಳಲ್ಲಿ ಪುತ್ತೂರಿನ ನಾದ ನಿನಾದ ಸಂಸ್ಥೆಯ ಹೆಜ್ಜೆಗೆಜ್ಜೆ ನಿನಾದ ದೊಳಗೆನುಟ್ಟು ಕಾರ್ಯಕ್ರಮ ಅರೆಭಾಷೆ ಜನಾಂಗದ ಹಾದಿಯನ್ನು ಪ್ರತಿಬಿಂಬಿಸಿದರೆ, ಭಾಗಮಂಡಲದ ನಾಟ್ಯ ಮಿಲನ ಕಲಾಟ್ರಸ್ಟ್ ತಂಡದ ಅರೆಭಾಷೆ ಸಿರಿ ಕಾರ್ಯಕ್ರಮ ಜನಾಂಗದ ಸಂಸ್ಕೃತಿ ಪದ್ಧತಿ, ಪರಂಪರೆ ಯನ್ನು ತೆರೆದಿಟ್ಟಿತು. ತಾಂಡವಂ ಅಕಾಡೆಮಿ ಯವರಿಂದ ಸಾಂಸ್ಕೃತಿಕ ನೃತ್ಯ, ಐಕೊಳ ತಂಡ ಚೌರಿ ಆಟ, ಮೈಸೂರಿನ ಕೊಡಗು ಗೌಡ ಯುವ ವೇದಿಕೆಯ ನೃತ್ಯ ಪ್ರದರ್ಶನ ಸಾಂಪ್ರದಾಯಿಕ ಉಡುಗೆ-ತೊಡುಗೆ ಪ್ರದರ್ಶನ ಗಮನ ಸೆಳೆದವು. ರಂಗ ಕಲಾವಿದೆ ಗೀತಾ ಮೋಂಟಡ್ಕ ಅವರ ಮಿಮಿಕ್ರಿ ನೆರೆದವರ ಮನಸ್ಸಿಗೆ ಮುದ ನೀಡಿತು. ತೀರ್ಪುಗಾರರಾಗಿ ಕೊಟ್ಟಕೇರಿಯನ ಲೀಲಾ





ದಯಾನಂದ ಮಡಿಕೇರಿ, ಕಡ್ಲೇರ ತುಳಸಿ ಮೋಹನ್ ಬೆಟ್ಟಗೇರಿ, ಡಾ. ಸಿ.ವೈ. ಕವಿತ ಮೈಸೂರು ಇವರು ಭಾಗವಹಿಸಿದ್ದರು. ಸಂಚಾಲಕರುಗಳಾಗಿ ಅಕಾಡೆಮಿ ಸದಸ್ಯರುಗಳಾದ ಸದಾನಂದ ಮಾವಾಜಿ ಮತ್ತು ಮಂದ್ರೀರ ಮೋಹನ್‌ದಾಸ್ ಕಾರ್ಯ ನಿರ್ವಹಿಸಿದರು.

ಕಾರ್ಯಕ್ರಮದ ಯಶಸ್ಸಿಗೆ ಮತ್ತು ಆತಿಥ್ಯಕ್ಕೆ ಮೈಸೂರು ಚಾಮರಾಜ ಕ್ಷೇತ್ರದ ಶಾಸಕರಾದ ಸನ್ಮಾನ್ಯ ವಾಸುರವರು ಕೈಜೋಡಿಸಿದರು.











# “ಹಿಂಗಾರ” ಅಕಾಡೆಮಿಯ ಬಂಗಾರ

**ಹಿಂಗಾರ, ತ್ರೈಮಾಸಿಕವನ್ನು RNI [REGISTRAR OF NEWSPAPERS FOR INDIA] ‘ಅರೆಭಾಷೆ’ ಭಾಷಾ ಮಾಧ್ಯಮದಡಿ ಪ್ರಥಮವಾಗಿ ನೋಂದಾವಣೆ ಮಾಡುವುದರ ಮೂಲಕ ‘ಅರೆಭಾಷೆ’ಗೆ ರಾಷ್ಟ್ರಮಟ್ಟದ ಛಾಪನ್ನು ಮೂಡಿಸಿದೆ.**

**RNI No. : KARARB / 2016 / 69571**


ಹಿಂಗಾರ ಎಂದರೆ ತೆಂಗು, ಅಡಕೆ ಅಥವಾ ಆ ವರ್ಗಕ್ಕೆ ಸೇರಿದ ಮರಗಳ ಹೂವಿನ ಗೊಂಚಲು ಎಂದರ್ಥ. ಅಕಾಡೆಮಿ ವತಿಯಿಂದ ಪ್ರಕಾಶನಗೊಳ್ಳುತ್ತಿರುವ ‘ಹಿಂಗಾರ’ ಎಂಬ ಹೆಸರಿನ ತ್ರೈಮಾಸಿಕ ಪತ್ರಿಕೆಯು ಸಾಹಿತ್ಯ ಕ್ಷೇತ್ರಕ್ಕೆ ಒಳ್ಳೆಯ ಕೊಡುಗೆಯಾಗಿದೆ.

ಹಿಂಗಾರ ತ್ರೈಮಾಸಿಕ ಪುಸ್ತಕಕ್ಕೆ ಸರ್ಕಾರದಿಂದ RNI [REGISTRAR OF NEWS PAPERS FOR INDIA] ಮಾನ್ಯತೆ ಪಡೆದಿರುತ್ತದೆ. 5-10-2015 ರಂದು ಇದರ ಮೊದಲ ಸಂಚಿಕೆ ಪ್ರಕಟವಾಯಿತು. ಇದೀಗ ಏಳು ತ್ರೈಮಾಸಿಕಗಳು ಲೋಕಾರ್ಪಣೆಗೊಂಡಿವೆ. ಅಧ್ಯಕ್ಷರ ನುಡಿ, ಸಂಪಾದಕೀಯ, ವ್ಯಕ್ತಿ ಪರಿಚಯ, ಚಿಂತನೆ, ಸಂಸ್ಕೃತಿ, ಕತೆಗಳು ಹರಟೆ, ಕವನಗಳು, ಗಾದೆಗಳು, ಅನುಭವ, ವೈದ್ಯಕೀಯ, ಅಡುಗೆ ಈ ಎಲ್ಲಾ ಅಂಕಣಗಳಿಗೆ ಈ ಪತ್ರಿಕೆಯಲ್ಲಿ ಆದ್ಯತೆ ಇರುವುದು. ಇದರ ಎಲ್ಲಾ ಬರವಣಿಗೆ ಕನ್ನಡ ಲಿಪಿಯಲ್ಲಿದ್ದು, ಅರೆಭಾಷೆಯಲ್ಲಿರುತ್ತವೆ.

ಎಲೆ ಮರೆಯ ಕಾಯಿಯಂತಿರುವ ಕವಿಗಳ ಸಾಹಿತಿಗಳ ಬರವಣಿಗೆಯನ್ನು ಬೆಳಕಿಗೆ ತರುತ್ತಿರುವ ಕೆಲಸವನ್ನು ಅಕಾಡೆಮಿ ಮಾಡುತ್ತಿದೆ. ಅಕಾಡೆಮಿ ಕೈಗೊಂಡ ಕಾರ್ಯಕ್ರಮಗಳನ್ನು ಪ್ರತಿ ತ್ರೈಮಾಸಿಕದಲ್ಲಿ ದಾಖಲಿಸಲಾಗುತ್ತಿದೆ. ಬಿಡಿ ಪತ್ರಿಕೆಯ ಬೆಲೆ ರೂ. 20/-ಆಗಿದ್ದು, ಮೂರು ವರ್ಷಕ್ಕೆ ರೂ 200/- ಆಗಿರುತ್ತದೆ. ಸದಸ್ಯರಾದವರಿಗೆ ಅಂಚೆ ಮೂಲಕ ಪತ್ರಿಕೆಯನ್ನು ಕಳುಹಿಸಲಾಗುತ್ತದೆ. ಸಂಗ್ರಹ ಯೋಗ್ಯವಾಗಿರುವ ಈ ತ್ರೈಮಾಸಿಕಕ್ಕೆ ಸದಸ್ಯರಾಗಿ ಪ್ರೋತ್ಸಾಹಿಸುವಂತೆ ಅಕಾಡೆಮಿ ಕೋರುತ್ತದೆ.

ಹಿಂಗಾರ ಪತ್ರಿಕೆಯ ಪ್ರಧಾನ ಸಂಪಾದಕರಾಗಿ ಕೊಲ್ಯದ ಗಿರೀಶ್, ಸಂಪಾದಕರಾಗಿ ಡಾ. ಪೂವಪ್ಪ ಕಣಿಯೂರು ಮತ್ತು ಮೋಹನ ಸೋನ ಇವರು ಯಶಸ್ವಿಯಾಗಿ ಕಾರ್ಯ ನಿರ್ವಹಿಸಿದ್ದಾರೆ.



# ಕೆಸರುಗದ್ದೆ ಕ್ರೀಡೋತ್ಸವ ಮತ್ತು ಸಾಂಪ್ರದಾಯಿಕ ನಾಟಿ ಓಟ

ಮಡಿಕೇರಿ ತಾಲೂಕಿನ ಅವಂದೂರು ಗ್ರಾಮದ ಕಾಳೇರಮ್ಮನ ಅಯ್ಯಣ್ಣನವರ ಗದ್ದೆ ಇಲ್ಲಿ 2016 ಆಗಸ್ಟ್ 12 ರಂದು ಕೆಸರುಗದ್ದೆ ಕ್ರೀಡೋತ್ಸವ ಮತ್ತು ಸಾಂಪ್ರದಾಯಿಕ ನಾಟಿ ಓಟ ಕಾರ್ಯಕ್ರಮ ವನ್ನು ಶ್ರೀ ಗೋಪಾಲಕೃಷ್ಣ ಯುವ ಸಂಘ ಮತ್ತು ಚಾರಿಟೇಬಲ್ ಟ್ರಸ್ಟ್, ಅವಂದೂರು ಇವರ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಶ್ರೀ ಮುದ್ಯನ ಚಂದ್ರಶೇಖರ್ ಅಧ್ಯಕ್ಷರು ಮದೆ ಗ್ರಾಮ ಪಂಚಾಯತ್ ಇವರು ಗ್ರಾಮೀಣ ಕ್ರೀಡೆಗೆ ಚಾಲನೆ ನೀಡಿದರು ಗ್ರಾಮೀಣ ಕ್ರೀಡೆಗಳಾದ ಕಾಳು ಹೆಕ್ಕುವುದು, ಕೆಸರುಗದ್ದೆ ಓಟ,ಎತ್ತುಗಳಲ್ಲಿ ಗದ್ದೆ ಹೂಡುವ ಸ್ಪರ್ಧೆ, ಅಗೆ ತೆಗೆಯುವ ಸ್ಪರ್ಧೆ, ನಾಟಿ ನೆಡುವ ಸ್ಪರ್ಧೆ, ಅಡಿಕೆ ಹಾಳೆಯಲ್ಲಿ ಕುಳ್ಳಿರಿಸಿ ಎಳೆಯುವ ಸ್ಪರ್ಧೆ, ಅಂಬುಗಾಯಿ, ಹಗ್ಗಜಗ್ಗಾಟ, ಥ್ರೋಬಾಲ್ ಆಟ, ವಾಲಿಬಾಲ್ ಆಟ, ಕೃಷ್ಣ ರುಕ್ಮಿಣಿ ಓಟ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿದ್ದು ಸ್ಪರ್ಧಿಗಳು ಭಾಗವಹಿಸಿ ಮನರಂಜನೆ ಪಡೆದುಕೊಂಡರು. ಶ್ರೀ ಪಟ್ಟಡ ಶಿವಕುಮಾರ್‌ರವರು ಸಾಂಪ್ರದಾಯಿಕ ಕೃಷಿ ಬಗ್ಗೆ ವಿಚಾರಮಂಡನೆ ಮಾಡಿದರು.

ಸಂಜೆ ನಡೆದ ಸಮಾರೋ[...] ಸಮಾರಂಭದ ಅಧ್ಯಕ್ಷತೆಯನ್ನು ಅಕಾಡೆ[...] ಅಧ್ಯಕ್ಷರಾದ ಕೊಲ್ಯದ ಗಿರೀಶ್ ರವರು ವಹಿಸಿದ್ದ[...] ಸಮಾರಂಭದ ಉದ್ಘಾಟನೆಯನ್ನು ಶಾಸಕ ಕೆ.[...] ಬೋಪಯ್ಯ ರವರು ನೆರವೇರಿಸಿದರು. ಮು[...] ಅಥಿತಿಗಳಾಗಿ, ವಿಧಾನಪರಿಷತ್ ಸದಸ್ಯರಾ[...] ಶ್ರೀಮತಿ ವೀಣಾ ಅಚ್ಚಯ್ಯ, ತಾಲ್ಲೂಕು ಪಂಚಾ[...] ಸದಸ್ಯ ಕೊಡಪಾಲು ಗಣಪತಿ, ಗೋಪಾಲಕೃ[...] ಯುವ ಸಂಘದ ಅಧ್ಯಕ್ಷರಾದ ಹೊಸೂರು ಗಿ[...] ಕಾರ್ಯಕ್ರಮ ಸಂಚಾಲಕರು ಮಂದ್ರೀ[...] ಮೋಹನ್‌ದಾಸ್ ರವರು ಉಪಸ್ಥಿತರಿದ್ದರು

## ಸುಳ್ಯದಲ್ಲಿ ಕೆಸರುಗದ್ದೆ ಕ್ರೀಡೋತ್ಸವ ಮತ್ತು ಸಾಂಪ್ರದಾಯಿಕ ನಾಟಿ ಓಟ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿ[...] ಅಕಾಡೆಮಿ ವತಿಯಿಂದ ದಿನಾಂಕ 24.08.20[...] ನೇ ಬುಧವಾರದಂದು ದ.ಕ.ಜಿಲ್ಲೆಯ,





ಸುಳ್ಯ ತಾಲೂಕಿನ ಬೆಳ್ಳಾರೆ ಗ್ರಾಮದ ಐತಪ್ಪಗೌಡರ ಗದ್ದೆಯಲ್ಲಿ ಕೆಸರುಗದ್ದೆ ಕ್ರೀಡೋತ್ಸವ ಮತ್ತು ಸಾಂಪ್ರದಾಯಿಕ ನಾಟಿ ಓಟ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮವನ್ನು ಬೆಳ್ಳಾರೆ ಗ್ರಾಮ ಗೌಡ ಸಮಿತಿ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಗ್ರಾಮೀಣ ಹಾಗೂ ಮನರಂಜನಾ ಕ್ರೀಡೆಗಳಾದ ಕಾಳು ಹೆಕ್ಕುವುದು. ಕೆಸರುಗದ್ದೆ ಓಟ, ನೇಜಿ ತೆಗೆಯುವುದು-ನೆಡುವುದು. ಅಡಿಕೆ ಹಾಳೆಲಿ ಕುಳ್ಳಿರಿಸಿ ಎಳೆಯುವುದು, ಹಗ್ಗ-ಜಗ್ಗಾಟ. ಥ್ರೋಬಾಲ್, ವಾಲಿಬಾಲ್, ಮೊಸರು ಕುಡಿಕೆ ಒಡೆಯುವುದು, ಸೋಬಾನೆ ಇವುಗಳನ್ನು ಮಕ್ಕಳು, ಪುರುಷರು., ಮಹಿಳೆಯರಿಗೆ ಏರ್ಪಡಿಸಲಾಗಿತ್ತು.

ಅರೆಭಾಷೆ ಹಾಡು ನೃತ್ಯ, ಸ್ವರಚಿತ ಕವನ. ಜಾನಪದ ನೃತ್ಯಗಳ ಸಾಂಸ್ಕೃತಿಕ ಕಾರ್ಯಕ್ರಮ ಗಳನ್ನು ನಡೆಸಲಾಯಿತು. ಅಕಾಡೆಮಿ ಸದಸ್ಯರಾದ ಡಾ. ಪೂವಪ್ಪ ಕಣಿಯೂರು ರವರು ನಮ್ಮ ಕೃಷಿ ಬದುಕು ಬಗ್ಗೆ ಮಾತನಾಡಿದರು.













ಪರಿಸರದ ಮಡಿಲಲ್ಲಿ ಗ್ರಾಮೀಣ 'ಒಲಂಪಿಕ್'


...ಯುದ ಕೆಸರುಗದ್ದೆ ಕ್ರೀಡೋ...





# ಕೋಟೆಯಲ್ಲಿ ಹುತ್ತರಿ ಕೋಲಾಟ 2014



"ಹುತ್ತರಿ" ಎಂದರೆ ಹೊಸ ಅಕ್ಕಿ ಎಂದರ್ಥ. ಕೊಡಗು ಜಿಲ್ಲೆಯಲ್ಲಿ ಹುತ್ತರಿಯನ್ನು ಸುಗ್ಗಿ ಹಬ್ಬ ಎಂದು ಆಚರಿಸಲಾಗುವುದು. ಗದ್ದೆಯಲ್ಲಿ ನೆಟ್ಟ ಬೆಳೆಯನ್ನು ಧಾನ್ಯ ಲಕ್ಷ್ಮಿಯ ರೂಪದಲ್ಲಿ ಮನೆಗೆ ತರುವ ಹಬ್ಬವನ್ನು ವಿಶೇಷವಾಗಿ ಹುತ್ತರಿ ಹಬ್ಬ ಎಂದು ಆಚರಿಸಲಾಗುವುದು. ಹಬ್ಬದ ಮರುದಿನ ಊರ ದೇವಸ್ಥಾನ, ಬಾಣೆಗಳಲ್ಲಿ ಹುತ್ತರಿ ಕೋಲಾಟ ರಾಜಪರಂಪರೆಯಿಂದಲೇ ನಡೆದು ಬಂದಿದ್ದು, ಅಂತೆಯೇ ಐತಿಹಾಸಿಕ ಮಡಿಕೇರಿ ಕೋಟೆಯ ಆವರಣದಲ್ಲಿ ಹುತ್ತರಿಯ ಮರುದಿನವೇ ಹುತ್ತರಿ ಕೋಲಾಟ ನಡೆದುಕೊಂಡು ಬರುತ್ತಿದೆ. ಪ್ರಸ್ತುತ ಅದರ ಜವಾಬ್ದಾರಿಯನ್ನು ಶ್ರೀ ಓಂಕಾರೇಶ್ವರ ದೇವಸ್ಥಾನ ಸಮಿತಿಯುವರು ವಹಿಸಿಕೊಂಡು ನಡೆಸಿಕೊಂಡು ಬರುತ್ತಿದ್ದಾರೆ. ಈ ಕಾರ್ಯಕ್ರಮಕ್ಕೆ ಅಕಾಡೆಮಿಯಿಂದ ಹುತ್ತರಿ ಕೋಲಾಟ ತಂಡಗಳನ್ನು ಪ್ರಾಯೋಜಿಸುತ್ತಿದೆ.

ಮಡಿಕೇರಿ ನಗರದ ಕೋಟೆ ಆವರಣ ದಲ್ಲಿರುವ ಐತಿಹಾಸಿಕ ಅರಮನೆ ಎದುರು ದಿನಾಂಕ 08.12.2014 ರಂದು, 27–11–2015 ಮತ್ತು 14–12–2016 ರಂದು ಶ್ರೀ ಓಂಕಾರೇಶ್ವರ ದೇವಸ್ಥಾನ ಸಮಿತಿಯವರು ನಡೆಸಿದ ಕೊಡಗಿನ ಹುತ್ತರಿ ಕಾರ್ಯಕ್ರಮದಲ್ಲಿ ಅಕಾಡೆಮಿ ವತಿಯಿಂದ





ಮಡಿಕೇರಿಯಲ್ಲಿ ಏರ್ಪಡಿಸಿದ್ದ ಹುತ್ತರಿ ಕೋಲಾಟದಲ್ಲಿ ವಾಲಗಕ್ಕೆ ಹೆಜ್ಜೆ ಹಾಕಿದ ...



ಅನಾವರಣಗೊಂಡ ಹುತ್ತರಿ ಕೋಲಾಟ ಕೊಡಗಿನ ಸಂಸ್ಕೃತಿಯನ್ನು ಬಿಂಬಿಸಿತು. ಸತೀಶ್, ಮರಗೋಡು ಇವರ ತಂಡ, ನೆಲ್ಲಕ್ಕಿ ಯುವತಿ ಮಂಡಳಿ ವತಿಯಿಂದ ಪ್ರದರ್ಶಿಸಿದ ಹುತ್ತರಿ ಕೋಲಾಟ ಆಕರ್ಷಣೀಯವಾಗಿತ್ತು. ಅಲ್ಲದೆ ಸಾಂಪ್ರದಾಯಿಕ ಉಡುಪಿನಲ್ಲಿ ಹಿರಿಯರು ಕಿರಿಯರು ಎಂಬ ಭೇದವಿಲ್ಲದೆ ಕೊಡಗಿನ ಕಲಾ ವೈಭವವನ್ನು ಕಲಾವಿದರು ಪ್ರದರ್ಶಿಸಿದರು. ಈ ಸಮಾರಂಭಕ್ಕೆ ಜಿಲ್ಲೆಯ ಜನಪ್ರತಿನಿಧಿಗಳು, ಅಕಾಡೆಮಿಗಳ ಅಧ್ಯಕ್ಷರುಗಳು, ಸಾರ್ವಜನಿಕರು ಆಗಮಿಸಿ ಕೊಡಗಿನ ಸಾಂಪ್ರದಾಯಿಕ ವಾಲಗಕ್ಕೆ ಹೆಜ್ಜೆ ಹಾಕಿದರು. ಕೋಟೆಯ ಸೊಬಗನ್ನು ಸವಿಯಲು ಬಂದಿದ್ದ ಪ್ರವಾಸಿಗರು ಈ ಸಂಭ್ರಮವನ್ನು ಕಣ್ತುಂಬಿಕೊಂಡರು.



## ಬಿ.ಬಾಡಗ ಹುತ್ತರಿ ಫಂಡ್ – 100ರ ಸಂಭ್ರಮ


ದಿನಾಂಕ 13.12.2014 ರಂದು ಬಿ.ಬಾಡಗ ಗ್ರಾಮದ ಹುತ್ತರಿ ಫಂಡ್‌ನ ಶತಮಾನೋತ್ಸವವನ್ನು ಅಕಾಡೆಮಿ ಸಹಯೋಗದಲ್ಲಿ ಸಂಭ್ರಮದಿಂದ ನಡೆಸಲಾಯಿತು. ಕಾರ್ಯಕ್ರಮವನ್ನು ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾದ ಕೊಲ್ಯದ ಗಿರೀಶ್‌ರವರು ಭತ್ತದ ಪರೆಯಿಂದ ಹಿಂಗಾರವನ್ನು ಬಿಡಿಸಿ ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ಗ್ರಾಮೀಣ ಭಾಗದಲ್ಲಿ ಜನಾಂಗ ಬಾಂಧವರು ಅತೀ ಉತ್ಸಾಹದಿಂದ ಹುತ್ತರಿ ಉರೊರ್ಮೆ ಆಚರಿಸುತ್ತಿರುವುದು ಸಂತಸವಾಗಿದೆ. ಜನಾಂಗದ ಏಳಿಗೆಗಾಗಿ ಅಕಾಡೆಮಿಯಿಂದ ಎಲ್ಲಾ ರೀತಿಯ ಸಹಕಾರ ಹಾಗೂ ಪ್ರೋತ್ಸಾಹ ನೀಡಲಾಗುವುದು ಎಂದು ಹೇಳಿದರು.




# ಮಳೆಯಲ್ಲೇ ಹುತ್ತರಿ ಸಂಭ್ರಮ

**ವಾಲಗಕ್ಕೆ ಹೆಜ್ಜೆ ಹಾಕಿದ ಬೋಪಯ್ಯ | ಆಕರ್ಷಿಸಿದ ಉಮ್ಮತ್ತಾಟ್ ಪ್ರದರ್ಶನ**

**ಮೃತ್ಯುಂಜಯ ದೇಗುಲದಲ್ಲಿ ವಿಶೇಷ ಪೂಜೆ**



**ಮಳೆಯ ಸಿಂಚನದೊಂದಿಗೆ ಸಂಸ್ಕೃತಿ ಅನಾವರಣ..**



**ಮಳೆಯ ಸಿಂಚನದೊಂದಿಗೆ ಸಂಸ್ಕೃತಿ ಅನಾವರಣ...**













# ಪುಸ್ತಕಗಳ ಬಿಡುಗಡೆ

ದಶ ಕೃತಿಗಳ ಬಿಡುಗಡೆ ಮಾಡಿದ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತರಾದ ಶ್ರೀಮತಿ ವೈದೇಹಿಯವರು ವ್ಯವಹಾರಿಕ ಮನೋಭಾವದ ಕಾರ್ಪೋರೇಟ್ ಭಾಷೆಯಿಂದ ಆತ್ಮದ ದನಿ ಕೇಳಲು ಸಾಧ್ಯವಿಲ್ಲ. ಅದು ಮಾತೃಭಾಷೆಯಿಂದ ಮಾತ್ರ ಸಾಧ್ಯ ಎಂದು ಹೇಳಿದರು.

ಕೊಡಗು ಗೌಡ ಸಮಾಜ ಸಭಾಂಗಣದಲ್ಲಿ ಸೋಮವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯಿಂದ ಹೊರತರಲಾಗಿರುವ ದಶ ಕೃತಿಗಳನ್ನು ಬಿಡುಗಡೆಮಾಡಿ ಮಾತನಾಡಿದರು. ಮಾತೃ ಭಾಷೆ ಬಿಟ್ಟ ತಕ್ಷಣ ತಮ್ಮ ಅಸ್ತಿತ್ವ ಕಳೆದುಕೊಳ್ಳುತ್ತೇವೆ. ನಮ್ಮ ನಮ್ಮ ನಡುವೆ ಇಂಗ್ಲಿಷ್ ಭಾಷೆಯ ಅಗತ್ಯತೆ ಇಲ್ಲ. ಇಂಗ್ಲಿಷ್‌ಗೆ ಬಹುತೇಕ ಜನ ಮಾರಾಟ ವಾಗಿದ್ದಾರೆಂದು ಅತೃಪ್ತಿ ವ್ಯಕ್ತ ಪಡಿಸಿದರು.

ಅರೆಭಾಷೆ ಅಕಾಡೆಮಿ ಏಕಕಾಲದಲ್ಲಿ ಹತ್ತು ಕೃತಿಗಳನ್ನು ಹೊರತರುತ್ತಿರುವುದು ದಾಖಲೆ ಮತ್ತು ಶ್ಲಾಘನೀಯ ಕಾರ್ಯ. ಇದು ಇತರೆ ಅಕಾಡೆಮಿಗಳಿಗೆ ಮಾದರಿ ಎಂದರು. ಕೃತಿಗಳಲ್ಲಿ ಗದ್ದೆ, ತೋಟ, ಪ್ರಕೃತಿಗೆ, ಹೆಚ್ಚಿನ ಒತ್ತು ನೀಡಲಾಗಿದೆ. ಇವುಗಳು ಇಲ್ಲದ ಮೇಲೆ ಭಾಷೆ ಉಳಿಸುವುದು ಹೇಗೆ ಎಂದು ವಿಷಾದ ವ್ಯಕ್ತಪಡಿಸಿದರು. ಕೃತಿಗಳಲ್ಲಿರುವ ಅಂಶಗಳನ್ನು ಡಾಕ್ಯುಮೆಂಟರಿ ಮಾಡಬೇಕು. ಆಗ ತಮ್ಮ ಉದ್ದೇಶ ಪೂರ್ಣ ಪ್ರಮಾಣದಲ್ಲಿ ಈಡೇರುತ್ತದೆ ಎಂದು ಸಲಹೆ ನೀಡಿದರು.





## ದಶ ಕೃತಿ ಲೋಕಾರ್ಪಣೆ

ಎಂ.ಜಿ.ಕಾವೇರಮ್ಮ ಬರೆದ "ಅಜ್ಜಪ್ಪನ ಕಥಾ ಭಂಡಾರದಿಂದ ಹೆರ್ಕಿದ ಕತೆಗ" ಮತ್ತು "ಸರ್ಮಾಲೆ", ಬೈತಡ್ಕ ಜಾನಕಿ ಬೆಳ್ಯಪ್ಪನವರು ಬರೆದ "ಬೇರ್‌ಲಿ ಬಿಗ್‌ರ್", ಪೂಜಾರೀರ ಜಿ. ಮಾದಪ್ಪನವರು ಬರೆದ "ಕುಂಕುಮ" ಶ್ರೀ ಕಟ್ರತನ ಬೆಳ್ಳಿಯಪ್ಪನವರು ಬರೆದ "ಬೆಳ್ಳಿಮುತ್ತ್", ಟಿ.ಜಿ. ಮುಡೂರು ರವರು ಬರೆದ "ಬೊಳ್ಳಾಕನ ಮುಗ್ತ್" ಕಟ್ರತನ ಲಲಿತಾ ಅಯ್ಯಣ್ಣನವರು ಬರೆದಿರುವ "ಮತ್ತೆ ಸಿಕ್ಕಿತ್ ಕುಂಕುಮ" ಲೋಕೇಶ್ ಕುಂಬಡ್ಕ ನವರು ಬರೆದಿರುವ "ಬೊಳು" ಹಾಗೂ ಬಾರಿಯಂಡ ಜೋಯಪ್ಪನವರು ಬರೆದಿರುವ "ತೋರಣ" ಕೃತಿಯನ್ನು ಸಾಹಿತಿ ವೈದೇಹಿ ಅನಾವರಣಗೊಳಿಸಿದರು. ಶ್ರೀಮತಿ ಉದಯಕುಮಾರಿ ಚೆಂಬು ಇವರ ಕಥಾಸಂಕಲನ "ಹೊಸ ಬೊದ್ಕ್", ಶ್ರೀಮತಿ ಬೈತಡ್ಕ ಜಾನಕಿ ಬೆಳ್ಯಪ್ಪನವರು ಬರೆದ "ಬೆಳ್ಳಿ ಚುಕ್ಕೆಗ" ಶ್ರೀ ಹೊದ್ದೆಟ್ಟಿ ಭವಾನಿಶಂಕರ ಇವರು ಬರೆದ ಕವನ ಸಂಕಲನ "ಅನುಭವಧಾರೆ" ಇವುಗಳನ್ನು ಅಕಾಡೆಮಿ ಯಿಂದ ಪ್ರಕಟಿಸಿ ಬಿಡುಗಡೆ ಮಾಡಿ ಲೇಖಕರನ್ನು ಗೌರವಿಸಲಾಯಿತು.




ಅಕಾಡೆಮಿ ನಡೆಸಿದ ಅರೆಬಾಸೆ ಸಂಸ್ಕೃತಿಯಲ್ಲಿ ಸಾಂಪ್ರದಾಯಿಕ ಅಡಿಗೆ ಬಗ್ಗೆ ಪುಸ್ತಕ "ರುಚಿ" ಹಾಗೂ ಅರೆಬಾಸೆ ಸಂಸ್ಕೃತಿ ಪರಿಪಾಲಕರ ಸಮಾಗಮ ಕಾರ್ಯಕ್ರಮದ ವಿಚಾರಗೋಷ್ಠಿಯಲ್ಲಿ ಮಾಡಿರುವ ಉಪನ್ಯಾಸಗಳ ಬಗ್ಗೆ ಪುಸ್ತಕ "ಸಂಸ್ಕೃತಿ ಸಂಪತ್ತು" ಅಕಾಡೆಮಿ ಮೂರು ವರ್ಷದಲ್ಲಿ ಕೈಗೊಂಡಿರುವ ಕಾರ್ಯಕ್ರಮಗಳ ಬಗ್ಗೆ ರಚಿಸಲಾಗಿರುವ ಪುಸ್ತಕ "ಸಫಲ" ಪ್ರಕಟಿಸಲಾಗಿದೆ. ಭಾಷೆಯನ್ನು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಮಡಿಕೇರಿ ಆಕಾಶವಾಣಿಲಿ ಪ್ರಸಾರ ಆಗುವ ಅರೆಭಾಷೆ ವಾರ್ತೆ "ಸುದ್ದಿ ಜೊಂಪೆಗೆ" ಅಕಾಡೆಮಿ ಪ್ರಾಯೋಜಕತ್ವ. ಕೆಲವು ಸಮಾಜ ಮತ್ತು ಕುಟುಂಬಗಳ ಜೊತೆ ಸಹ ಪ್ರಾಯೋಜಕತ್ವ ನೀಡಿಕೊಂಡು ಬರುತ್ತಿದೆ.



ಆತ್ಮದ ದನಿ ಮೊಳಗಿಸುವ ಮಾತೃಭಾಷೆ


ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತೆ ವೈದೇಹಿ ಹೇಳಿಕೆ | ದಶ ಕೃತಿ ಲೋಕಾರ್ಪಣೆ





















## ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಪ್ರಕಟಿತ ಪುಸ್ತಕಗಳು

| | | |
|---|---|---|
| 1. ಸಬ್ಬಾಲೆ | ಕವನ ಸಂಕಲನ | ಶ್ರೀಮತಿ ಎಂ.ಜಿ.ಕಾವೇರಮ್ಮ |
| 2. ಅಜ್ಜಪ್ಪನ ಕಥಾಭಂಡಾರಂದ ಆಯ್ದು ಕತೆಗ | ಕಥಾಸಂಕಲನ | ಶ್ರೀಮತಿ ಎಂ.ಜಿ.ಕಾವೇರಮ್ಮ |
| 3. ಬೆಳ್ಳಿಮುಷ್ಠಿ | ಜೀವನ ಚರಿತ್ರೆ | ಶ್ರೀ ಕಟ್ರತನ ಕೆ. ಬೆಳ್ಯಪ್ಪ |
| 4. ತೋರಣ | ಕವನ ಸಂಕಲನ | ಶ್ರೀ ಬಾರಿಯಂಡ ಜೋಯಪ್ಪ |
| 5. ಬೇರ್‌ಲಿ ಬಿಗರ್ | ಕೃತಿ | ಶ್ರೀಮತಿ ಬೈತಡ್ಕ ಜಾನಕಿ ಬೆಳ್ಯಪ್ಪ |
| 6. ಕುಂಕುಮ | ವಿಚಾರ ಸಾಹಿತ್ಯ | ಪೂಜಾರೀರ ಜಿ. ಮಾದಪ್ಪ |
| 7. ಬೊಳ್ಪು | ಕಥಾಸಂಕಲನ | ಕು.ಲೋಕೇಶ್ ಕುಂಚಡ್ಕ |
| 8. ಬೊಳ್ಪಾಕನ ಮುಗ್ತ್ | ನಾಟಕ ರೂಪಕ | ಶ್ರೀ ಟಿ.ಜಿ.ಮುಡೂರು |
| 9. ಮತ್ತೆ ಸಿಕ್ಕಿತ್ ಕುಂಕುಮ | ಕಾದಂಬರಿ | ಶ್ರೀಮತಿ ಕಟ್ರತನ ಲಲಿತಾ |
| 10. ಬೇಟೆನ ಬಿರ್ಸ | ಕಥಾಸಂಕಲನ | ಶ್ರೀಮತಿ ವೇದಾವತಿ |
| 11. ನೆಂಪುಗಳ ರಂಗೋಲಿ | ಜೀವನ ಚರಿತ್ರೆ | ಶ್ರೀಮತಿ ಎಂ.ಜಿ.ಕಾವೇರಮ್ಮ |
| 12. ಹೊಸ ಬೊಲ್ಪು | ಕಥಾಸಂಕಲನ | ಶ್ರೀಮತಿ ಉದಯಕುಮಾರಿ |
| 13. ಅನುಭವಧಾರೆ | ಕವನ ಸಂಕಲನ | ಶ್ರೀ ಹೊದ್ದೆಟ್ಟಿ ಭವಾನಿಶಂಕರ |
| 14. ಬೆಳ್ಳಿಚುಕ್ಕೆಗ | ನಾಟಕ ಸಂಕಲನ | ಶ್ರೀಮತಿ ಬೈತಡ್ಕ ಜಾನಕಿ |
| 15. ರುಚಿ | ಸಾಂಪ್ರದಾಯಿಕ | ಅಕಾಡೆಮಿ ಮುದ್ರಣ |
| 16. ಸಂಸ್ಕೃತಿ ಸಂಪತ್ತು | ಅಕಾಡೆಮಿ ಮುದ್ರಣ | |

## ಸೋಬಾನೆ ಸೊಬಗು ಸಿ.ಡಿ. ಬಿಡುಗಡೆ






ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಹಿರಿಯ ಕಲಾವಿದರು /ಸಾಹಿತಿಗಳ ಕುರಿತು ಶ್ರೀ ನಾರಾಯಣ ಪರವ, ಶ್ರೀ ರಾಮು.ಕೆ.ನಿಡುಗಣೆ ಮತ್ತು ಮೇದರ ಅಯ್ಯಪ್ಪ ಈ ಮೂವರ ಸಾಕ್ಷ್ಯಚಿತ್ರ ನಿರ್ಮಾಣ ಮಾಡಿ ಸಿ.ಡಿ. ಮಾಡಿ ಅರೆಭಾಷೆ ಐಸಿರಿ ಕಾರ್ಯಕ್ರಮದಲ್ಲಿ ಬಿಡುಗಡೆ ಮಾಡಲಾಯಿತು.

ಶ್ರೀ ಸಿರಿಗಂಧ ಶ್ರೀನಿವಾಸ, ಚಲನ ವಿಶ್ಯುವಲ್ಸ್, ಬೆಂಗಳೂರು ಇವರಿಂದ ಅರೆಭಾಷಿಕರ ಮದುವೆ ಆಚರಣೆಯಲ್ಲಿ ಪ್ರಮುಖವಾದ ಸೋಬಾನೆ ಪದಗಳ "ಸೋಬಾನೆ ಸೊಬಗು ಸಾಕ್ಷ್ಯಚಿತ್ರ" ನಿರ್ಮಾಣ ಮಾಡಿದ ಸಿ.ಡಿ.ಯನ್ನು ಸಂಗಮ-ಸಂಭ್ರಮ 2016 ಕಾರ್ಯಕ್ರಮದಲ್ಲಿ ಬಿಡುಗಡೆ ಮಾಡಲಾಯಿತು.







# ಸುಬ್ರಹ್ಮಣ್ಯದಲ್ಲಿ ಅರೆಭಾಷೆ ಸಾಹಿತ್ಯ ಯುವ ಸಮಾವೇಶ

**ಅರೆಭಾಷೆಯು ಪರಿಪೂರ್ಣ ವಾದ, ಗಟ್ಟಿಯಾದ, ಸವೆದ ಹಾಗೂ ಅರೆದ ಭಾಷೆ. ಈ ಭಾಷೆಯ ಮೂಲಕ ವ್ಯವಹರಿಸಲು ಸರಳ ಹಾಗೂ ಸುಲಭ**






ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯು ಕುಕ್ಕೆಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಕುಕ್ಕೆಶ್ರೀ ಸುಬ್ರಹ್ಮಣ್ಯ ಮಹಾ ವಿದ್ಯಾಲಯ, ಶ್ರೀ ಸುಬ್ರಹ್ಮಣ್ಯೇಶ್ವರ ಪದವಿಪೂರ್ವ ಕಾಲೇಜು, ಗೌಡ ಯುವ ಸೇವಾ ಸಂಘ ಸುಳ್ಯ ಮತ್ತು ಸುಬ್ರಹ್ಮಣ್ಯದ ಗೌಡ ಸಮಿತಿಗಳ ಹಾಗೂ ಇತರ ಸಂಘ-ಸಂಸ್ಥೆಗಳ ಸಹಕಾರದೊಂದಿಗೆ ದಿನಾಂಕ 10.09.2016 ಮತ್ತು 11.09.2016 ರಂದು ಕುಕ್ಕೇಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ವಲ್ಲೀಶ ಭವನ ಇಲ್ಲಿ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ಉದ್ಘಾಟಕರಾಗಿ ಭಾಗವಹಿಸಿದ್ದ ಹಿರಿಯ ಸಾಹಿತಿ ಗಳಾದ ಶ್ರೀ ಟಿ.ಜಿ. ಮುಡೂರುರವರು ಮಾತನಾಡಿ ಅರೆಭಾಷೆ ಸಂಸ್ಕೃತಿ ಹಾಗೂ ಸಾಹಿತ್ಯ ಈ ಮಣ್ಣಿನ ಸೊಗಡಿನಲ್ಲಿ ಅಡಗಿದೆ. ಈ ಮೂಲಕ ಈ ಭಾಷೆಯು ಸಮಾಜಕ್ಕೆ ವಿಶಿಷ್ಟವಾದ ಸಾಂಸ್ಕೃತಿಕ ಕೊಡುಗೆ ನೀಡಿದೆ. ಅರೆಭಾಷೆಯು ಪರಿಪೂರ್ಣ ವಾದ, ಗಟ್ಟಿಯಾದ, ಸವೆದ ಹಾಗೂ ಅರೆದ ಭಾಷೆ. ಈ ಭಾಷೆಯ ಮೂಲಕ ವ್ಯವಹರಿಸಲು ಸರಳ ಹಾಗೂ ಸುಲಭ ಎಂದು ಹೇಳಿದರು.

ಜಾನಪದ ವಿದ್ವಾಂಸರಾದ ಶ್ರೀ ಆನಂದ ಗೌಡ ಪೆರ್ಲ ಅವರ ಅಧ್ಯಕ್ಷತೆಯಲ್ಲಿ ನಡೆದ ಸಾಹಿತ್ಯ ಗೋಷ್ಠಿಯಲ್ಲಿ ಎಸ್‌ಎಸ್ ಪಿಯು ಕಾಲೇಜಿನ ವಿದ್ಯಾರ್ಥಿಗಳಾದ ಗಿರೀಶ್ ಕೆ. ಹಾಗೂ ಗ್ರೀಷ್ಮಾ ಪ್ರಬಂಧ ಮಂಡನೆ ಮಾಡಿದರು. ತದನಂತರ ನಡೆದ ಕವಿಗೋಷ್ಠಿಯ ಅಧ್ಯಕ್ಷತೆಯನ್ನು ಅಕಾಡೆಮಿ ಸದಸ್ಯೆ ಡಾ.ಕೋರನ ಸರಸ್ವತಿ ವಹಿಸಿದ್ದರು. ಕೆಎಸ್‌ಎಸ್ ಕಾಲೇಜಿನ ಶೋಭಾ ಹಾಗೂ ಎಸ್‌ಎಸ್‌ಪಿಯು ಕಾಲೇಜಿನ ಸೌಮ್ಯ, ಭೂಮಿಕಾ ಕವನ ವಾಚನ ಮಾಡಿದರು. ಬಳಿಕ ಶ್ರೀ ಸುಬ್ರಹ್ಮಣ್ಯೇಶ್ವರ ಪದವಿ ಕಾಲೇಜು ವಿದ್ಯಾರ್ಥಿಗಳು ಮತ್ತು ಚೇತನ್ ಪುರಿಯಾ ಬಳಗದಿಂದ ಅರೆಭಾಷೆ ಜನಾಂಗದ ಹೆಜ್ಜೆಗಳು ನೃತ್ಯರೂಪಕ ಪ್ರದರ್ಶನ ನಡೆಯಿತು.

ಸೆ. 11 ರಂದು ನಡೆದ ವಿಚಾರಗೋಷ್ಠಿಯಲ್ಲಿ ಶ್ರೀ ಪಟ್ಟಡ ಶಿವಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಶ್ರೀಮತಿ ಚಂದ್ರಮತಿ ಮತ್ತು ಶಶಿಧರ ಪಳಂಗಾಯ ಇವರಿಂದ ಮಹಿಳೆ ಮತ್ತು ಸಮಾಜ, ಅರೆಭಾಷೆ ಸಾಂಸ್ಕೃತಿಕ ರಂಗ ಯುವ ಸಮುದಾಯ ಇದರ ಬಗ್ಗೆ ಉಪನ್ಯಾಸ ಮಾಡಿದರು. ಶ್ರೀ ಕುಕ್ಕೆ ಸುಬ್ರಹ್ಮಣ್ಯ ಮಹಾ ವಿದ್ಯಾಲಯ ವಿದ್ಯಾರ್ಥಿ ವೃಂದ ಇವರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಸಂಜೆ ನಡೆದ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಕೊಲ್ಲದ ಗಿರೀಶ್ ವಹಿಸಿದರು. ಮುಖ್ಯ ಅಥಿತಿಗಳಾಗಿ ಶ್ರೀ ನಿಂಗಯ್ಯ, ಶ್ರೀ ಎಲ್.ಎನ್. ಕುಳ್ಳಯ್ಯ, ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಶ್ರೀ ಮನಮೋಹನ್, ಪ್ರಾಂಶುಪಾಲರು, ಕುಕ್ಕೆ ಸುಬ್ರಹ್ಮಣ್ಯ ಮಹಾವಿದ್ಯಾಲಯ, ಶ್ರೀ ಜಿ. ವಿಠಲ ರಾವ್, ಪ್ರಾಚಾರ್ಯರು, ಶ್ರೀ ಕುಕ್ಕೆ ಸುಬ್ರಹ್ಮಣ್ಯೇಶ್ವರ ಪದವಿಪೂರ್ವ ಕಾಲೇಜು ಕಾರ್ಯಕ್ರಮ ಸಂಚಾಲಕರಾದ ಬಿ.ಕೆ. ವಸಂತ ಮತ್ತು ಟಿ.ಕೆ. ಕಾರ್ಯಪ್ಪ, ಅಕಾಡೆಮಿ ಸದಸ್ಯರುಗಳು ಉಪಸ್ಥಿತರಿದ್ದರು.









# ಅರೆಭಾಷೆ ಸಂಸ್ಕೃತಿಯಲ್ಲಿ ಸಾಂಪ್ರದಾಯಿಕ ಅಡಿಗೆ ತರಬೇತಿ ಮತ್ತು ಪ್ರಾತ್ಯಕ್ಷತೆ ಶಿಬಿರ

❖ ಒಂದು ವಾರದ ಯಶಸ್ವಿ ಕಾರ್ಯಕ್ರಮ
❖ ಮರಗೋಡು ಗೌಡಸಮಾಜ ಸಹಯೋಗ
❖ ತರಬೇತಿದಾರರಾಗಿ ಭಾಗವಹಿಸಿದವರು :
ಗೌಡಸಮಾಜ ಚೇರಂಬಾಣೆ
ಗೌಡಸಮಾಜ ಕುಶಾಲನಗರ
ಮಹಿಳಾಸಂಘ ಗಾಳೀಬೀಡು
ಶ್ರೀ ಗೋಪಾಲ ಕೃಷ್ಣ ಯುವತಿ ಮಂಡಳಿ, ಅವಂದೂರು
❖ ಸ್ಥಳೀಯ ಹೆಣ್ಣುಮಕ್ಕಳ ಹುಮ್ಮಸಿನ ಪಾಲ್ಗೊಳ್ಳುವಿಕೆ
❖ ಅದ್ದೂರಿಯಾಗಿ ನಡೆದ ಸಮಾರೋಪ







❖ ಸಾಂಪ್ರದಾಯಿಕ ಮೆರವಣಿಗೆ
❖ ಸುಮಾರು 500ಕ್ಕೂ ಹೆಚ್ಚು ತಿಂಡಿ ತಿನಿಸುಗಳ ಅಚ್ಚುಕಟ್ಟಿನ ಪ್ರದರ್ಶನ
❖ ಉಣಬಡಿಸಿದ ಅಪರೂಪದ ಖಾದ್ಯ





ದಿನಾಂಕ 13.09.2016 ರಿಂದ 17.09.2016 ರವರೆಗೆ ಮರಗೋಡು ಗೌಡ ಸಮಾಜದಲ್ಲಿ ಅರೆಭಾಷೆ ಸಂಸ್ಕೃತಿಯಲ್ಲಿ ಸಾಂಪ್ರದಾಯಿಕ ಅಡಿಗೆ ತರಬೇತಿ ಶಿಬಿರ ಏರ್ಪಡಿಸಿ ದಿನಾಂಕ 13.09.2016ರಂದು ಮಡಿಕೇರಿ ತಾಲ್ಲೂಕು ಪಂಚಾಯಿತಿ ಅಧ್ಯಕ್ಷರಾದ ತೆಕ್ಕಡೆ ಶೋಭಮೋಹನ್ ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಅಕಾಡೆಮಿ ಅಧ್ಯಕ್ಷ ಗಿರೀಶ್‌ರವರು ವಹಿಸಿದರು. ಮರಗೋಡು ಸಮಾಜದ ಅಧ್ಯಕ್ಷರಾದ ದೇವಜನ ನಾಣಯ್ಯ ಉಪಸ್ಥಿತ ರಿದ್ದರು. ತರಬೇತಿ ದಾರರಾಗಿ ಗೌಡಸಮಾಜ, ಚೇರಂಬಾಣೆ, ಮಹಿಳಾ ಸಂಘ ಗಾಳಿಬೀಡು, ಗೌಡಸಮಾಜ ಕುಶಾಲನಗರ, ಶ್ರೀ ಗೋಪಾಲ ಕೃಷ್ಣ ಯುವತಿ ಮಂಡಳಿ ಆವಂದೂರು, ಇದರ ಸದಸ್ಯರು ದಿನಕ್ಕೆ ಒಂದು ತಂಡದಂತೆ ಆಗಮಿಸಿ ಅಡುಗೆ ತರಬೇತಿ ಹಾಗೂ ಪ್ರಾತ್ಯಕ್ಷತೆಯಲ್ಲಿ ಭಾಗವಹಿಸಿದರು. ಇದರ ಆಥಿತ್ಯವನ್ನು ನಾಡಿನ ದಿನಕ್ಕೊಂದು ಗ್ರಾಮದಂತೆ ಹೊಸ್ಕೇರಿ, ಮರಗೋಡು, ಕಟ್ಟೆಮಾಡು, ಐಕೊಳ ಗ್ರಾಮಗಳ ಮಹಿಳೆಯರು ಜವಾಬ್ದಾರಿಯನ್ನು ನಿರ್ವಹಿಸಿದರು.



















ದಿನಾಂಕ 18.09.2016 ರಂದು ಸಮಾರೋಪದ ದಿನ ಬೆಳಿಗ್ಗೆ ಮರಗೋಡು ಗಣಪತಿ ದೇವಸ್ಥಾನದಿಂದ ಗೌಡ ಸಮಾಜದವರೆಗೆ ಅರೆಭಾಷೆ ಸಂಸ್ಕೃತಿಯನ್ನು ಬಿಂಬಿಸುವ ಮೆರವಣಿಗೆ ಯನ್ನು ಹಮ್ಮಿ-ಕೊಳ್ಳಲಾಗಿತ್ತು. ಮೆರವಣಿಗೆ ಉದ್ಘಾಟಕರಾಗಿ ಶ್ರೀ ದೇವಜನ ನಾಣಯ್ಯ, ಅಧ್ಯಕ್ಷರು, ಗೌಡ ಸಮಾಜ, ಮರಗೋಡು, ಹಾಗೂ ಮುಖ್ಯ ಅತಿಥಿಗಳಾಗಿ ಶ್ರೀ ಮಳ್ಳಂದಿರ ಲುಸ್ವಾಪತಿ, ಮರಗೋಡು ಇವರನ್ನು ಆಹ್ವಾನಿಸಲಾಗಿತ್ತು. ಬೆಳಿಗ್ಗೆ ಸಾಂಪ್ರದಾಯಿಕ ಅಡಿಗೆ ಪ್ರದರ್ಶನವನ್ನು ಉದ್ಘಾಟನೆ ಮಾಡಲಾಯಿತು. ಶ್ರೀಮತಿ ಅಯ್ಯಂಡ್ರ ಪಾರ್ವತಿ ಪೂಣಚ್ಚ ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಸಮಾರೋಪ ಸಮಾರಂಭದ ಉದ್ಘಾಟನೆಯುನ್ನ ಶ್ರೀ ಕೆ.ಜಿ.ಬೋಪಯ್ಯ, ಸನ್ಮಾನ್ಯ ಶಾಸಕರು ವಿರಾಜಪೇಟೆ ವಿಧಾನಸಭಾ ಕ್ಷೇತ್ರ ಇವರು ಉದ್ಘಾಟಿಸಿದರು. ಶ್ರೀ ಕೊಲ್ಯದ ಗಿರೀಶ್ ಅಕಾಡೆಮಿ ಅಧ್ಯಕ್ಷರು ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ವೀಣಾ ಅಚ್ಚಯ್ಯ, ವಿಧಾನಪರಿಷತ್ ಸದಸ್ಯರು, ಶ್ರೀ ಮಂಡೇಪಂಡ ಸುನಿಲ್ ಸುಬ್ರಮಣಿ, ವಿಧಾನಪರಿಷತ್ ಸದಸ್ಯರು, ಶ್ರೀಮತಿ ದಿವ್ಯಪ್ರಭಾ ಚಿಲ್ತಡ್ಕ,



ಅಧ್ಯಕ್ಷರು ಕರ್ನಾಟಕ ಸಮಾಜ ಕಲ್ಯಾಣ ಮಂಡಳಿ, ಬೆಂಗಳೂರು, ಕು. ಮಮತಾ ಪಿ.ಎನ್ ಅಧ್ಯಕ್ಷರು ಮರಗೋಡು ಗ್ರಾಮ ಪಂಚಾಯತ್, ಶ್ರೀಮತಿ ಕಲಾವತಿ ಪೂವಪ್ಪ, ಸದಸ್ಯರು, ಕೊಡಗು ಜಿಲ್ಲಾ ಪಂಚಾಯತ್, ಶ್ರೀ ಬಿ.ವೈ ಅಪ್ಪುರವೀಂದ್ರ, ಸದಸ್ಯರು ತಾಲ್ಲೂಕು ಪಂಚಾಯತ್, ಮಡಿಕೇರಿ, ಡಾ. ಕರ್ಣಯ್ಯನ ಎಸ್.ಅಪ್ಪಯ್ಯ ಕೆ.ಎ.ಎಸ್, ನಿವೃತ್ತ ಹೆಚ್ಚುವರಿ ಪ್ರಾದೇಶಿಕ ಆಯುಕ್ತರು, ಬೆಂಗಳೂರು ಹಾಗೂ ಶ್ರೀ ಕಾಂಗೀರ ನಂಜುಂಡ, ಉಪಾಧ್ಯಕ್ಷರು, ಭಾರತೀಯ ಎಜುಕೇಷನಲ್ ಸೊಸೈಟಿ, ಮರಗೋಡು ಇವರು ಉಪಸ್ಥಿತರಿದ್ದರು. ಶ್ರೀ ಪಟ್ಟಡ ಶಿವಕುಮಾರ್, ಉಪನ್ಯಾಸಕರು, ಸ.ಪ.ಪೂ ಕಾಲೇಜು, ಕಾರ್‍ಯ ಇವರು ಅರೆಭಾಷಿಕರ ಅಡಿಗೆ ಸಂಸ್ಕೃತಿಯ ವಿಶ್ಲೇಷಣೆ ಮಾಡಿದರು. ಕಾರ್ಯಕ್ರಮ ಸಂಚಾಲಕರಾದ ಮಂದ್ರೀರ ಮೋಹನ್‌ದಾಸ್ ಹಾಗೂ ಅಕಾಡೆಮಿ ಸದಸ್ಯರುಗಳು ಉಪಸ್ಥಿತರಿದ್ದರು. ಆರು ದಿನಗಳ ಕಾಲ ನಡೆದ ತರಬೇತಿ ಮತ್ತು ಪ್ರಾತ್ಯಕ್ಷಿತೆಯುನ್ನು ಕಟ್ಟೆಮನೆ ಸೋನಾಜಿತ್ ರವರು ನಿರ್ವಹಿಸಿದರು.

ಅರೆಭಾಷೆ ಸಂಸ್ಕೃತಿಯನ್ನು ಬಿಂಬಿಸುವಂತ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಅತ್ಯಧಿಕ ಸಂಖ್ಯೆಯಲ್ಲಿ ಸ್ಥಳೀಯರು, ಭಾಷಾಭಿಮಾನಿ ಗಳು, ಕಲಾವಿದರು ಭಾಗವಹಿಸಿದ್ದರು.













# ಅರೆಭಾಷೆ ಸಂಸ್ಕೃತಿ ಸಿರಿ ಮತ್ತು ಸಾಹಿತ್ಯ ಸುಗ್ಗಿಯ ಕೂಡುಕೂಟ

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ವತಿಯಿಂದ ಅರೆಭಾಷೆ ಸಂಸ್ಕೃತಿ ಸಿರಿ ಮತ್ತು ಸಾಹಿತ್ಯ ಸುಗ್ಗಿಯ ಕೂಡುಕೂಟ ಕಾರ್ಯಕ್ರಮ ಅಕ್ಟೋಬರ್ 16 ರಂದು ಮಡಿಕೇರಿ ತಾಲೂಕಿನ ಚೆಂಬು ಶಾಲಾ ವಠಾರದಲ್ಲಿ ಸಂಭ್ರಮದಿಂದ ನಡೆಯಿತು. ಆಗಮಿಸಿದ ಗಣ್ಯರು ಫಲ ನೀಡುವ ಗಿಡವೊಂದನ್ನು ನೆಟ್ಟು ಪರಿಸರ ಸ್ನೇಹಿ ಆಚರಣೆಯ ಮೂಲಕ ಕಾರ್ಯಕ್ರಮಕ್ಕೆ ಅಧಿಕೃತ ಚಾಲನೆ ನೀಡಿದರು. ಮಾಧವ ಚೆಂಬು ಪ್ರಾರ್ಥಿಸಿದರು.

ದೀಪ ಬೆಳಗಿಸಿ, ತೆನೆ ಅರಳಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದ ಶಾಸಕರಾದ ಕೆ.ಜಿ.ಬೋಪಯ್ಯನವರು ಮಾತನಾಡಿ ಅರೆಭಾಷೆ ಅಕಾಡೆಮಿ ಎಲ್ಲಾ ಊರುಗಳಲ್ಲಿಯು ವಿಶಿಷ್ಟ ಕಾರ್ಯಕ್ರಮಗಳನ್ನು ಆಯೋಜಿಸಿ ತನ್ನದೆ ಛಾಪು ಮೂಡಿಸಿಕೊಂಡಿದೆ. ರಾಜ್ಯಮಟ್ಟದಲ್ಲಿ ಅರೆಭಾಷೆ ಸಾಹಿತ್ಯವನ್ನು ಮತ್ತು ಸಂಸ್ಕೃತಿಯುನ್ನು ಗುರುತಿಸುವಂತೆ ಮಾಡಿರುವುದು ಶ್ಲಾಘನೀಯ ಎಂದು ನುಡಿದರು.

ಅಧ್ಯಕ್ಷತೆ ವಹಿಸಿದ ಅರೆಭಾಷೆ ಅಕಾಡೆಮಿ ಅಧ್ಯಕ್ಷರಾದ ಶ್ರೀ ಕೊಲ್ಯದ ಗಿರೀಶ್‌ನವರು ಮಾತನಾಡಿ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಬೆಳೆಸುವಲ್ಲಿ ಹಳ್ಳಿಯವರ ಪಾತ್ರ ಗಮನಾರ್ಹ ವಾಗಿರುತ್ತದೆ. ದೇಶೀ ಸೊಗಡು ಅಡಗಿರುವುದು ಹಳ್ಳಿಗಳಲ್ಲಿ ಎಂದರು. ಕಾರ್ಯಕ್ರಮದಲ್ಲಿ ಆಯೋಜಿಸಿಕೊಂಡ ವಿಶಿಷ್ಟ ಕಾರ್ಯಕ್ರಮಗಳ ಕುರಿತು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಚೆಂಬು ಗ್ರಾಮ ಪಂಚಾಯತ್ ಅಧ್ಯಕ್ಷರಾದ ಶ್ರೀ ಮಾಧವ ಪೊಯ್ಯಮಜುಲು, ತಾಲೂಕು ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ತೆಕ್ಕಡೆ ಶೋಭ ಮೋಹನ್, ಸಾಹಿತಿಗಳಾದ ಶ್ರೀ ಕುಂಯಿತೋಡು ದಾಮೋದರ , ಶ್ರೀ ವಾಸುದೇವ ಕಾಚೇಲು, ಶ್ರೀ ರಾಧಾಕೃಷ್ಣ ಹೊಸೂರು, ಶ್ರೀ ಬಾಲಚಂದ್ರ ಕಳಗಿ







ಉಪಸ್ಥಿತರಿದ್ದರು. ಅಕಾಡೆಮಿಯ ಸದಸ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಅರೆಭಾಷೆ ಅಕಾಡೆಮಿ ಸದಸ್ಯೆ ಸಂಗೀತ ರವಿರಾಜ್ ಸ್ವಾಗತಿಸಿ, ಹರೀಶ್ ಮೇಲ್ಚೆಂಬು ವಂದಿಸಿದರು. ಸ್ಮಿತಾ ಅಮೃತರಾಜ್, ರಮೇಶ್ ನಂಬಿಯಾರ್ ಕಾರ್ಯಕ್ರಮ ನಿರೂಪಿಸಿದರು.


ನಂತರ ನಡೆದ ಮನರಂಜನೀಯ ಗ್ರಾಮೀಣ ಕ್ರೀಡೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಅರೆಭಾಷೆ ಬಿಂಬಿಸುವ ನೃತ್ಯ, ಅರೆಭಾಷಿಕ ಸಾಂಸ್ಕೃತಿಕ ಛದ್ಮವೇಷ, ಸೋಬಾನೆ, ರಸಪ್ರಶ್ನೆ, ಹಸೆ ಬರೆಯುವುದು, ಪ್ರಬಂಧ ಸ್ಪರ್ಧೆ, ಕವನ ಸ್ಪರ್ಧೆ ಮತ್ತು ಹಗ್ಗಜಗ್ಗಾಟ ನಡೆಯಿತು.

ಮಧ್ಯಾಹ್ನ ಪ್ರಾರಂಭಗೊಂಡ ಅರೆಭಾಷಿಕ ಚಿಂತನ ಮಂಥನ ವಿಚಾರಗೋಷ್ಠಿಯ ಅಧ್ಯಕ್ಷತೆಯನ್ನು ಶ್ರೀ ಗೋಪಾಲ ಪೆರಾಜೆ ವಹಿಸಿದ್ದರು. **"ಅರೆಭಾಷೆ ಸಂಸ್ಕೃತಿ ಬೆಳವಣಿಗೆಯಲ್ಲಿ ಮಹಿಳೆ"** ಎಂಬ ವಿಷಯದ ಬಗ್ಗೆ ಶ್ರೀಮತಿ ಸ್ವರ್ಣಕಲ ಕಿಶೋರ್ ತಳೂರು ಇವರು ಉಪನ್ಯಾಸ ನೀಡಿದರು. **"ಅರೆಭಾಷಿಕರ ಸಂಪ್ರದಾಯ"** ಕುರಿತು ಶ್ರೀ ಬಾರಿಯಂಡ ಜೋಯಪ್ಪನವರು ಉಪನ್ಯಾಸ ನೀಡಿದರು. **"ಸಂಸ್ಕೃತಿ ಬೆಳವಣಿಗೆಯಲ್ಲಿ ಅರೆಭಾಷೆನ ಪಾತ್ರ"** ವಿಷಯದ ಕುರಿತು ಶ್ರೀ ಸೂದನ ಈರಪ್ಪನವರು ಉಪನ್ಯಾಸ ನೀಡಿದರು.

ಶ್ರೀ ಕಿಶೋರ್ ಕಿರ್ಲಾಯ ಅಧ್ಯಕ್ಷತೆಯಲ್ಲಿ ನಡೆದ **"ಅರೆಭಾಷಿಕರ ಮದುವೆ ಅಂದು-ಇಂದು"** ಹರಟೆ ಕಾರ್ಯಕ್ರಮ ದಲ್ಲಿ ಶ್ರೀ ಅನಂತ ನಿಡಿಂಜಿ, ಸೂರಜ್ ಹೊಸೂರು, ಕಿಶೋರ್ ಉಳುವಾರು, ಚಂದ್ರಶೇಖರ್ ಹೊಸೂರು, ಭವಾನಿಶಂಕರ ಅಡ್ತಲೆ, ಲೋಕನಾಥ ಎಸ್.ಪಿ.ಭಾಗವಹಿಸಿದ್ದರು.

ಸಂಜೆ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ವಿಶೇಷವಾಗಿ ಶ್ರೀ ಚಂದ್ರಶೇಖರ ಪೆರಾಜೆ ಇವರ ವಿರಚಿತ ಅರಭಾಷೆ ಯಕ್ಷಗಾನ ಪ್ರಸಂಗ ನಡೆಯಿತು. ಇದು ಕೊಡಗಿನಲ್ಲಿ ನಡೆದ ಪ್ರಥಮ ಅರೆಭಾಷೆ ಯಕ್ಷಗಾನ ಪ್ರದರ್ಶನ, ಶ್ರೀ ಲೋಕೇಶ್ ಊರುಬೈಲ್ ತಂಡದಿಂದ ನಾಟಕ ಪ್ರದರ್ಶನ ಮತ್ತು ನೃತ್ಯಗಳು ಗಮನಸೆಳೆದವು. ಕಾರ್ಯಕ್ರಮದ ಸಂಚಾಲಕರಾಗಿ ಶ್ರೀಮತಿ ಸಂಗೀತ ರವಿರಾಜ್ ರವರು ಕಾರ್ಯ ನಿರ್ವಹಿಸಿದರು.







ಅರೆಭಾಷೆ ಮತ್ತು ಕೊಡವ ಅಕಾಡೆಮಿ ಪ್ರಾಯೋಜಕತ್ವದಲ್ಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ

# ಸಂಗಮ ಸಂಭ್ರಮ-2016

ವಿವಿಧ ಸಂಸ್ಕೃತಿಗಳ ಸಮ್ಮಿಲನಕ್ಕೆ ಸಾಕ್ಷಿಯಾದ ಆಕರ್ಷಕ ಮೆರವಣಿಗೆ ಸಂಗಮ ಸಂಭ್ರಮ– 2016. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ವಿವಿಧ ಅಕಾಡೆಮಿಗಳು ಮತ್ತು ಪ್ರಾಧಿಕಾರಗಳ ಸಂಯುಕ್ತಾಶ್ರಯದಲ್ಲಿ ನಗರದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜು ಮೈದಾನದಲ್ಲಿ ಸಂಭ್ರಮದಿಂದ ಜರುಗಿತು. ಯಕ್ಷಗಾನ ಸೇರಿದಂತೆ ಕನ್ನಡ ನಾಡಿನ ಶ್ರೀಮಂತ ಸಾಂಸ್ಕೃತಿಕ ವೈಭವದ ದರ್ಶನ ಮಂಜಿನ ನಗರಿಯಲ್ಲಾಯಿತು.

ಸಂಗಮ– ಸಂಭ್ರಮ ಸಾಂಸ್ಕೃತಿಕ ಸಾಮರಸ್ಯ ಕಾರ್ಯಕ್ರಮದಲ್ಲಿ ರಾಜ್ಯ ಸಂಗೀತ ನೃತ್ಯ ಅಕಾಡೆಮಿ, ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ ಮತ್ತು ಜಾನಪದ ಅಕಾಡೆಮಿ ವತಿಯಿಂದ ವಿವಿಧ ಕಲಾತಂಡಗಳು ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿದರು. ಖ್ಯಾತ ಕಲಾವಿದರಾದ







ಬೆಂಗಳೂರಿನ ಟಿ.ಎಸ್.ಮಣಿ ಮತ್ತು ರಾಘವೇಂದ್ರರ ತಂಡದಿಂದ ತಾಳರಂಗಿಣಿ ಕಾರ್ಯಕ್ರಮ ಅದ್ಭುತವಾಗಿ ಮೂಡಿಬಂತು.

ಧಾರವಾಡದ ಇಮಾಮ್ ಸಾಬ್ ವಲ್ಲಪ್ಪೆರ ತಂಡದಿಂದ ಭಾವೈಕ್ಯ ಗೀತೆಗಳು ಮತ್ತು ಉಡುಪಿಯ ಹಂಸಧ್ವನಿ ಯಕ್ಷಗಾನ ಕೇಂದ್ರದಿಂದ ಯಕ್ಷಗಾನ ಪ್ರದರ್ಶನ ಗಮನ ಸೆಳೆಯಿತು.



## ವ್ಯವಸ್ಥಿತ ಊಟೋಪಚಾರ

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಮುಂದಾಳತ್ವದಲ್ಲಿ ಸಂಗಮ ಸಂಭ್ರಮದಲ್ಲಿ ಪಾಲ್ಗೊಂಡಿದ್ದ ಪ್ರತಿಯೊಬ್ಬರಿಗೆ ವ್ಯವಸ್ಥಿತವಾಗಿ ಊಟೋಪಚಾರದ ವ್ಯವಸ್ಥೆ ಮಾಡಲಾಗಿತ್ತು. ಗಣ್ಯರು, ಅತಿಥಿಗಳು, ಮಾಧ್ಯಮ ಪ್ರತಿನಿಧಿಗಳು, ಅಕಾಡೆಮಿ ಅಧ್ಯಕ್ಷ-ಸದಸ್ಯರಿಗೆ ಪ್ರತ್ಯೇಕವಾಗಿ ಊಟದ ಕೌಂಟರ್ ತೆರೆಯಲಾಗಿತ್ತು. ಕಲಾವಿದರು, ಪ್ರತಿನಿಧಿಗಳು, ಸಾರ್ವಜನಿಕರಿಗೆ ಪ್ರತ್ಯೇಕವಾದ ಕೌಂಟರ್ ತೆರೆಯಲಾಗಿತ್ತು. ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ್ದ ಪ್ರತಿಯೊಬ್ಬರಿಗೂ ಸಸ್ಯಹಾರಿ ಊಟೋಪಚಾರ ಮಾಡಲಾಯಿತು. ಯಾವುದೇ ಗೊಂದಲಕ್ಕೆ ಆಸ್ಪದವಾಗದ ರೀತಿಯಲ್ಲಿ ಊಟೋಪಚಾರದ ವ್ಯವಸ್ಥೆ ಕಲ್ಪಿಸಲಾಗಿತ್ತು.

## ಮನಸೆಳೆದ ಹಳೆಯ ವಸ್ತುಗಳು

ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯಿಂದ ಆಯೋಜಿಸಿದ್ದ ಹಳೆಯ ವಸ್ತುಗಳ ಪ್ರದರ್ಶನದಲ್ಲಿ ಮರಗೋಡಿನ ಕೋಟಂಬೈಲು ಪಾರ್ವತಿ ಮೋಹನ್ ಅವರ ಸಂಗ್ರಹದಲ್ಲಿದ್ದ ಹಳೆಯ ವಸ್ತುಗಳನ್ನು ಪ್ರದರ್ಶಿಸಲಾಯಿತು. ಪೂರ್ವಿಕರು ತಮ್ಮ ದೈನಂದಿನ ಬದುಕಿನಲ್ಲಿ ಬಳಸುತ್ತಿದ್ದ ವಸ್ತುಗಳನ್ನು ಅತ್ಯಂತ ಜೋಪಾನವಾಗಿ ಪಾರ್ವತಿ ಮೋಹನ್ ಸಂಗ್ರಹಿಸಿಟ್ಟಿದ್ದಾರೆ. ಸಂಗಮ ಸಂಭ್ರಮದಲ್ಲಿ ಪಾಲ್ಗೊಂಡಿದ್ದವರು ಕುತೂಹಲಭರಿತವಾಗಿ ಹಳೆಯ ವಸ್ತುಗಳನ್ನು ವೀಕ್ಷಿಸುತ್ತಿದ್ದರು. ಕೊಡವ ಸಾಹಿತ್ಯ ಅಕಾಡೆಮಿಯಿಂದ ಮೂರ್ನಾಡು ಬಾಡಗದ ನಿವಾಸಿ ಮದಿಯಂಡ ಸಬೀತಾ ಕಾರ್ಯಪ್ಪ ತಮ್ಮ ಸಂಗ್ರಹದಲ್ಲಿದ್ದ ಹಳೆಯ ವಸ್ತುಗಳನ್ನು ಪ್ರದರ್ಶನಕ್ಕಿಟ್ಟಿದ್ದರು. ಎರಡು ಕಡೆಗಳಲ್ಲಿಯೂ ಹಳೆ ವಸ್ತುಗಳ ವಿವರವನ್ನು ಕನ್ನಡದಲ್ಲಿ ನೀಡಲಾಗಿತ್ತು. ಇದು ವೀಕ್ಷಕರಿಗೆ ಸುಲಭವಾಗಿ ವಸ್ತುಗಳ ಬಗ್ಗೆ ಅರಿಯಲು ಸಾಧ್ಯವಾಯಿತು.



# ಇಂಗ್ಲಿಷ್ ದಾಳಿ ಎದುರಿಸಲು ಸೋದರ ಭಾಷೆಗಳು ಒಟ್ಟಾಗಲಿ






# ಅಕಾಡೆಮಿ ಪತ್ರಿಕಾ ಗೋಷ್ಠಿಗಳು

ಅಕಾಡೆಮಿಯು ತನ್ನ ಅಧಿಕಾರಾವಧಿಯಲ್ಲಿ ಪತ್ರಿಕಾಗೋಷ್ಠಿಗಳನ್ನು ರಾಜ್ಯದ ನಾನಾ ಕಡೆಗಳಲ್ಲಿ ಕರೆದು ಅಕಾಡೆಮಿಯ ಕಾರ್ಯಚಟುವಟಿಕೆಗಳ ಬಗ್ಗೆ ಮಾಧ್ಯಮದವರೊಂದಿಗೆ ಹಂಚಿಕೊಂಡಿರುತ್ತದೆ.

## ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪ್ರಕಟ

ಮಡಿಕೇರಿ, ಜು. 27 : ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ 2016 ಮತ್ತು 2017ನೇ ಸಾಲಿನ ಗೌರವ ಪ್ರಶಸ್ತಿಯನ್ನು ಪ್ರಕಟಿಸಲಾಗಿದ್ದು, ಡಾ. ಪುರುಷೋತ್ತಮ ಬಿಳಿಮಲೆ ಸೇರಿದಂತೆ ಆರು ಮಂದಿಯನ್ನು ಆಯ್ಕೆ ಮಾಡಲಾಗಿದೆ.

ಅಕಾಡೆಮಿಯ ಅಧ್ಯಕ್ಷ ಕೊಲ್ಯದ ಗಿರೀಶ್, ಜೂ.29ರಂದು ನಡೆದ ವಿಶೇಷ ಸರ್ವ ಸದಸ್ಯರ ಸಭೆಯಲ್ಲಿ ಚರ್ಚಿಸಿ ಈ ಆರು ಮಂದಿಯನ್ನು ಅಕಾಡೆಮಿಯ ಗೌರವ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ತಿಳಿಸಿದರು.


ಗೌರವ ಪ್ರಶಸ್ತಿಗೆ ಭಾಜನರಾದ ಮಹನೀಯರಿಗೆ ತಲಾ 50 ಸಾವಿರ ಪ್ರಶಸ್ತಿಪತ್ರ ಮತ್ತು ನೆನಪಿನ ಕಾಣಿಕೆ ನೀಡಿ ಗೌರವಿಸಲಾಗುವುದು. ಆಗಸ್ಟ್ ಮೊದಲ ವಾರದಲ್ಲಿ ಮಡಿಕೇರಿಯಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗುವುದು ಎಂದು ಹೇಳಿದರು.

ಅಕಾಡೆಮಿಯ 2016ನೇ ಸಾಲಿನ ಪ್ರಶಸ್ತಿಗೆ ಅರೆಭಾಷೆ ಜನಪದ ಮತ್ತು …

## ಅರೆ ಭಾಷೆ ಸಾಂಪ್ರದಾಯಿಕ ಅಡಿಗೆ ತರಬೇತಿಗೆ ಇಂದು ಚಾಲನೆ



## ರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪ್ರಕಟ




## ಸುಬ್ರಹ್ಮಣ್ಯದಲ್ಲಿ ಯುವ ಅರೆಭಾಷೆ ಸಾಹಿತ್ಯ ಸಮಾವೇಶಕ್ಕೆ ಇಂದು ಚಾಲನೆ



## ಮೈಸೂರಿನಲ್ಲಿ ಅರೆಭಾಷೆ ಸಂಸ್ಕೃತಿ ಪರಿಪಾಲಕರ ಸಮಾಗಮ

ಮಡಿಕೇರಿ ಜು.17 : ಯುವ ಸಮೂಹಕ್ಕೆ ಅರೆಭಾಷೆ ಸಂಸ್ಕೃತಿಯನ್ನು ಪರಿಚಯಿಸುವ ಉದ್ದೇಶದಿಂದ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಹಾಗೂ ಮೈಸೂರಿನ ಕೊಡಗು ಗೌಡ ಸಮಾಜದ ವತಿಯಿಂದ





ಬಗ್ಗೆ ಅಕಾಡೆಮಿಯ ಸದಸ್ಯರಾದ ಡಾ. ಕೋರನ ಸರಸ್ವತಿ ಪ್ರಕಾಶ್

## ಅರೆಭಾಷೆ ಅಕಾಡೆಮಿಯಿಂದ ಕೆಸರು ಗದ್ದೆ ಕ್ರೀಡೋತ್ಸವ



## ಇಂದು ಅರೆಭಾಷೆ ಸಂಸ್ಕೃತಿ-ಸಾಹಿತ್ಯ ಅಕಾಡೆಮಿಯಿಂದ ಪ್ರಶಸ್ತಿ ಪ್ರದಾನ







# ಅರೆಭಾಷೆ ಅಕಾಡೆಮಿಯ ಕಲಿಕಾ ಶಿಬಿರದಲ್ಲಿ ಒಡಮೂಡಿದ ಕರ್ವಾಲೋ ನಾಟಕ ಪ್ರದರ್ಶನ

ದಿನಾಂಕ 26.01.2017 ರಂದು 68ನೇ ಗಣರಾಜ್ಯೋತ್ಸವದ ಸುಸಂದರ್ಭದಲ್ಲಿ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಮಡಿಕೇರಿ.ಇದರ ನಿಂಯೋಜಿತ ನಾಟಕ ಕಲಿಕಾಶಿಬಿರದಲ್ಲಿ ಅಕಾಡೆಮಿ ಸದಸ್ಯರಾದ ಮತ್ತು ಖ್ಯಾತರಂಗ ನಿರ್ದೇಶಕ ಮೋಹನ ಸೋನ ಇವರ ನಿರ್ದೇಶನದಲ್ಲಿ ಸಿದ್ಧಪಡಿಸಿಲಾದ ಅರೆಭಾಷಾ 'ಕರ್ವಾಲೋ' ನಾಟಕ ಸುಳ್ಯದ ಯುವಜನ ಸಂಯುಕ್ತ ಮಂಡಳಿಯ ರಂಗ ವೇದಿಕೆಯಲ್ಲಿ ಪ್ರದರ್ಶನಗೊಂಡಿತು.

'ಕರ್ವಾಲೋ' ಕನ್ನಡದ ಖ್ಯಾತ ಕಾದಂಬರಿ ಕಾರ. ಪ್ರಗತಿ ಪರಚಿಂತಕ ಕೆ.ಪಿ ಪೂರ್ಣಚಂದ್ರ ತೇಜಸ್ವಿಯವರ ಸುಪ್ರಸಿದ್ಧ ಕಾದಂಬರಿಯಾಗಿದೆ. ಮೂವತ್ತಾರು ಬಾರಿ ಮುದ್ರಣಗೊಂಡಿರುವ ಕನ್ನಡದ ಈ ಕಾದಂಬರಿ ಹಲವು ದೇಶೀಯ ಭಾಷೆಗಳಲ್ಲಿ ಹಾಗೆ ಇಂಗ್ಲೀಷ್. ಜಪಾನಿ ಮೊದಲಾದ ಅನ್ಯದೇಶೀಯ ಭಾಷೆಗಳಲ್ಲೂ ಅನುವಾದಗೊಂಡ ವಿಶಿಷ್ಟ ವೈಜ್ಞಾನಿಕ ನೋಟದ ಕೃತಿಂಯಾಗಿದೆ. ಕರ್ವಾಲೋ ಕಾದಂಬರಿಯಲ್ಲಿ ಚಿತ್ರಣವಾಗುವ ಮಲೆನಾಡಿನ ಜೀವನ ಮತ್ತು ಅರೆಭಾಷಿಕ ಸಮುದಾಯದ ಜೀವನಕ್ರಮ ಸಮಾನವಾಗಿರುವ ಹಿನ್ನೆಲೆಯಲ್ಲಿ ಈ ಕಥಾವಸ್ತುವನ್ನು ರಂಗ ಭಾಷೆಗೆ ಅಳವಡಿಸಿಕೊಂಡು ಕಲಿಕಾ ರಂಗಶಿಬಿರದಲ್ಲಿ ನಾಟಕವನ್ನು ರೂಪಿಸಲಾಗಿತ್ತು. ತೇಜಸ್ವಿಯವರ ಈ ಕರ್ವಾಲೊ ಕಾದಂಬರಿಯನ್ನು ನಾಟಕ ರೂಪವಾಗಿ ರಂಗದಲ್ಲಿ ಒಡಮೂಡಿಸುವ ಪ್ರಯತ್ನವಾಗಿ ಅದರ ಅರೆಭಾಷೆ ಸ್ಕ್ರಿಪ್ಟ್ ಮತ್ತು ಸಾಹಿತ್ಯವನ್ನು ಅಕಾಡೆಮಿ ಸದಸ್ಯ ಮತ್ತು ಬರಹಗಾರ ಪ್ರಾಧ್ಯಾಪಕ ಡಾ.ಪೂವಪ್ಪಕಣಿಯೂರು ಸಿದ್ಧಪಡಿಸಿದ್ದರು.

ಹಿಂದೊಮ್ಮೆ ಸುಳ್ಯ 'ಅಭಿನಯ ಹವ್ಯಾಸಿ ಕಲಾಸಕ್ತರ ತಂಡ'ದ ಮೂಲಕ ಕಲಾಪೂರ್ಣ ನಾಟಕಗಳ ಪ್ರೇಕ್ಷಕರನ್ನು ಹೊಂದಿತ್ತು. ಇತ್ತೀಚೆಗೆ ಅದು ಕಡಿಮೆಯಾಗಿದೆ. ಇಂತಹ ಸಂದರ್ಭದಲ್ಲಿ ಪ್ರದರ್ಶನಗೊಂಡ' ಕರ್ವಾಲೋ'ನಾಟಕವನ್ನು ಸುಳ್ಯದ ರಂಗಾಸಕ್ತರು ಬಹಳ ಪ್ರೀತಿಯಿಂದ ಸ್ವಾಗತಿಸಿದ್ದಾರೆ ಎಂಬುದನ್ನು, ನಾಟಕ ನೋಡಲು ಸೇರಿದ್ದ ಜನಸಮೂಹವೇ ಸಾಕ್ಷೀಕರಿಸಿತ್ತು.

ಕಾರ್ಯಕ್ರಮದಲ್ಲಿ ಅಕಾಡೆಮಿಯ ಸದಸ್ಯರಾದ ಶ್ರೀ ಬಿ.ಸಿ.ವಸಂತ, ಶ್ರೀ ಮಂದ್ರೀರ ಮೋಹನ್ ದಾಸ್. ಶ್ರೀಮತಿ ಸಂಗೀತ ರವಿರಾಜ್. ಶ್ರೀ ಸದಾನಂದ ಮಾವಜಿ. ಶ್ರೀ ಯಶವಂತ ಕುಡೆಕಲ್.ಮತ್ತು ಶ್ರೀ ಅಣ್ಣಾಜಿಗೌಡ ಇವರು ಭಾಗವಹಿಸಿದ್ದರು.







# ಗೌಜಿ-2016

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಸಹಯೋಗದಲ್ಲಿ ಗೌಡರ ಯುವ ಸೇವಾ ಸಂಘ (ರಿ) ಸುಳ್ಯ ಇವರ ಆಶ್ರಯದಲ್ಲಿ ಸುಳ್ಯದ ಕೋಡಿಯಾಲ ಬೈಲ್‌ನ ಗೌಡರ ಯುವ ಸಮುದಾಯಭವನದಲ್ಲಿ ನಡೆದ ರಾಜ್ಯ ಮಟ್ಟದ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಸಮ್ಮೇಳನವು ಅರೆಭಾಷೆಯ ಭಾಷಾ ಸೌಗಂಧದ ಅನಾವರಣದ ಅಪೂರ್ವತೆಗೆ ಸಾಕ್ಷಿಯಾಯಿತು.

ಡಿ.10 ರಂದು ರಾಜ್ಯ ವಸತಿ ಸಚಿವ ಶ್ರೀ ಎಂ.ಕೃಷ್ಣಪ್ಪನವರು ಸಮ್ಮೇಳನದ ಶಿಸ್ತನ್ನು ವಿಶೇಷವಾಗಿ ಶ್ಲಾಘಿಸಿದ ಸಚಿವರು ಅರೆಭಾಷೆಯ ಜನರು ಮತ್ತು ಸಂಸ್ಕೃತಿಯನ್ನು ದೂರದಿಂದ ನೋಡಿ ಗೌರವದಿಂದ ಕಂಡಿದ್ದೆ. ಆದರೆ ಇಂದು ಪ್ರತ್ಯಕ್ಷವಾಗಿ ನೋಡಿ ನಮಗೆ ಕಲಿಯಲು ಬಹಳಷ್ಟಿದೆ ಎಂದರು. ಎಲ್ಲಾ ಭಾಷೆ ಮತ್ತು ಸಂಸ್ಕೃತಿಯ ಜನರು ಪರಸ್ಪರ ಅರಿತುಕೊಂಡು ಜೀವನ ನಡೆಸಿದರೆ ಬದುಕು ಸುಂದರವಾಗುತ್ತದೆ. ಭಾಷೆ ಮತ್ತು ಸಂಸ್ಕೃತಿಯ ಬೆಳವಣಿಗೆಗೆ ರಾಜ್ಯ ಸರಕಾರದ ಜವಾಬ್ದಾರಿಯಾಗಿದ್ದು ಸರಕಾರದಿಂದ ಹಾಗೂ ವೈಯುಕ್ತಿಕವಾಗಿ ಎಲ್ಲಾ ರೀತಿಯ ಸಹಕಾರ ನೀಡುವುದಾಗಿ ಸಚಿವರು ಭರವಸೆ ನೀಡಿದರು.

ಅಕಾಡೆಮಿ ಪ್ರಕಟಿಸಿದ ಶ್ರೀಮತಿ ಎಂ.ಜಿ. ಕಾವೇರಮ್ಮ ನವರ ನೆಂಪುಗಳ ರಂಗೋಲಿ, ಶ್ರೀಮತಿ ಉದಯಕುಮಾರಿ ಚೆಂಬು ರವರ ಹೊಸ ಬೊದ್ಕು ಈ ಎರಡು ಕೃತಿಗಳನ್ನು ಕೇಂದ್ರ ಸಚಿವರಾದ ಶ್ರೀ ಡಿ.ವಿ.ಸದಾನಂದ ಗೌಡರು ಬಿಡುಗಡೆಗೊಳಿಸಿದರು. ಉಳಿದ ಎಲ್ಲಾ ಭಾಷೆಗಳಿಗಿಂತಲೂ ಅರೆಭಾಷೆಗೆ ಹೆಚ್ಚುಗಾರಿಕೆ ಇದೆ. ಅರೆಭಾಷೆಯಲ್ಲಿ ಪರಿಸರದ ಪರಿಮಳವಿದೆ. ಸ್ವಾತಂತ್ರ್ಯ ಸಂಗ್ರಾಮದ ಕಹಳೆಯಿದೆ. ಮನುಷ್ಯ ಸಹಜ ಪ್ರೀತಿಯಿದೆ. ಸಾಮಾಜಿಕ ಬದುಕಿನ ಚೌಕಟ್ಟಿದೆ. ಆದರ್ಶ ಚಿಂತನೆಗಳಿವೆ ಸಂಸ್ಕೃತಿಯ ಬೇರುಗಳಿವೆ. ವಿಫುಲವಾದ ಸಾಹಿತ್ಯ ಭಂಡಾರವಿದೆ ಎಂದು ಕೊಂಡಾಡಿದ ಕೇಂದ್ರ ಸಚಿವರು ಪಶ್ಚಿಮ ಘಟ್ಟದ ತಪ್ಪಲಿನ ಈ ಭಾಷೆ ಜಾತಿಗೆ ಸೀಮಿತವಾಗಿಲ್ಲದೆ ಬೆಳೆದಿದೆ. ಇದು ಕೇವಲ ಅಕಾಡೆಮಿಯ ಸ್ಥಾಪನೆಗಷ್ಟೆ ಸೀಮಿತಗೊಳ್ಳದೆ, ಜಗತ್ತಿಗೆ ಪಸರಿಸಬೇಕು. ಹಾಗಾಗಬೇಕಿದ್ದರೆ





ಅರೆಭಾಷಿಗರು ಮನೆಗಳಲ್ಲಿ ಅರೆಭಾಷೆಯನ್ನೆ ಮಾತಾಡಬೇಕು ಎಂದು ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವ ಬಿ.ರಮನಾಥ ರೈ ಮಾತನಾಡಿ ಸಮಾಜಕ್ಕೆ ಗೌಡ ಸಮುದಾಯದ ಕೊಡುಗೆ ಬಹಳಷ್ಟಿದೆ, ಇದರ ಭಾಷೆ ಮತ್ತು ಸಂಸ್ಕೃತಿ ಸೊಗಸಾಗಿದೆ ಎಂದರು. ಮುಖ್ಯ ಅತಿಥಿಗಳಾಗಿದ್ದ ಮಾಜಿ ಸ್ಪೀಕರ್ ಶಾಸಕ ಕೆ.ಜಿ.ಬೋಪಯ್ಯ ಮಾತನಾಡಿ ಅಕಾಡೆಮಿ ಸ್ಥಾಪನೆ ಯೊಂದಿಗೆ ಅರೆಭಾಷೆಗೆ ಹೆಚ್ಚು ಮನ್ನಣೆ ದೊರೆತಿದೆ, ಇಷ್ಟಕ್ಕೆ ಸೀಮಿತವಾಗಬಾರದು ಇಲ್ಲಿ ನಿರ್ಮಾಣಗೊಳ್ಳುವ ಸಮುದಾಯ ಭವನವು ನಿರಂತರ ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವಾಗ ಬೇಕು ಎಂದರು, ಸುಳ್ಯದ ಸಂಘಟನಾ ಸಾಮರ್ಥ್ಯ ಮತ್ತು ಭಾಷೆಯ ಮೇಲಿನ ಪ್ರೀತಿಯಿಂದ ಇಲ್ಲಿ ಸಮುದಾಯ ಶಕ್ತವಾಗಿದೆ ಸಮ್ಮೇಳನವೂ ಯಶಸ್ವಿಯಾಗಿದೆ ಎಂದು ಶಾಸಕ ಎಸ್.ಅಂಗಾರ ಹೇಳಿದರು.

ಹಾವೇರಿ ಜನಪದ ವಿ.ವಿ.ಉಪಕುಲಪತಿ ಡಾ. ಚಿನ್ನಪ್ಪಗೌಡ ಸಮ್ಮೇಳನದಲ್ಲಿ ದಿಕ್ಸೂಚಿ ಭಾಷಣ ಮಾಡಿದರು. ಸಾಂಸ್ಕೃತಿಕ ಜಗತ್ತು ರೂಪಿಸಿಕೊಳ್ಳುವುದು ಇವತ್ತಿನ ಸವಾಲು. ಅರೆಭಾಷೆ ಇಂತಹ ಸವಾಲನ್ನು ಗೆದ್ದು ಜಗತ್ತಿಗೆ ವ್ಯಾಪಿಸಬೇಕು ಎಂದವರು ಹೇಳಿದರು, ಸ್ಥಿತ್ಯಂತರ ಕಾಲದಲ್ಲಿ ಪ್ರತೀ ಸಮುದಾಯವು ವಹಿಸಬೇಕಾದ ಎಚ್ಚರ ಬಹಳಷ್ಟಿದೆ, ಅಂತ:ಪ್ರಜ್ಞೆ ಛಿದ್ರವಾಗಿದೆ. ಅಂತ:ಪ್ರಜ್ಞೆ ಛಿದ್ರವಾದರೆ ಯಾವುದೇ ಸಮುದಾಯವೂ ಅಧ:ಪತನ ಗೊಳ್ಳುತ್ತದೆ. ಬದುಕುವ ಹಂಬಲ ಮತ್ತು ಮನುಷ್ಯ ಪ್ರೀತಿ ಸಮುದಾಯವನ್ನು ಉಳಿಸುತ್ತದೆ ಎಂದು ಹೇಳಿದರು. ದುಡಿಮೆ, ಹೋರಾಟ, ಸ್ವೀಕರಣೆ ಮತ್ತು ಸಮನ್ವಯತೆ ಯಿಂದ ಮಾತ್ರ ಯಾವುದೇ ಸಮುದಾಯ ಸಶಕ್ತವಾಗುತ್ತದೆ ಎಂದವರು ಹೇಳಿದರು.

ರಾಜ್ಯಮಟ್ಟದ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಸಮ್ಮೇಳನದ ಆರಂಭದಲ್ಲಿ ಪೂರ್ವಭಾವಿ ಯಾಗಿ ವೈಭವ ಪೂರ್ಣ ಮೆರವಣಿಗೆ ನಡೆಯಿತು. ಅಮರಶ್ರೀ ಭಾಗ್‌ನಿಂದ ಆರಂಭಗೊಂಡ ಮೆರವಣಿಗೆ ಯನ್ನು ಅಕಾಡೆಮಿ ಆಫ್ ಲಿಬರಲ್ ಎಜ್ಯುಕೇಷನ್ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕರಾಗಿರುವ ಡಾ. ಕೆ.ವಿ. ರೇಣುಕಾ ಪ್ರಸಾದ್ ತೆಂಗಿನಕಾಯಿ ಒಡೆಯುವುದರ ಮೂಲಕ ಉದ್ಘಾಟಿಸಿದರು. ಜನರು ಹರ್ಷೋದ್ಗಾರಗಳೊಂದಿಗೆ ಮೆರವಣಿಗೆ ಮೂಲಕ ಕೊಡಿಯಾಲ ಬೈಲುಗೌಡ ಸಮುದಾಯ ಭವನ ತಲುಪಿದರು.

ಸಮಾರಂಭದ ಅಧ್ಯಕ್ಷತೆಯನ್ನು ಅಕಾಡೆಮಿ ಅಧ್ಯಕ್ಷರಾದ ಕೊಲ್ಯದ ಗಿರೀಶ್ ವಹಿಸಿದ್ದರು, ಮುಖ್ಯ ಅಥಿತಿಗಳಾಗಿ ಶಾಸಕರಾದ ಶ್ರೀ ವಾಸು ಡಾ. ಕೆ.ವಿ. ಚಿದಾನಂದ ಗೌಡ, ಶ್ರೀ ನಿತ್ಯಾನಂದ ಮುಂಡೋಡಿ, ಗೌಡರ ಯುವ ಸೇವಾ ಸಂಘದ ಅಧ್ಯಕ್ಷರಾದ ದಿನೇಶ್ ಮಡಪ್ಪಾಡಿ, ಕಾರ್ಯಕ್ರಮದ ಸಂಚಾಲಕರುಗಳಾದ ಸದಾನಂದ ಮಾವಜಿ, ಬಿ.ಸಿ. ವಸಂತ್, ಹಾಗೂ ಅಕಾಡೆಮಿ ಸದಸ್ಯರು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ವಿಚಾರಗೋಷ್ಠಿ, ಕವಿಗೋಷ್ಠಿಗಳು, ವೈವಿಧ್ಯಮಯವಾದ ಸಾಂಸ್ಕೃತಿಕ ಕಾರ್ಯಕ್ರಮ, ಶ್ವಾನ ಪ್ರದರ್ಶನ, ವಸ್ತು ಪ್ರದರ್ಶನ, ಯಕ್ಷಗಾನ, ನಾಟಕ, ನಾಗನೃತ್ಯ, ಮುಂತಾದ ಕಾರ್ಯಕ್ರಮಗಳು ನಡೆದವು.





ಅಪೂರ್ವ ಭಾಷಾ ಸುಗಂಧ ಪಸರಿಸಿದ

ಭಾಷಾ ಸುಗಂಧ ಪಸರಿಸಿದ

ಅಪೂರ್ವ ಭಾಷಾ ಸುಗಂಧ ಪಸರಿಸಿದ

ರಾಜ್ಯ ಮಟ್ಟದ ಅರೆಭಾಷೆ ಸಂಸ್ಕೃತಿ, ಸಾಹಿತ್ಯ ಸಂಗಮ

# ಅರೆಭಾಷೆ ಸೌಹಾರ್ದ ದಿನಾಚರಣೆ

2011 ನೇ ಡಿಸೆಂಬರ್ 15 ರಂದು ಅರೆಭಾಷೆ ಅಕಾಡೆಮಿ ಸ್ಥಾಪನೆಯಾಗಿದ್ದು ಈ ದಿನವನ್ನು ಪ್ರತಿ ವರ್ಷ 'ಸೌಹಾರ್ದ ದಿನ'ವನ್ನಾಗಿ ಆಚರಿಸಲಾಗುತ್ತಿದೆ. ದಿನಾಂಕ 15.12.2016 ರಂದು ಕೊಡಗು ಗೌಡ ಸಮಾಜ, ಮಡಿಕೇರಿ ಇಲ್ಲಿ ಅರೆಭಾಷೆ ಸೌಹಾರ್ದ ದಿನಾಚರಣೆಯನ್ನು ನಡೆಸಲಾಯಿತು. ಕಾರ್ಯಕ್ರಮವನ್ನು ಕೊಡಗು ಗೌಡ ಸಮಾಜಗಳ ಒಕ್ಕೂಟ ಅಧ್ಯಕ್ಷರಾದ ಶ್ರೀ ದಂಬೆಕೋಡಿ ಆನಂದ ರವರು ಉದ್ಘಾಟಿಸಿ ಮಾತನಾಡಿ 'ಭಾಷೆ ಅಂದರೆ ಯಾವುದೇ ಜನಾಂಗದ ಸ್ವತ್ತಲ್ಲ ಅನ್ನುತ್ತಾರೆ. ಆದರೆ ಭಾಷೆಯೆಂಬುದು ಒಂದು ಜನಾಂಗದ ಸ್ವತ್ತು ಎಂಬುದು ನನ್ನ ಅಭಿಪ್ರಾಯ ವೆಂದರು. ಶ್ರೀ ಪಟ್ಟಡ ಶಿವಕುಮಾರ್ ರವರು "ಅರೆಭಾಷೆ ಸಂಸ್ಕೃತಿ ಮತ್ತೆ ಸಾಹಿತ್ಯ" ವಿಷಯದ ಕುರಿತು ವಿಚಾರಮಂಡನೆ ಮಾಡಿದರು. ಈ ಕಾರ್ಯಕ್ರಮಕ್ಕೆ ನಾಡಿನ ಎಲ್ಲಾ ಸಮಾಜಗಳ ಅಧ್ಯಕ್ಷರು, ಪ್ರತಿನಿಧಿಗಳು ಆಗಮಿಸಿ ಈ ದಿನಾಚರಣೆಯ ಮಹತ್ವದ ಬಗ್ಗೆ ತಮ್ಮ ಮನದಾಳದ ಹಿಂಗಿತವನ್ನು ವ್ಯಕ್ತಪಡಿಸಿದರು.












# ಅರೆಬಾಸೆ ಸಂಸ್ಕೃತಿ ಪರಿಪಾಲಕರ ಸಮಾಗಮ




ದಿನಾಂಕ 23.07.2017 ರಂದು ಕೊಡಗು ಗೌಡ ಸಮಾಜ, ಮೈಸೂರು ಇಲ್ಲಿ ಅರೆಬಾಸೆ ಪರಿಪಾಲಕರ ಸಮಾಗಮ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಮೈಸೂರು ಜಿಲ್ಲೆ ಚಾಮರಾಜ ಕ್ಷೇತ್ರದ ಶಾಸಕರಾದ ಶ್ರೀ ವಾಸು ರವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಅರೆಭಾಷೆಯನ್ನು ಏಕ ರೀತಿಯಲ್ಲಿ ಬೆಳೆಸಿ, ಉಳಿಸಿಕೊಂಡು ಬಂದ ಕೀರ್ತಿ ಅರೆಭಾಷೆ ಜನಾಂಗಕ್ಕೆ ಸೇರುತ್ತದೆ. ಇವತ್ತು ಸಂಸ್ಕೃತಿಯ ಆಚರಣೆಗಿಂತ ವೈಭವೀಕರಣ ನಡೆಯುತ್ತಿದೆ. ಇದರಿಂದ ಯುವ ಜನಾಂಗಕ್ಕೆ ಸಂಸ್ಕೃತಿಯ ಸಾರವೇ ತಿಳಿಯದಂತಾಗಿದೆ. ಇವತ್ತು ನಾವು ಹುಟ್ಟು, ಹಿನ್ನಲೆ, ಸಂಸ್ಕೃತಿ ಆಚಾರ, ವಿಚಾರ ಎಲ್ಲವನ್ನೂ ಮರೆಯುತ್ತಾ ಹೋಗುತ್ತಿದ್ದು, ಸಂಸ್ಕೃತಿಯ ಹಿನ್ನಲೆ ಕೇವಲ ಸಂಶೋಧಕರಿಗಷ್ಟೆ ಸೀಮಿತವಾಗು ವಂತಹ ಪರಿಸ್ಥಿತಿಗೆ ಬಂದು ತಲುಪಿದ್ದೇವೆ ಜಾನಪದ ಕಲೆ ನಶಿಸುತ್ತಿದ್ದು, ಜನಪದವನ್ನು ತಿಳಿದುಕೊಂಡಾಗ ನಮ್ಮ ಸಂಸ್ಕೃತಿಯ ಅರಿವಾಗುತ್ತದೆ ಎಂದು ಶ್ರೀ ವಾಸುರವರು ಹೇಳಿದರು. ಪ್ರತಿಯೊಬ್ಬ ಅರೆಭಾಷೆ ಗೌಡ ಜನಾಂಗದವರು ತಮ್ಮ ಜಾತಿ ಮೇಲೆ ಅಭಿಮಾನ ಹೊಂದಿ, ಇತರೆ ಜನಾಂಗದ ಪ್ರೀತಿ ವಿಶ್ವಾಸಗಳಿಸಿ ಸ್ವಾಭಿಮಾನದ ಬದುಕನ್ನು ಕಟ್ಟಿಕೊಳ್ಳಬೇಕು. ಜನಾಂಗದವರು ತನ್ನ ಆಚಾರ, ವಿಚಾರ, ಪದ್ಧತಿ, ಸಂಸ್ಕೃತಿ, ಆಚರಣೆಗಳಲ್ಲಿ ಕೀಳರಿಮೆ ತೋರದೆ ಶಿಸ್ತುಬದ್ಧವಾಗಿ ಮಾಡಿದಾಗ ಮಾತ್ರ ಮುಂದಿನ ಪೀಳಿಗೆಗೂ ಉಳಿದು ಬೆಳೆಯಲು ಸಾಧ್ಯ. ಇದಕ್ಕೆ









ಎಲ್ಲರ ಸಹಕಾರ ಅಗತ್ಯ. ಆ ನಿಟ್ಟಿನಲ್ಲಿ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಹಾಗೂ ಮೈಸೂರು ಇಲ್ಲಿ ಹಮ್ಮಿಕೊಂಡಿರುವ ಅರೆಭಾಷೆ ಸಂಸ್ಕೃತಿ ಪರಿಪಾಲಕರ ಸಮಾಗಮ ಕಾರ್ಯಕ್ರಮ ಶ್ಲಾಘನೀಯ. ಇನ್ನು ಮುಂದೆಯಾದರೂ ಇತ್ತ ಗಮನಹರಿಸ ಬೇಕಿದೆ. ಶಿಕ್ಷಣದ ಮೂಲಕ




ಅಭಿವೃದ್ಧಿ ಹೊಂದಿದ್ದೇ ಆದರೆ ಸಮಾಜದಲ್ಲಿ ಗೌರವ ಸಿಗುವುದರೊಂದಿಗೆ ಎಲ್ಲರೂ ಗುರುತಿಸಲು ಸಾಧ್ಯವಾಗುತ್ತದೆ ಎಂದು ವಿರಾಜಪೇಟೆ ಕ್ಷೇತ್ರದ ಶಾಸಕರಾದ ಶ್ರೀ ಕೊಂಬಾರನ ಬೋಪಯ್ಯರವರು ಹೇಳಿದರು. ಸುಮಾರು 60 ಜನ ಅರೆಭಾಷೆ ಸಂಸ್ಕೃತಿ ಪರಿಪಾಲಕರು ಸಂವಾದದಲ್ಲಿ ಭಾಗವಹಿಸಿದ್ದರು,

ವಿಚಾರಗೋಷ್ಠಿಯಲ್ಲಿ ಅರೆಭಾಷಿಕರ ಹುಟ್ಟು ಮತ್ತೆ ಆಚರಣೆ ಬಗ್ಗೆ ಶ್ರೀ ಬಾರಿಯಂಡ ಜೋಯಪ್ಪ, ಪ್ರೌಢಾವಸ್ಥೆ, ಮದುವೆ ಆಚರಣೆ ಬಗ್ಗೆ ಡಾ॥ಕೋರನ ಸರಸ್ವತಿ ಪ್ರಕಾಶ್, ಸಾವು ಮತ್ತೆ ವಿಧಿ ವಿಧಾನಗಳ ಆಚರಣೆ ಬಗ್ಗೆ ಶ್ರೀ ಪಟ್ಟಡ ಶಿವಕುಮಾರ್, ಹಬ್ಬ ಹರಿದಿನ ಮತ್ತೆ



ಆಚರಣೆ ಬಗ್ಗೆ ಡಾ॥ ಚೆರಿಯಮನೆ ರಾಮಚಂದ್ರ ರವರು ಉಪನ್ಯಾಸ ಮಾಡಿದರು, ಶ್ರೀ ಪೋತಂಡ್ರ ತೇಜ ಪ್ರಸಾದ್ ಮತ್ತೆ ಕಟ್ಟೆಮನೆ ಸೋನಾಜಿತ್ ರವರು ಗೋಷ್ಠಿ ಮತ್ತು ಸಂವಾದ ನಿರ್ವಹಿಸಿದರು.









# ಭಾಷಾ ಮಾಧ್ಯಮ (ಚಿಂತನ-ಮಂಥನ)

ದಿನಾಂಕ 13.08.2017 ರಂದು ಕೊಡಗು ಗೌಡ ಸಮಾಜ, ಮಡಿಕೇರಿ ಇಲ್ಲಿ ಜಿಲ್ಲಾ ಪತ್ರಕರ್ತರ ಸಹಯೋಗದಲ್ಲಿ ಭಾಷಾ:ಮಾಧ್ಯಮ ಚಿಂತನ-ಮಂಥನ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಡಾ. ಪುರುಷೋತ್ತಮ ಬಿಳಿಮಲೆ, ಕನ್ನಡ ವಿಭಾಗ ಮುಖ್ಯಸ್ಥರು, ಜವಹರ್‌ಲಾಲ್ ನೆಹರು ಯೂನಿವರ್‌ಸಿಟಿ, ದೆಹಲಿ ಇವರು ಕಾರ್ಯಕ್ರಮ ಉದ್ಘಾಟನೆ ಮಾಡಿ ಮಾತೃ ಭಾಷೆಗಳು ಮತ್ತು ಮಾಧ್ಯಮ ಬಗ್ಗೆ ಪ್ರಧಾನ ಭಾಷಣ ಮಾಡಿದರು. ಕೊಡಗು ಜಿಲ್ಲಾ ಪತ್ರಕರ್ತರ ಸಂಘ ಮತ್ತು ಪ್ರೆಸ್ ಕ್ಲಬ್ ಇದರ ಅಧ್ಯಕ್ಷರಾದ ಶ್ರೀ ಅಜ್ಜಮಾಡ ರಮೇಶ್ ಕುಟ್ಟಪ್ಪ ಮತ್ತು ವಿಜಯ ಕರ್ನಾಟಕ ಪತ್ರಿಕೆಯ ಪ್ರಧಾನ ವರದಿಗಾರರಾದ ಶ್ರೀ ರಮೇಶ್ ಉತ್ತಪ್ಪ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಪ್ರೆಸ್ ಕ್ಲಬ್ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಕೆ.ಬಿ. ಮಂಜುನಾಥ್ ರವರು ಅರೆಭಾಷೆ ಬೆಳವಣಿಗೆಯಲ್ಲಿ ಮಾಧ್ಯಮಗಳ ಪಾತ್ರ ಬಗ್ಗೆ ಉಪನ್ಯಾಸ ಮಾಡಿದರು, ಸರಕಾರಿ ಪದವಿ ಪೂರ್ವ ಕಾಲೇಜು ಉಪನ್ಯಾಸಕರಾದ ಶ್ರೀ ಪಟ್ಟಡ ಶಿವಕುಮಾರ್ ರವರು ಆಡು ಭಾಷೆಯಲ್ಲಿ ಅರೆಭಾಷಾ ಸೊಗಡು ಬಗ್ಗೆ ಉಪನ್ಯಾಸ ನೀಡಿದರು. ಇವರೆಲ್ಲರಿಗೆ ಸ್ಮರಣಿಕೆ ಮತ್ತು ಗೌರವ ಸಂಭಾವನ ನೀಡ ಲಾಯಿತು.

ಬಹುಭಾಷಾ ಕವಿಗೋಷ್ಠಿಯಲ್ಲಿ ಅರೆಭಾಷೆಯಲ್ಲಿ ಶ್ರೀ ಬಾರಿಯಂಡ ಜೋಯಪ್ಪ, ಶ್ರೀ ಕುಡೆಕಲ್ ಸಂತೋಷ್, ಶ್ರೀಮತಿ ಪೂಜಾರಿರ ಕೃಪಾ ದೇವರಾಜ್, ಕನ್ನಡ ಭಾಷೆಯಲ್ಲಿ ಶ್ರೀ ಎಂ.ಎ.ಅಜೀಜ್, ಶ್ರೀಮತಿ ಕೆ.ಎಸ್.ಕಾಂಚನ, ಕೊಡವ ಭಾಷೆಯಲ್ಲಿ ಶ್ರೀ ಚಮ್ಮಟ್ಟಿರ ಪ್ರವೀಣ ಉತ್ತಪ್ಪ, ಶ್ರೀಮತಿ ಮೊಣ್ಣಂಡ ಶೋಭಾ ಸುಬ್ಬಯ್ಯ, ತುಳು ಭಾಷೆಯಲ್ಲಿ ಶ್ರೀ ಕಿಶೋರ್ ರೈ, ಶ್ರೀ ನವೀನ್ , ಬ್ಯಾರಿ ಭಾಷೆಯಲ್ಲಿ ಶ್ರೀ ಎಂ.ಇ.ಮಹಮ್ಮದ್ ಮತ್ತು ಶ್ರೀ ಎಂ.ಎ.ಅಬ್ದುಲ್ಲ, ಕೊಂಕಣಿ ಭಾಷೆಯಲ್ಲಿ ಶ್ರೀ ಚಾರ್ಲ್ಸ್ ಡಿ'ಸೋಜಾ ರವರು ಕವನ ವಾಚನ ಮಾಡಿದರು.



# ಪತ್ರಿಕಾ ಮಾಧ್ಯಮಗಳೊಂದಿಗೆ ಅಕಾಡೆಮಿ

## ಅರೆಭಾಷೆ ಅಕಾಡೆಮಿಗೆ ಭದ್ರ ಬುನಾದಿ


**ಆಡಳಿತ ಮುಂದಳಿ ದಾಪುಗಾಲು । ಒಂದೂವರೆ ವರ್ಷಾವಧಿಯಲ್ಲಿ ಹಲವು ಕಾರ್ಯಕ್ರಮ**




**ಸಿಂಗಾರ ತ್ರೈಮಾಸಿಕ**

## ಅರೆಬಾಸೆ ಅಕಾಡೆಮಿ ಲಾಯಕ್ಕಾಗಿ ಸಾಗ್ತ ಉಟ್ಟು













## ಅರೆಭಾಷಾ ಅಕಾಡೆಮಿಯಿಂದ ಸಾಹಿತ್ಯ ಕೃಷಿ : ಪ್ರಥಮ ಬಾರಿಗೆ ಪುಸ್ತಕ ಪ್ರಕಟಣೆ

● ಆರಂಭಿಕವಾಗಿ ಹತ್ತು ಪುಸ್ತಕಗಳು ಲೋಕಾರ್ಪಣೆ ● ಸಂಸ್ಕೃತಿಯೊಂದಿಗೆ ಸಾಹಿತ್ಯಕ್ಕೂ ಒತ್ತು ನೀಡುವ ಪ್ರಯತ್ನ



# ಅನುದಾನ ಖಾಲಿ, ಚಟುವಟಿಕೆ ಸ್ಥಗಿತ

## ಕರ್ನಾಟಕ ಅರೆಭಾಷೆ ಸಂಸ್ಕೃತಿ, ಸಾಹಿತ್ಯ ಅಕಾಡೆಮಿಗೆ ವಿಶೇಷ ಅನುದಾನ ಅಗತ್ಯ



**ಕೊಡವ ಅಕಾಡೆಮಿಗೆ ಕೊರತೆ ಇಲ್ಲ**

### ಯಶಸ್ವಿ ಮೂರು ವರ್ಷಗಳ ಆಡಳಿತ ಪೂರೈಸಿದ ಕೊಡವ, ಗೌಡ ಅಕಾಡೆಮಿಗಳು



# ಭಾವಪೂರ್ಣ ಶ್ರದ್ಧಾಂಜಲಿ



ಅರೆಬಾಷೆ ಜನಪದ ಕ್ಷೇತ್ರದ ದಿಗ್ಗಜ,
ಕರ್ನಾಟಕ ಅರೆಬಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ಸದಸ್ಯ
ನಮ್ಮೊಂದಿಗಿದ್ದು, ಒಡನಾಡಿ
ಕಾಲನ ಕರೆಗೆ ಓಗೊಟ್ಟು ನಮ್ಮನ್ನಗಲಿದ

## ಮದುವೆಗದ್ದೆ ಬೋಜಪ್ಪಗೌಡ

ರವರಿಗೆ
ಭಾವಪೂರ್ಣ ಶ್ರದ್ಧಾಂಜಲಿ

– ಅಧ್ಯಕ್ಷರು ಹಾಗೂ ಸದಸ್ಯರು

भारत सरकार

GOVERNMENT OF INDIA

सत्यमेव जयते

भारत के समाचारपत्रों के पंजीयक का कार्यालय

OFFICE OF THE REGISTRAR OF NEWSPAPERS FOR INDIA

# पंजीयन प्रमाण–पत्र

# CERTIFICATE OF REGISTRATION

प्रमाणित किया जाता है कि प्रेस और पुस्तक पंजीकरण अधिनियम, 1867 के अन्तर्गत इस समाचारपत्र को पंजीकृत कर लिया है :

This is to certify that this newspaper has been registered under the Press and Registration of Books Act, 1867 :

| | |
|---|---|
| 1. समाचार पत्र का नाम<br>Title of the Newspaper | **HINGARA** |
| 2. समाचार पत्र की पंजीयन संख्या<br>Registration Number of the Newspaper | **KARARB/2016/69571** |
| 3. भाषा/भाषाएं, जिसमें/जिनमें समाचारपत्र प्रकाशित किया जाता है<br>Language/Languages in which it is published | AREBHASHE |
| 4. इसके प्रकाशन का नियतकाल तथा जिस दिन/दिनों/तिथियों को यह प्रकाशित होता है<br>Periodicity of its publication and the day/days/dates on which it is published | तिमाही QUARTERLY |
| 5. समाचारपत्र की फुटकर कीमत<br>Retail selling price of the newspaper | RS. 20/- |
| 6. प्रकाशक का नाम/Publisher's Name | UMARABBA |
| राष्ट्रीयता/Nationality | INDIAN |
| पता/Address | KARNATAKA AREBHASE SAMSKRUTHI MATHU SAHITHYA ACADEMY, COFFEE KRUPA BUILDING, IST FLOOR, RAJA SEAT ROAD, MUDIKERI, DIST. KODAGU, KARNTAKA |
| 7. मुद्रक का नाम/Printer's Name | UMARABBA |
| राष्ट्रीयता/Nationality | INDIAN |
| पता/Address | KARNATAKA AREBHASE SAMSKRUTHI MATHU SAHITHYA ACADEMY, COFFEE KRUPA BUILDING, IST FLOOR, RAJA SEAT ROAD, MUDIKERI, DIST. KODAGU, KARNTAKA |
| 8. सम्पादक का नाम/Editor's Name | UMARABBA |
| राष्ट्रीयता/Nationality | INDIAN |
| पता/Address | KARNATAKA AREBHASE SAMSKRUTHI MATHU SAHITHYA ACADEMY, COFFEE KRUPA BUILDING, IST FLOOR, RAJA SEAT ROAD, MUDIKERI, DIST. KODAGU, KARNTAKA |
| 9. जिस स्थान पर मुद्रण का काम होता है, उसका सही तथा ठीक विवरण<br>True and precise account at the premises where printing is conducted | SRI KRISHNA COMPUTERS & PRINTERS<br>POOJA ARCADE, MADIKERI, DIST. KODAGU, KARNATAKA |
| 10. प्रकाशन का स्थान<br>Place of publication | KARNATAKA AREBHASE SAMSKRUTHI MATHU SAHITHYA ACADEMY, COFFEE KRUPA BUILDING, IST FLOOR, RAJA SEAT ROAD, MUDIKERI, DIST. KODAGU, KARNTAKA |

दिनांक /Date: 7 DEC 2016

SMKhan

( एस. एम. खान S.M. KHAN)

भारत के समाचारपत्रों के पंजीयक

REGISTRAR OF NEWSPAPERS FOR INDIA

Owner(for reference):
KARNATAKA AREBHASE SAMSKRUTHI
MATHU SAHITHYA ACADEMY














## ಅರೆಭಾಷೆ ಸಂಸ್ಕೃತಿ ದಾಖಲೀಕರಣ

ಶ್ರೀ ಸಿರಿಗಂಧ ಶ್ರೀನಿವಾಸ, ಚಲನ ವಿಷ್ಯುವಲ್ಸ್, ಬೆಂಗಳೂರು ಇವರಿಂದ ಅರೆಭಾಷೆ ಸಂಸ್ಕೃತಿಯನ್ನು ಚಿತ್ರೀಕರಿಸಿ ತೆಗೆದ ಛಾಯಾಚಿತ್ರಗಳನ್ನು ಫ್ರೇಮ್ ಮಾಡುವ ಮುಖಾಂತರ ದಾಖಲೀಕರಣ ಮಾಡಲಾಯಿತು.












Ptd @ Sri Krishna Printers, Madikeri. Mob : 94481 35592